بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّى عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 14

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

07 ಏಪ್ರೆಲ್ 2022, 07 ಶಹಾದತ್ 1401 ತಬ್‌ಲೀಗ್ ಹಿಜರಿ ಶಮ್‌ಸಿ,
05 ರಮಝಾನ್ 1443 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِىْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اَيَّامًا مَّعْدُوْدٰتٍ ؕ فَمَنْ كَانَ مِنْكُمْ مَّرِيْضًا اَوْ عَلٰى سَفَرٍ فَعِدَّةٌ مِّنْ اَيَّامٍ اُخَرَ ؕ وَعَلَى الَّذِيْنَ يُطِيْقُوْنَهٗ فِدْيَةٌ طَعَامُ مِسْكِيْنٍ ؕ فَمَنْ تَطَوَّعَ خَيْرًا فَهُوَ خَيْرٌ لَّهٗ ؕ وَاَنْ تَصُوْمُوْا خَيْرٌ لَّكُمْ اِنْ كُنْتُمْ تَعْلَمُوْنَ (البقرة:185)

(ಅಲ್‌ಬಖರ : 185)

ಅಂದರೆ: (ಈ ಉಪವಾಸವನ್ನು) ಕೆಲವು ನಿರ್ದಿಷ್ಟ ದಿನಗಳಲ್ಲಿ ಅನುಷ್ಠಿಸಬೇಕಾಗಿದೆ. ಆದರೆ ನಿಮ್ಮಲ್ಲಿ ಯಾರಾದರೂ ರೋಗಿ ಅಥವಾ ಯಾತ್ರಿಕನಾಗಿದ್ದರೆ ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ಣಗೊಳಿಸಲಿ. (ಉಪವಾಸ ಮಾಡಲು ದೈಹಿಕ ನಿಶ್ಯಕ್ತಿಯಿದ್ದು ಆರ್ಥಿಕವಾಗಿ) ಸಮರ್ಥರಿದ್ದರೆ ಅವರು ಪ್ರಾಯಶ್ಚಿತ್ತವಾಗಿ ಒಬ್ಬ ನಿರ್ಗತಿಕನಿಗೆ ಆಹಾರವನ್ನು ನೀಡಬೇಕಾಗಿದೆ. ಇನ್ನು ಯಾರಾದರೂ ಪೂರ್ಣವಾದ ಅನುಸರಣೆಯನ್ನು ತೋರಿಸುತ್ತಾ ಏನಾದರೂ ಒಳಿತನ್ನು ಮಾಡುವುದಾದರೆ ಅದು ಆತನಿಗೆ ಉತ್ತಮ. ನೀವು ಗ್ರಹಿಸುವಿರಾದರೆ ವ್ರತಾನುಷ್ಠಾನ ನಿಮಗೆ ಗುಣಕರವಾಗಿದೆ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಹಝ್ರತ್ ರಸೂಲುಲ್ಲಾಹ್(ಸ) ರವರ ಮದೀನದೊಂದಿಗಿರುವ ಪ್ರೇಮ

**(1885)** ಹಝ್ರತ್ ಅನಸ್(ರ) ರವರು ನಬಿ(ಸ) ರವರಿಂದ ವರದಿ ಮಾಡುತ್ತಾರೆ ಪ್ರವಾದಿ(ಸ) ನುಡಿದರು. ಹೇ ನನ್ನ ಅಲ್ಲಾಹ್! ಮಕ್ಕಕ್ಕೆ ನೀಡಿದ ಕಾರುಣ್ಯಕ್ಕಿಂತ ಎರಡು ಪಟ್ಟು ಹೆಚ್ಚು ಕಾರುಣ್ಯಗಳನ್ನು ಮದೀನಕ್ಕೆ ನೀಡು.

**(1886)** ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ. ನಬಿ(ಸ) ಯಾವುದೇ ಪ್ರವಾಸದಿಂದ ಮದೀನಕ್ಕೆ ಮರಳಿ ಬರುವಾಗ, ಮದೀನದ ಗೋಡೆಗಳನ್ನು ನೋಡುತ್ತಲೇ ತನ್ನ ಒಂಟೆಗೆ ವೇಗ ನೀಡುತ್ತಿದ್ದರು ಮತ್ತು ಯಾವುದೇ ಪ್ರಾಣಿಯ ಮೇಲೆ ಇದ್ದರೂ ಅದನ್ನು ಸಹ ವೇಗವಾಗಿ ಓಡಿಸುತ್ತಾರೆ. ಇದು ಅವರಿಗೆ ಮದೀನದೊಂದಿಗೆ ಇರುವ ಪ್ರೇಮದ ಕಾರಣವೇ ಆಗಿತ್ತು.

**(1887)** ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ. ಬನು ಸಲ್ಮಾನ್ ತನ್ನ ಸ್ಥಳವನ್ನು ಬಿಟ್ಟು ಮದೀನದ ಸಮೀಪ ಬರಲು ಇಚ್ಛಿಸಿದರು. ಅದನ್ನು ರಸೂಲುಲ್ಲಾಹ್(ಸ) ಮದೀನದ ಯಾವ ಸ್ಥಳವು ಸಹ ಖಾಲಿ ಇರಬಾರದು ಎಂಬ ಉದ್ದೇಶದಿಂದ ಅದನ್ನು ಇಷ್ಟಪಡಲಿಲ್ಲ ಮತ್ತು ಹೇಳಿದರು. ಹೇ ಬನು ಸಲ್ಮಾ! ನೀವು ನಿಮ್ಮ ಹೆಜ್ಜೆಗಳ ದೂರ ಚಲಿಸುವ ಪುಣ್ಯ ಪಡೆಯ ಬಯಸುವುದಿಲ್ಲವೇ. ಆಗ ಅವರು ಅಲ್ಲೇ ವಾಸಿಸಿದರು.

* ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್(ರ) ನುಡಿಯುತ್ತಾರೆ ಉಹದ್ ಮಡಿಲಲ್ಲಿ ಎರಡು ಗೋತ್ರಗಳು ವಾಸಿಸುತ್ತಿದ್ದರು. ಬನೂ ಸಲ್ಮಾ ಮತ್ತು ಬನೂ ಹಾರ್‌ನಾ. ಪ್ರತಿಯೊಂದು ಕ್ಷೇತ್ರ ದಯಾರ್ ಬನೀ ಸಲ್ಮಾ ಮತ್ತು ದಯಾರ್ ಬನೀ ಹಾರ್‌ಸಾ ಹೆಸರಿನಿಂದ ಕರೆಯಲ್ಪಡುತ್ತಿದ್ದವು ಬನು ಸಲ್ಮಾ ಅವರು ಯಸ್ರಬ್ (ಮದೀನ) ಸಮೀಪಕ್ಕೆ ಬರಲು ಇಷ್ಟಪಡುತ್ತಿದ್ದರು ಅದರಿಂದ ನಮಾಝುಗಳಲ್ಲಿ ಭಾಗವಹಿಸಲು ಅನುಕೂಲವಾಗುತ್ತದೆ ಎಂದು. ಆದರೆ ರಕ್ಷಣಾ ದೃಷ್ಟಿಯಿಂದ ಹಝ್ರತ್ ರಸೂಲುಲ್ಲಾಹ್(ಸ) ಅವರಿಗೆ ಅವರ ಸ್ಥಳದಲ್ಲಿಯೇ ಇರಲು ಇಷ್ಟಪಟ್ಟರು.

**(ಸಹೀಹ್ ಬುಖಾರಿ, ಸಂಪುಟ–3, ಕಿತಾಬುಲ್ ಹಜ್ಜ್, ಮುದ್ರಣ ಖಾದಿಯಾನ್)**

## ಮುಸಲ್ಮಾನರು ಇಲ್ಲಿಯವರೆಗೂ ಮಸೀಹರ ಆಗಮನ ಏಕೆ ಆಗಲಿಲ್ಲ ಎಂದು ವ್ಯಾಕುಲತೆಯಿಂದ ಹುಡುಕಾಡುತ್ತಾ ತಿರುಗಬೇಕಾಗಿತ್ತು.

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ತ್ರಿತ್ವ ವಾದ ಹದ್ದು ಮೀರಿ ಬಿಟ್ಟಿದೆ. ಒಬ್ಬ ಸತ್ಯವಂತನ ಅವಹೇಳನವು ಮೀತಿಮೀರಿದೆ. ರಸೂಲುಲ್ಲಾಹ್(ಸ) ರವರ ಗೌರವ ನೊಣ ಮತ್ತು ಜೇನಿನ ನೊಣದಷ್ಟು ಸಹ ಮಾಡಲಿಲ್ಲ. ಜೇನಿನ ನೊಣದಿಂದಲೂ ಮನುಷ್ಯನು ಹೆದರುತ್ತಾನೆ ಮತ್ತು ಇರುವೆಯಿಂದಲೂ ಸಹ ಭಯಪಡುತ್ತಾನೆ. ಆದರೆ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಹೀಯಾಳಿಸಲು ಹೆದರುವುದಿಲ್ಲ. **ಕಝ್ಝುಬೂ ಬಿ ಆಯಾತಿನ** ರೀತಿ (ಅಲ್ಲಾಹನ ವಚನಗಳನ್ನು ಧಿಕ್ಕರಿಸುವಂತೆ) ಆಗಿ ಬಿಟ್ಟಿದ್ದಾರೆ. ಅವರು ಎಷ್ಟು ಬೇಕಾದರೂ ಬಾಯಿ ತೆರೆದು ಬೇಕಾಬಿಟ್ಟಿ ಚೀರಾಡಲಿ, ಈಗ ಅದನ್ನು ನಿವಾರಿಸುವ ಸಮಯ ದಿಟವಾಗಿಯೂ ಅಲ್ಲಾಹನು ತರುವನು. ಅಂತಹ ಸಮಯದಲ್ಲಿ ಯಾವಾಗಲು ಅವನು ಒಬ್ಬ ಅವತಾರ ಪುರುಷರ ಜನ್ಮ ವಾಗುತ್ತದೆ. **ವ ಲನ್ ತಜಿದ ಲಿಸುನ್ನತಿಲ್ಲಾಹಿ ತಬ್ದೀಲಾ** ಅವನು ತನ್ನ ಪ್ರತಾಪ ಮತ್ತು ಗೌರವ ಅಭಿವ್ಯಕ್ತಗೊಳಿಸುವಂತಹ ಉತ್ಸಾಹಿ ಮನುಷ್ಯನಿಗೆ ಜನ್ಮ ನೀಡುತ್ತಾನೆ. ಅವನಿಗೆ ಆಧ್ಯಾತ್ಮ ರೀತಿಯ ಸಹಾಯ ಒದಗಿ ಬರುತ್ತದೆ. ವಾಸ್ತವವಾಗಿ ಅಲ್ಲಾಹನು ಸ್ವಯಂ ಎಲ್ಲವೂ ಮಾಡುವನು. ಆದರೆ ಅವನು ಒಬ್ಬನನ್ನು ಕಳುಹಿಸುವುದು ಅವನ ವಿಧಿ (ಸುನ್ನತ್) ಆಗಿದೆ. ಈಗ ಆ ಕಾಲಘಟ್ಟ ಬಂದಿದೆ. ಅಲ್ಲಾಹನು ಕ್ರೈಸ್ತರಿಗೆ ಪವಿತ್ರ ಖುರ್‌ಆನ್‌ನಲ್ಲಿ ಉಪದೇಶಿಸಿದನು. ತಮ್ಮ (ಧರ್ಮದಲ್ಲಿ ಬಾಲಿಶತನವನ್ನು ತೋರಿಸಬೇಡಿ ಎಂದು. ಆದರೆ ಅವರು ಈ ಉಪದೇಶದಂತೆ ನಡೆದುಕೊಳ್ಳಲಿಲ್ಲ ಅವರು ಮೊದಲು **"ಧ್ವಾಲ್ಲೀನ್"** (ದಾರಿ ತಪ್ಪಿದವರಾಗಿದ್ದರು). ಈಗ ದಾರಿ ತಪ್ಪಿಸುವವರು ಸಹ ಆಗಿ ಬಿಟ್ಟಿದ್ದಾರೆ. ಅಲ್ಲಾಹನು ಕಳುಹಿಸಿದ ಗ್ರಂಥಗಳನ್ನು ಅವಲೋಕಿಸಿದರೆ ತಿಳಿದುಬರುತ್ತದೆ. ಪರಿಸ್ಥಿತಿಗಳು ಹದ್ದು ಮೀರಿ ಹೊದಾಗ ಆಕಾಶದಲ್ಲಿ ಅದರ ಪರಿಹಾರಕ್ಕಾಗಿ ಸಿದ್ಧತೆ ನಡೆಯುತ್ತದೆ. ಅದೇ ಅವನ ದೃಷ್ಟಾಂತವಾಗಿದೆ. ಇದು ಸಿದ್ಧತೆಯ ಕಾಲಘಟ್ಟವಾಗಿದೆ. ಒಬ್ಬ ಸತ್ಯವಂತ ಪ್ರವಾದಿಯ ಸಂದೇಶವಾಹಕನ ಉದ್ಧಾರಕನ ಮಹತ್ತರವಾದ ದೃಷ್ಟಾಂತವು ತನ್ನ ಸಮಯಕ್ಕೆ ಸರಿಯಾದ ಆಗಮನವಾಗಿರುತ್ತದೆ. ಜನರು ಆಣೆ ಮಾಡಿ ಹೇಳಲಿ. ಇದು ಆಕಾಶದಲ್ಲಿ ಸಿದ್ಧತೆ ನಡೆಸುವ ಸಮಯವಲ್ಲವೆ. ಆದರೆ ನೆನಪಿಡಲಿ ಅಲ್ಲಾಹನು ಸ್ವಯಂ ಎಲ್ಲಾ ಕಾರ್ಯಗಳನ್ನು ಕೈಗೊಳ್ಳುತ್ತಾನೆ. ನಾವು ಮತ್ತು ನಮ್ಮ ಜಮಾಅತಿನವರೆಲ್ಲರೂ ಸೇರಿ ಒಂದು ಕೋಣೆಯಲ್ಲಿ ಕುಳಿತುಕೊಂಡರೂ ಆಗುವ ಕೆಲಸ ಆಗಿಯೇ ತೀರುತ್ತದೆ. ದಜ್ಜಾಲನಿಗೆ ಅವನತಿ ಬಂದೇ ಬರುವುದು. **"ತಿಲ್‌ಕಲ್ ಅಯ್ಯಾಮು ನುದಾವಿಲುಹಾ ಬೈನನ್ನಾಸಿ"** (ಅಲ್ ಇಮ್ರಾನ್–41) ಅವರ ಹದ್ದು ಮೀರುವಿಕೆ ಈಗ ಅವರ ಅವನತಿಯನ್ನು ಸೂಚಿಸುತ್ತದೆ. ಅದರ ಚಲನೆಯಿಂದ ಅವರ ಅಧೋಗತಿ ತಿಳಿದುಬರುತ್ತದೆ. ಅವರ ಜನಸಂಖ್ಯೆ ಅವರ ವಿನಾಶದ ಕುರುಹಾಗಿದೆ. ಹೌದು ತಂಪು ಗಾಳಿಯು ಬೀಸತೊಡಗಿದೆ. ಅಲ್ಲಾಹನ ಕಾರ್ಯಗಳು ನಿಧಾನವಾಗಿಯೇ ಮುಂದುವರೆಯುತ್ತದೆ.

ತಮ್ಮ ಬಳಿ ಯಾವುದೇ ಪುರಾವೆಗಳು ಇಲ್ಲದಿರುತ್ತಿದ್ದರೂ ಮುಸಲ್ಮಾನರು ಮಸೀಹರು ಇಲ್ಲಿಯ ತನಕ ಏಕೆ ಆಗಮಿಸಲಿಲ್ಲ? ಎಂದೂ ವ್ಯಾಕುಲತೆಯಿಂದ ಹುಡುಕಾಡಬೇಕಾಗಿತ್ತು. ಅವನು ಶಿಲುಬೆಯನ್ನು ಮುರಿಯಲು ಬರಬೇಕಾಗಿದೆ. ತಮ್ಮ ಜಗಳಗಳ ನಿವಾರಣೆಗಾಗಿ ಅವರನ್ನು ಕರೆಯಿಸ ಬೇಕಾಗಿರಲಿಲ್ಲ. ಅವರ

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

**ಯಾರನ್ನು ನೀವು ಪೂಜಿಸುತ್ತಿದ್ದೀರಿ. ಅವರೆಲ್ಲರೂ ಮರಣ ಹೊಂದಿರುವರು. ಹಾಗಿರುವಾಗ ಅವರು ಹೇಗೆ ನಿಮಗೆ ಮಾರ್ಗದರ್ಶಕರಾಗಿರುವರು? ಸೃಷ್ಟಿಕರ್ತನಾಗುವ ಹೊರತಾಗಿ ಮಾರ್ಗದರ್ಶನ ನೀಡುವವನಿಗೆ ಜೀವಂತವಾಗಿರುವುದು ಸಹ ಅನಿವಾರ್ಯವಾಗಿರುತ್ತದೆ. ಏಕೆಂದರೆ ಕುಂದು ಕೊರತೆ ಉಂಟಾದಾಗಲೆಲ್ಲ ಮುಂಜಾಗ್ರತೆ ವಹಿಸಿದಂತಾಗುವುದು.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ಅ) ಸೂರಃ ಅನ್ನಹಲ್ ವಚನ 21, 22 **ವಲ್ಲಝೀನ ಯದ್‌ಊನ ಮಿನ್ ದೂನಿಲ್ಲಾಹಿ ಲಾ ಯಖ್ಲುಖೂನ ಶೈಅವ್ವಹುಮ್ ಯುಖ್ಲಖೂನ್. ಅಮ್ವಾತುನ್ ಗೈರು ಅಹ್ಯಾಇಂ, ವಮಾ ಯಶ್‌ಉರೂನ್, ಅಯ್ಯಾನ ಯುಬ್‌ಅಸೂನ್** ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ. ಅದೃಶ್ಯ ಜ್ಞಾನ ಸೃಷ್ಟಿಕರ್ತನ ಹೊರತು ಪಡೆಯಲು ಸಾಧ್ಯವಿಲ್ಲ. ಏಕೆಂದರೆ ಸೃಷ್ಟಿಕರ್ತನಾದವನೇ ತನ್ನ ಸೃಷ್ಟಿಯೊಡನೆ ಏನೆಲ್ಲ ಶಕ್ತಿಗಳಿವೆ. ಸಾಮರ್ಥ್ಯಗಳಿವೆ ತಿಳಿಯಬಲ್ಲನು. ಬೇರೊಬ್ಬರು ಅರಿಯಲು ಸಾಧ್ಯವಿಲ್ಲ.

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ✿ شَرُّ السُّمُوْمِ عَدَاوَةُ الصُّلَحَاءِ

**ಸಹೀ ಹದೀಸ್ ಒಂದೆಡೆ ಇರಲಿ, ಒಂದು ದುರ್ಬಲ ಹದೀಸಿನಿಂದಾದರೂ "ಹಝ್ರತ್ ಈಸಾ ಶರೀರದೊಂದಿಗೆ ಆಕಾಶಕ್ಕೆ ಹೋದರು ಮತ್ತು ಭೂಮಿಗೆ ಮರಳಿ ಬರುವರು ಎಂದು ಪ್ರಸ್ತುತಪಡಿಸಿದರೆ ನಾವು ಆ ವ್ಯಕ್ತಿಗೆ ಇಪ್ಪತ್ತು ಸಾವಿರ ರೂಪಾಯಿ ದಂಡ ಕಟ್ಟುವೆವು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾದ ಪಂಥಾಹ್ವಾನ ನಾವು ಅವರ ಗ್ರಂಥ **"ಕಿತಾಬುಲ್ ಬರಿಯಾ"** ರೂಹಾಹಿ ಖಝಾಯಿನ್ ಸಂಪುಟ 3 ರಿಂದ ಪ್ರಸ್ತುತಪಡಿಸುತ್ತಿದ್ದೆವೆ. ಹಝ್ರತ್ ಈಸ(ಅ) ರವರ ಜೀವಂತವಾಗಿ ಶರೀರ ಸಮೇತ ಆಕಾಶಕ್ಕೆ ಹೋಗಿರುವುದು ಮತ್ತು ಅಂತಿಮ ಕಾಲದಲ್ಲಿ ಮರಳಿ ಭೂಮಿಗೆ ಬರುವುದು, ಖುರ್‌ಆನ್ ಮತ್ತು ಹದೀಸುಗಳಿಂದ ಸಾಬೀತಾಗಿಲ್ಲ, ಬದಲು ಪವಿತ್ರ ಖುರಆನ್‌ನ ಹಲವು ವಚನಗಳಿಂದ ಮತ್ತು ಹದೀಸುಗಳಿಂದ ಹಝ್ರತ್ ಈಸಾ(ಅ) ರವರ ಮರಣ ಹೊಂದಿದ್ದು ಸಾಬೀತಾಗಿದೆ. ಖುರ್‌ಆನ್ ಮತ್ತು ಹದೀಸ್ ಹಾಗೂ ಮಹಾಪುರುಷರ ನುಡಿಗಳಿಂದಲೂ ಮಸೀಹರ ನಿಧನ ಎಷ್ಟು ಸ್ಪಷ್ಟವಾಗಿ ದೃಢಪಟ್ಟಿದೆ ಎಂದರೆ ಅದನ್ನು ಒಪ್ಪದಿರುವುದು ಆಶ್ಚರ್ಯಕರ ವಿಷಯವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಪದೇ ಪದೇ ಮುಸಲ್ಮಾನರಿಗೆ ಈ ಕಡೆ ಗಮನ ಸೆಳೆದಿದ್ದಾರೆ. ಅದೇ ತರಹದ ಒಂದು ಉದಾಹರಣೆ ಯಹೂದಿಯರಲ್ಲಿಯೂ ನಮಗೆ ಕಾಣಸಿಗುತ್ತದೆ. ಅದರಿಂದಾದರೂ ನಮಗೆ ಪಾಠ ಕಲಿಯಬೇಕಾಗಿದೆ. ಮೂಸನಬಿಯ ಗ್ರಂಥದಲ್ಲಿ ಈ ಭವಿಷ್ಯವಾಣಿ ನುಡಿಯಲಾಗಿತ್ತು. ಮಸೀಹರು ಅವತರಿಸುವ ಮೊದಲು ಈಲಿಯಾ ನಬಿ ಅವತರಿಸುವರು. ಹಝ್ರತ್ ಈಸಾ(ಅ) ರವರಿಗೆ ಯಹೂದಿಯರು ಈ ಪ್ರಶ್ನೆ ಕೇಳಿದರು. ನೀವು ಮಸೀಹರಾಗುವ ದಾವೆ ಮಾಡುತ್ತಿದ್ದೀರಿ, ನಿಮಗಿಂತ ಮೊದಲು ಈಲಿಯಾ ಅವರು ಆಕಾಶದಿಂದ ಬರಬೇಕಾಗಿತ್ತು. ಅವರೆಲ್ಲಿದ್ದಾರೆ? ಈಲಿಯಾ ಅವರು ಆಕಾಶದಿಂದ ಬಂದ ಮೇಲೆ ನಿಮ್ಮ ದಾವೆ ಸತ್ಯ ಎಂದಾಗುವುದು. ಆಗ ಹಝ್ರತ್ ಮಸೀಹರು ಅವರಿಗೆ ಕೊಟ್ಟ ಉತ್ತರ ಹೀಗಿತ್ತು. ಇವರು ಯೋಹನಾ ಅಂದರೆ ಯಾಹ್ಯಾ ಅವರೇ ಆ ಈಲಿಯಾ. ಹಾಗೆ ಹಝ್ರತ್ ಈಸಾ(ಅ) ಆಕಾಶದಿಂದ ಅವತರಿಸುವ ವಿಷಯ ಬಿಚ್ಚಿ ಹೇಳಿದರು. ಅಂದರೆ ಅವತರಿಸುವ ವಿಷಯ ಆಧ್ಯಾತ್ಮಿಕ ರೀತಿಯಲ್ಲಾಗಿದೆ. ಅಂದರೆ ಈ ಭೂಮಿಯ ಮೇಲೆಯೇ ಅವರ ಸಾದೃಶ್ಯರೂಪ ಹೊಂದಿದವರಾದ ಒಬ್ಬರು ಆಗಮಿಸುವರು ಎಂದು. ಆದುದರಿಂದ ಮುಸಲ್ಮಾನರು ಈ ಉದಾಹರಣೆಯಿಂದ ಪಾಠ ಕಲಿಯಬೆಕಾಗಿದೆ, ಆಗ ಅವರು ಯಹೂದಿಯರ ರೀತಿಯಲ್ಲಿ ಮೋಸ ಹೋಗುವುದರಿಂದ ಉಳಿಯಬಹುದು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಹಝ್ರತ್ ಈಸಾ(ಅ) ನಿಧನ ಹೊಂದಿರುವರು, ಮತ್ತೆ ಅವರು ಇಹಲೋಕಕ್ಕೆ ಮರಳಿ ಬರಲಾರರು ಅವರ ಸಾದೃಶ್ಯರೂಪ ಹೊಂದಿದವರ ಆಗಮನ ಅನಿವಾರ್ಯವಾಗಿದೆ ಎಂಬ ವಿಷಯ ಅಲ್ಲಾಹನು ಎಷ್ಟೊಂದು ವಿವರವಾಗಿ ತಿಳಿಸಿದ್ದಾನೆಂದರೆ, ಈ ತರಹದ ವಿವರಣೆ ಮಲಾಕಿ ನಬಿಯ ಗ್ರಂಥದಲ್ಲಿರುತ್ತಿದ್ದರೆ ಯಹೂದಿಯರು ಖಂಡಿತವಾಗಿಯೂ ನಾಶ ಹೊಂದುತ್ತಿರಲಿಲ್ಲ. ಆದುದರಿಂದ ಅಲ್ಲಾಹನ ಗ್ರಂಥವಾದ ಪವಿತ್ರ ಖುರ್‌ಆನ್‌ನಲ್ಲಿ ಅಷ್ಟೊಂದು ಉಲ್ಲೇಖಗಳಿದ್ದರೂ ಮತ್ತೆ ಹಝ್ರತ್ ಈಸಾ(ಅ) ಮರಳಿ ಬರುವರು ಎಂಬ ನಿರೀಕ್ಷೆಯಲ್ಲಿದ್ದರೆ ನಿಸ್ಸಂಶಯವಾಗಿಯೂ ಅವರು ಯಹೂದಿಯರಿಗಿಂತಲೂ ನಿಕೃಷ್ಟರು ಎನ್ನಬಹುದು. (ತರಝ್ಕಿರತುಶ್ಯಹಾದತೈನ್, ರೂಹಾನಿ ಖಝಾಈನ್, ಸಂಪುಟ–20, ಪುಟ–21)

ಇಲ್ಲಿ ನಾವು ಈ ವಿಷಯವನ್ನು ಹೆಚ್ಚು ಉದ್ದಕ್ಕೆ ಎಳೆಯದೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ವೈಭವಯುತವಾದ ಬಹುಮಾನದ ಪಂಥಾಹ್ವಾನ ಮತ್ತು ಈ ಕುರಿತು ಅವರ ಅಧ್ಯಾಪನೆಗಳನ್ನು ಪ್ರಸ್ತುತಪಡಿಸುತ್ತೇವೆ.

**ಹಝ್ರತ್ ಈಸಾ(ಅ) ರವರ ಆಕಾಶದಿಂದ ಅವತರಿಸುವ ಮೌಲ್ವಿಗಳ ಆಶಯ ಎಂದೂ ಪೂರ್ತಿಯಾಗುವುದಿಲ್ಲ.**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ. ನಮ್ಮ ಮತಪಂಡಿತರು (ಉಲಮಾಅ) ಈಲಿಯಾ ಮರು ಬರುವಿಕೆಯ ಕಥೆಯನ್ನು ನೆನಪಿಸಿಕೊಂಡು ಅದರಿಂದ ಪಾಠ ಕಲಿತು ಹಝ್ರತ್ ಈಸಾ(ಅ) ರವರ ಮರಳಿ ಅವತರಿಸುವ ಅರ್ಥ ಸ್ವಯಂ ಹಝ್ರತ್ ಈಸಾ(ಅ) ರವರು ಈಲಿಯಾ ನಬಿಯ ಮರುಬರುವಿಕೆಯ ವಿಷಯದಲ್ಲಿ ಮಾಡಿದಂತಹ ಅರ್ಥವೇ ಮಾಡುತ್ತಿದ್ದರೆ ಎಷ್ಟೋ ಭಾಗ್ಯವಂತರಾಗುತ್ತಿದ್ದರು. ಅಕ್ಟಕ್ಟಾ! ಅವರು ಈ ಮಾತನ್ನು ಯೋಚಿಸುವಂತಾಗಬೇಕು. ನಾನು ಮಸೀಹರು ಅವತರಿಸುವ ವಿಷಯದಲ್ಲಿ ಕೊಟ್ಟ ವಿವರ ಹೊಸತನದ್ದೇನಲ್ಲ, ಬದಲು ಅದು ಹಝ್ರತ್ ಈಸಾ(ಅ) ರವರ ನಾಲಿಗೆಯಿಂದ ಹೊರಟ ಅರ್ಥವೇ ಆಗಿರುತ್ತದೆ. ಆದುದರಿಂದ ಯಾವ ರೀತಿ ಯಹೂದಿಯರ ಆಶಯ ಇಂದಿನವರೆಗೂ ಪೂರ್ತಿಯಾಗಲಿಲ್ಲ.

ಈಲಿಯಾ ನಬಿ ಆಕಾಶದಿಂದ ಅವತರಿಸಬೇಕು ಎನ್ನುವುದು, ಅದೇ ಕಾರಣದಿಂದ ಅವರು ಹಝ್ರತ್ ಈಸಾ(ಅ) ರವರ ಮೇಲೆ ವಿಶ್ವಾಸ ತರುವ ವಿಷಯದಲ್ಲಿ ವಂಚಿತರಾದರು. ಅದೇ ರೀತಿ ಈ ಮೌಲ್ವಿಗಳ ಆಶಯವು ಸಹ ಪೂರ್ಣಗೊಳ್ಳುವುದಿಲ್ಲ. ಯಾವುದೇ ಸಮಯದಲ್ಲಿ ಹಝ್ರತ್ ಈಸಾ (ಅ) ಸ್ವಯಂ ಆಕಾಶದಿಂದ ಅವತರಿಸುವರು ಎಂಬುದು. ಇನ್ನೊಬ್ಬರು ಎಡವಿದ್ದು ನೋಡಿ ಪಾಠ ಕಲಿತವನೆ ಜಾಣನು. ಯಹೂದಿಯರು ಹಝ್ರತ್ ಈಸಾ (ಅ) ರವರನ್ನು ನಂಬುವುದರಿಂದ ವಂಚಿತರಾಗಲು ಕಾರಣ--- ಮಲಾಕಿ ನಬಿ ಅವರ ಭವಿಷ್ಯವಾಣಿಯಂತೆ ಈಲಿಯಾನಬಿ ಮರಳಿ ಬಂದ ನಂತರವೇ ಮಸೀಹರ ಆಗಮನವಾಗಬೇಕಿತ್ತು ಎಂಬುದೇ ಆಗಿತ್ತು. ಏಕೆಂದರೆ ಆ ಭವಿಷ್ಯವಾಣಿ ಹಾಗೆಯೇ ಬರೆಯಲಾಗಿತ್ತು. (ಕಿತಾಬುಲ್ ಬರಿಯಾ, ರೂಹಾನಿ ಖಝಾಈನ್, ಸಂಪುಟ–13, ಪುಟ–213ರ ಟಿಪ್ಪಣಿ)

**ಸಹೀ ಬುಖಾರಿ ಮತ್ತು ಮುಸ್ಲಿಂ ಹದೀಸಿನ ಪ್ರಕಾರ ಆಗಮಿಸುವ ಮಸೀಹರು ಮುಹಮ್ಮದಿ ಸಮುದಾಯದ ಪೈಕಿಯೇ ಆಗಿರುವರು.**

ಅಂತೂ ಆ ಒಂದು ಮೊಕದ್ದೊಮೆ–ಮಸೀಹ್ ಮೌಊದ್(ಅ) ರವರ ಆಗಮನ ಮತ್ತು ಇತರ ಕುರುಹುಗಳನ್ನು ಆ ಮೊಕದ್ದೊಮೆ ಸ್ಪಷ್ಟಗೊಳಿಸಿದೆ. ನ್ಯಾಯವಂತರಿಗೆ ಈರಿಯಾ ನಬಿಯರ ಅವತರಣಿಕೆ, ಮಸೀಹರ ಅವತರಣಿಕೆಗೆ ಒಂದು ಉತ್ತಮ ಉದಾಹರಣೆಯಾಗಿತ್ತು. ಆದರೆ ದ್ವೇಷವು ಮನುಷ್ಯನನ್ನು ಅಂಧನನ್ನಾಗಿ ಮಾಡುತ್ತದೆ. ಹೆಚ್ಚಿನ ಆಶ್ಚರ್ಯದ ಮಾತೆಂದರೆ ಸಹೀ ಬುಖಾರಿಯಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. **ಇಮಾಮುಕು ಮಿನ್‌ಕುಮ್** ಅಂದರೆ ಆ ಮಸೀಹನು ಅದೇ ಸಮುದಯದ ಪೈಕಿಯಾಗಿರುವನು ಎಂದು. ಅದೇ ರೀತಿ ಸಹೀ ಮುಸ್ಲಿಮ್‌ನಲ್ಲಿ ಬರೆಯಲಾಗಿದೆ. **ಫಅಮ್ಮುಕುಂ ಮಿನ್‌ಕುಂ** ಅಂದರೆ ಆ ವಾಗ್ದತ್ತ ಮಸೀಹನು ನಿಮ್ಮ ಜನಾಂಗೀಯ ಪೈಕಿಯೇ ಆಗಿರುವನು ಮತ್ತು ಅವನು ನಿಮ್ಮ ಇಮಾಮನಾಗುವನು. ಈ ಮಾತುಗಳು ನಿಮಗೆ ಸಮಾಧಾನ ನೀಡಲು ಸಾಕಾಗುವುದಿಲ್ಲವೇ? ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಈಸಾ (ಅ) ರವರು ನಿಧನಗೊಂಡಿರುವರು ಎಂಬ ವಿವರಣೆ ನಿಮಗೆ ಸಮಾಧಾನ ತರುವುದಿಲ್ಲವೇ? ಹದೀಸುಗಳಲ್ಲಿ ಅವರ ಪ್ರಾಯ 120 ವರ್ಷಗಳು ಎಂದು ನಮೂದಿತವಾಗಿದೆ. ಅಂದರೆ ಅವರು 120 ವರ್ಷಗಳಲ್ಲಿ ನಿಧನಗೊಂಡರು ಎಂದು. **"ತವಫ್ಫಾ"** ಅರ್ಥ ಮರಣ ನೀಡುವುದು ಎಂದಾಗಿದೆ. ವಚನ **ಫಲಮ್ಮಾ ತವಫ್ಫೈತನಿ** ನಿಚ್ಚಳಗೊಳಿಸಿದೆ. ಹಝ್ರತ್ ಈಸಾ (ಅ) ನಿಧನಗೊಂಡಿರುವರು ಎಂದು. ಈ ಮೊದಲು ಘಟಿಸಿದ ಜಗಳ–ಅದು ಯಹೂದಿಯರ ಮತ್ತು ಹಝ್ರತ್ ಈಸಾ(ಅ) ರವರಲ್ಲಿ ಉಂಟಾದುದು. ಈರಿಯಾ ನಬಿ ಅವತರಿಸುವ ಕುರಿತು ಯಾವನಾದರೂ ಒಬ್ಬ ಮುಸ್ಲಿಮನು ಆ ವಿಷಯದಲ್ಲಿ ಯಹೂದಿಯರನ್ನು ಸತ್ಯವಾದಿ ಎಂದು ಹೇಳುವರೆ. ಆದುದರಿಂದ ಲೋಕದಲ್ಲಿ ಮರು ಅವತರಣೆಯ ಅರ್ಥ ಓರ್ವ ನಬಿ ಆದವರು ಅಂದರೆ ನಾವು ಹಝ್ರತ್ ಈಸಾ (ಅ) ಅವತರಣಿಕೆ ವಿಷಯದಲ್ಲಿ ಹೇಳಿದ ಅರ್ಥವೇ ಸತ್ಯ ಎಂದು ನಂಬುತ್ತೇವೆ. ಆದರೆ ನಮ್ಮ ವಿರೋಧಿ ಮೌಲ್ವಿಗಳು ಮಾಡುವಂತಹ ಅರ್ಥಗಳಿಗೆ ಯಾವ ಸನದು ಇಲ್ಲ. (ಅದೇ ಪುಟ 219 ಟಿಪ್ಪಣಿ)

**ನಮ್ಮ ವಿರೋಧಿಗಳು ಪ್ರಸ್ತುತಪಡಿಸುವಂತಹ ವಿಶ್ವಾಸದ ಉದಾಹರಣೆ ಎಲ್ಲಾ ಪ್ರವಾದಿಗಳ ಸಂಘಟನೆಗಳಲ್ಲಿ ಜಾಲಾಡಿದರೂ ದೊರೆಯದು.**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್ (ಅ) ನುಡಿದರು.

ಈ ಮಾತು ಯೋಚಿಸಲು ಯೋಗ್ಯವಾಗಿದೆ. ನಾವಂತೂ ಹಿಂದಿನ ಗ್ರಂಥಗಳಲ್ಲಿ ಆಧಾರವಾಗಿದ್ದ ವಿಷಯಗಳನ್ನು ಪ್ರಸ್ತುತಪಡಿಸುತ್ತೇವೆ. ಅದನ್ನು ಖುರ್‌ಆನ್ ಸಹ ದೃಢಪಡಿಸುತ್ತದೆ. ಆದರೆ ನಮ್ಮ ವಿರೋಧಿಗಳು ಹಝ್ರತ್ ಈಸಾ (ಅ) ರವರ ಮರಳಿ ಅವತರಿಸುವ ಕುರಿತು ಪ್ರಸ್ತುತಪಡಿಸುವಂತಹ ಉದಾಹರಣೆ ಎಲ್ಲಾ ಪ್ರವಾದಿಗಳ ಸಂಘಟನೆಗಳಲ್ಲಿ ಜಾಲಾಡಿದರೂ ದೊರೆಯದು. ಮತ್ತು ಖುರ್‌ಆನ್ ಅದನ್ನು ಧಿಕ್ಕರಿಸುತ್ತದೆ. ನಮ್ಮ ವಿರೋಧಿಗಳ ತಮ್ಮ ಅಜ್ಞಾನತೆಯಿಂದಾಗಿ ಹಝ್ರತ್ ಈಸಾ (ಅ) ರವರ ಅವತರಣಿಕೆಯನ್ನು ಯಥಾವತ್ತಾಗಿ ನಿರೀಕ್ಷಿಸುತ್ತಿದ್ದಾರೆ ಮತ್ತು ನಾವು ಸಾದೃಶ್ಯರೂಪದಲ್ಲಿ ನಂಬುತ್ತೇವೆ. ಅದು ಎಲ್ಲ ಸಜ್ಜನರ ಒಪ್ಪಿತ ಧರ್ಮವಾಗಿದೆ. ಆ ಪ್ರಕಾರ ನಾವು ಮಸೀಹರ ಆಗಮನದ ಭವಿಷ್ಯವಾಣಿ ಪೂರ್ಣಗೊಂಡಿದೆ ಎಂದು ನಂಬುತ್ತೇವೆ. (ಅದೇ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ನಿಸ್ಸಂಶಯವಾಗಿಯೂ ಹಝ್ರ‌ತ್ ಪೈಗಂಬರ್(ಸ)ರಿಗೆ ಸನ್ಮಾರ್ಗವನ್ನು ತೋರಿಸಿದ ಗ್ರಂಥವನ್ನು ಅಲ್ಲಾಹನು ನಮಗೆ ನೀಡಿರುವನು. ನೀವು ಅದನ್ನು ದೃಢವಾಗಿ ಹಿಡಿದರೆ ಅಲ್ಲಾಹನು ನಿಮಗೂ ಮಾರ್ಗದರ್ಶನವನ್ನು ನೀಡುವನು. ಹಝ್ರ‌ತ್ ಪೈಗಂಬರ್(ಸ)ರಿಗೆ ಸನ್ಮಾರ್ಗವನ್ನು ನೀಡಿದಂತೆ**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರ‌ತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್‌ರತ್ ಅಬುಬಕರ್ ಸಿದ್ದಿಕ್(ರ) ಅವರ ಖಿಲಾಫತ್ ನಾಲ್ಕು ಖಲೀಫ ರಾಶಿದಾಗಳಲ್ಲಿ ಚಿಕ್ಕದಾಗಿದೆ, ಇದು ಸುಮಾರು ಎರಡೂವರೆ ವರ್ಷಗಳ ಕಾಲ ನಡೆಯಿತು ಆದರೆ ಈ ಅಲ್ಪಾವಧಿಯು ನೀತಿವಂತ ಖಿಲಾಫತೆ ರಾಶಿದದ ಅತ್ಯಂತ ಪ್ರಮುಖ ಮತ್ತು ಸುವರ್ಣ ಯುಗ ಎಂದು ಕರೆಯಲು ಅರ್ಹವಾಗಿದೆ ಏಕೆಂದರೆ ಹಝ್ರ‌ತ್ ಅಬೂಬಕರ್(ರ)ರಿಗೆ ಅತ್ಯಂತ ಹೆಚ್ಚು ಅಪಾಯಗಳನ್ನು ಮತ್ತು ವಿಪತ್ತುಗಳನ್ನು ಎದುರಿಸಬೇಕಾಗಿ ಬಂದಿತ್ತು. ಆದರೆ ಅಲ್ಲಾಹನ ಅಸಾಧಾರಣವಾದ ಸಹಾಯ ಮತ್ತು ನೆರವುಗಳ ಕಾರಣದಿಂದ ಹಝ್ರ‌ತ್ ಅಬೂಬಕರ್(ರ)ರ ಶ್ರೇಷ್ಠವಾದ ಧೈರ್ಯ, ಶೌರ್ಯ, ವಿವೇಕ ಮತ್ತು ತೀಕ್ಷ್ಣಗ್ರಹಿಕೆಯಿಂದ ಸ್ವಲ್ಪ ಕಾಲದಲ್ಲೇ ಭಯ ಮತ್ತು ಅಪಾಯಗಳ ಎಲ್ಲ ಮೋಡಗಳು ಚದುರಿಹೋದುವು ಮತ್ತು ಎಲ್ಲ ಭಯಗಳು ಸಮಾಧಾನವಾಗಿ ಮಾರ್ಪಾಡಾದುವು. ದಂಗೆ ಮತ್ತು ದಂಗೆಕೋರರನ್ನು ನಿಗ್ರಹಿಸಲಾಯಿತು ಮತ್ತು ಖಿಲಾಫತ್ತಿನ ಅಲುಗಾಡುವ ಅಮಾರತ್ತನ್ನು ದೃಢವಾದ ಅಡಿಪಾಯದಲ್ಲಿ ಸ್ಥಾಪಿಸಲಾಯಿತು.**

**ಈಗಿರುವ ಯುದ್ಧದ ಸ್ಥಿತಿ ಹಾಗೂ ಅಣ್ವಸ್ತ್ರ ಯುದ್ಧದ ಬೆದರಿಕೆಯ ನಿಟ್ಟಿನಲ್ಲಿ ದರೂದೆ ಷರೀಫ್, ಇಸ್ತಿಗ್‌ಫಾರ್ ಹಾಗೂ ದುಆಗಳು ಬಹಳವಾಗಿ ಮಾಡಲು ಕೋರಿಕೆ**

**ಸಿರಿಯದ ಸನ್ಮಾನ್ಯ ಅಬುಲ್‌ಫರಜುಲ್ ಹಸನಿ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28–01–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರ‌ತ್ ಅಬೂಬಕರ್(ರ) ಖಲೀಫರಾಗಿ ಆಯ್ಕೆಗೊಂಡದ್ದರ ಬಗ್ಗೆ ನಡೆಯುತ್ತಿದ್ದ ಚರ್ಚೆಯ ಬಗ್ಗೆ ತಾರೀಕ್ ತಬರಿಯಲ್ಲಿ ಹೀಗೆ ಬರೆಯಲಾಗಿದೆ. ಈ ಸಂದರ್ಭದಲ್ಲಿ ಹಝ್ರ‌ತ್ ಖಬ್ಬಾಬ್ ಬಿನ್ ಮುಂಝಿರ್ ಎದ್ದುನಿಂತು ಹೇಳಿದರು: ಎಲೈ ಅನ್ಸಾರ್ ಗುಂಪಿನವರೇ, ನೀವು ಈ ವಿಷಯದ ತೀರ್ಮಾನದ ಅಧಿಕಾರವನ್ನು ನಿಮ್ಮ ಕೈಯಲ್ಲೇ ಇರಿಸಿರಿ. ಏಕೆಂದರೆ ಮುಹಾಜಿರರು ಈಗ ನಿಮ್ಮ ಅಧೀನದಲ್ಲೇ ಇರುವರು. ಯಾರೂ ನಿಮ್ಮನ್ನು ವಿರೋಧಿಸಲು ಧೈರ್ಯಪಡಲಾರರು. ಜನರು ನಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿ ಹೋಗಲಾರರು. ನೀವು ಗೌರವಾನ್ವಿತರೂ ಸಂಪನ್ನರೂ ಸಂಖ್ಯೆಯಲ್ಲಿ ಅಧಿಕವಿರುವವರೂ ಬಲಾಢ್ಯರೂ ಪ್ರತಾಪಶಾಲಿಯರೂ ಅನುಭವಿಯೂ ಯೋಧರೂ ಧೀರರೂ ಶೂರರೂ ಆಗಿರುವಿರಿ. ನೀವು ಏನು ಮಾಡುವಿರಿ ಎಂದು ಜನರು ನಿಮ್ಮ ಕಡೆಗೆ ನೋಡುತ್ತಿದ್ದಾರೆ. ಈಗ ಭಿನ್ನಾಭಿಪ್ರಾಯವನ್ನು ತಾಳಬೇಡಿರಿ. ಇಲ್ಲದಿದ್ದರೆ ನಿಮ್ಮ ಅಭಿಪ್ರಾಯವೇ ನಿಮ್ಮೊಳಗೆ ಗೊಂದಲಕ್ಕೆ ಕಾರಣವಾಗುವುದು. ನಿಮ್ಮ ಸಂಗತಿ ನಿಮಗೇನೇ ತಿರುಗೇಟಾಗುವುದು. ಎಂದರೆ ಒಬ್ಬ ಅಮೀರ್ ಅನ್ಸಾರ್‌ರಿಂದ ಮತ್ತು ಮತ್ತೊಬ್ಬ ಅಮೀರ್ ಮುಹಾಜಿರರಿಂದ ಎಂದು ಈಗ ಹೇಳಿದ ಮಾತನ್ನು ಖುರೈಶಿನ ಮುಹಾಜಿರರು ನಿರಾಕರಿಸಿದರೆ ಅದು ತಿರುಗೇಟಾಗುವುದು. ಆಗ ಹಝ್ರ‌ತ್ ಉಮರ್(ರ) ಹೇಳಿದರು: ಇದು ಅಸಾಧ್ಯ. ಎರಡು ಖಡ್ಗಗಳು ಒಂದು ಕವಚದಲ್ಲಿ ಒಟ್ಟಿಗೆ ಇರಲಾರವು. ಅಲ್ಲಾಹನಾಣೆ, ಅರೇಬಿಯರು ನಿಮ್ಮನ್ನು ಅಮೀರನ್ನಾಗಿ ಸ್ವೀಕರಿಸಲಾರರು. ಏಕೆಂದರೆ ಅರೇಬಿಯರ ಪ್ರವಾದಿ ನಿಮ್ಮ ಗೋತ್ರದವರಲ್ಲ. ಆದರೆ ಯಾವ ಗೋತ್ರದಲ್ಲಿ ಪ್ರವಾದಿತ್ವವಿತ್ತೋ ಆ ಗೋತ್ರದಿಂದಲೇ ಇರುವ ವ್ಯಕ್ತಿಯನ್ನು ಅಮೀರ್‌ರನ್ನಾಗಿ ಮಾಡಿ ಅವರ ಕಾರ್ಯಗಳನ್ನು ಆ ಅಮೀರನಿಗೆ ಒಪ್ಪಿಸಲು ಅರೇಬಿಯರು ಸಿದ್ಧರಾಗುವರು. ಈ ಸ್ಥಿತಿಯಲ್ಲಿ ಯಾರಾದರೂ ಆ ನೇತೃತ್ವವನ್ನು ನಿರಾಕರಿಸಿದರೆ ಅಂತಹವನಗೆ ತೋರಿಸಿ ಕೊಡಲು ಸ್ಪಷ್ಟವಾದ ಪುರಾವೆ ಮತ್ತು ಸತ್ಯ ನಮ್ಮ ಬಳಿಯಿದೆ. ಮುಹಮ್ಮದ್(ಸ)ರ ಆಡಳಿತ ಮತ್ತು ನೇತೃತ್ವದ ಬಗ್ಗೆ ನಮ್ಮನ್ನು ವಿರೋಧಿಸಲು ಯಾರಿಗೆ ಸಾಧ್ಯ? ಯಾರಿಗೂ ಸಾಧ್ಯವಲ್ಲ. ಖಬ್ಬಾಬ್ ಬಿನ್ ಮುಂಝಿರ್ ಹೇಳಿದರು: ಎಲೈ ಅನ್ಸಾರರ ಸಮೂಹವೇ, ನೀವು ಈ ವಿಷಯವನ್ನು ಸ್ವತಃ ಬಗೆಹರಿಸಿರಿ. ಎಂದಿಗೂ ಈ ವ್ಯಕ್ತಿಯ ಮತ್ತು ಅವರ ಜೊತೆಗಿರುವವರ ಮಾತನ್ನು ಅಂಗೀಕರಿಸಬೇಡಿರಿ. ಅವರು ನಿಮ್ಮ ಪಾಲನ್ನು ಕೂಡ ಇಲ್ಲದಂತೆ ಮಾಡಲು ಬಯಸುತ್ತಾರೆ. ಈ ಜನರು ನಮ್ಮ ಅಭಿಪ್ರಾಯವನ್ನು ಅಂಗೀಕರಿಸದಿದ್ದರೆ ಇವರೆಲ್ಲರನ್ನು ನಮ್ಮ ಪ್ರದೇಶಗಳಿಂದ ಹೊರಗೆ ಹಾಕಿರಿ. ಎಲ್ಲ ಸಂಗತಿಗಳ ಲಗಾಮನ್ನು ತಮ್ಮ ಕೈಯಲ್ಲೇ ಇರಿಸಿರಿ. ಏಕೆಂದರೆ ಅಲ್ಲಾಹನಾಣೆ, ನೀವು ಈ ನೇತೃತ್ವಕ್ಕೆ ಅತ್ಯಂತ ಹೆಚ್ಚು ಅರ್ಹರೂ ಯೋಗ್ಯರೂ ಆಗಿರುವಿರಿ. ನಿಮ್ಮ ಖಡ್ಗಗಳು ಎಲ್ಲ ಜನರನ್ನು ಈ ಧರ್ಮದ ಅನುಸಾರಿಗಳನ್ನಾಗಿ, ವಿಧೇಯರನ್ನಾಗಿ ಮಾಡಿವೆ. ಇಲ್ಲದಿದ್ದರೆ ಅವರು ಎಂದಿಗೂ ಅನುಸರಿಸುವವರಾಗುತ್ತಿರಲಿಲ್ಲ. ಈ ಎಲ್ಲ ಕಾರ್ಯ ಚಟುವಟಿಕೆಗಳನ್ನು ಸರಿಪಡಿಸುವ ಜವಾಬ್ದಾರಿಯನ್ನು ನಾನು ಸ್ವತಃ ಎತ್ತಿಕೊಳ್ಳುತ್ತೇನೆ. ಏಕೆಂದರೆ ನನಗೆ ಇದರ ಪೂರ್ತಿ ಅನುಭವವಿದೆ. ಅದಕ್ಕೆ ನಾನು ಯೋಗ್ಯನಾಗಿರುವೆನು. ಅಲ್ಲಾಹನಾಣೆ ನೀವು ಬಯಸುವವರಾದರೆ, ಸರಿಯಾಗಿ ನೋಡಿಕೊಂಡು ಅದಕ್ಕೆ ತೀರ್ಪು ಮಾಡುವೆನು. ಹಝ್ರ‌ತ್ ಉಮರ್(ರ) ಹೇಳಿದರು: ನೀವು ಹಾಗೆ ಮಾಡಿದರೆ ಅಲ್ಲಾಹನು ನಿಮ್ಮನ್ನು ನಾಶಮಾಡುವನು. ಖಬ್ಬಾಬ್ ಹೇಳಿದರು: ಬದಲಾಗಿ ನೀವು ಕೊಲ್ಲಲ್ಪಡುವಿರಿ. ಹಝ್ರ‌ತ್ ಅಬೂಉಬೈದ ಈ ಸಂದರ್ಭದಲ್ಲಿ ಹೇಳಿದರು: ಎಲೈ ಅನ್ಸಾರ್ ಸಮೂಹವೇ, ಮೊತ್ತಮೊದಲು ಧರ್ಮಕ್ಕೆ ನೆರವಾದವರು ನೀವಾಗಿರುವಿರಿ. ಈಗ ನೀವೇ ಇದರಲ್ಲಿ ಬದಲಾವಣೆ ಉಂಟುಮಾಡುವವರಾಗದಿರಿ. ಆಗ ಬಶೀರ್ ಬಿನ್ ಸಅದ್ ಹೇಳಿದರು: ಎಲೈ ಅನ್ಸಾರರ ಸಮೂಹವೇ, ಮುಶ್ರಿಕರೊಂದಿಗೆ ಧರ್ಮಯುದ್ಧ ಮಾಡಲು ಮತ್ತು ಇಸ್ಲಾಂ ಧರ್ಮದ ಆರಂಭದಲ್ಲಿ ನಮಗೆ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಅದರ ಉದ್ದೇಶ ಕೇವಲ ಅಲ್ಲಾಹನ ಸಂಪ್ರೀತಿಯನ್ನು ಗಳಿಸುವುದು ಮತ್ತು ಹಝ್ರ‌ತ್ ಪೈಗಂಬರ್(ಸ)ರನ್ನು ಅನುಸರಿಸುವುದಾಗಿತ್ತು. ಇತರರ ಮೇಲೆ ನಮ್ಮ ಶ್ರೇಷ್ಠತೆಯನ್ನು ಹೇಳಿಕೊಳ್ಳುವುದು ಸರಿಯಲ್ಲ. ನಾವು ಆ ಸೇವೆಯ ಮೂಲಕ ಲೌಕಿಕವಾದ ಯಾವುದೇ ಪ್ರಯೋಜನವನ್ನು ಪಡೆಯಲು ಬಯಸಬಾರದು. ಈ ವಿಷಯದಲ್ಲಿ ನಮ್ಮ ಮೇಲೆ ಇದ್ದದ್ದು ಅಲ್ಲಾಹನ ಔದಾರ್ಯವೇ ಆಗಿತ್ತು. ಕೇಳಿರಿ, ಮುಹಮ್ಮದ್(ಸ) ಖುರೈಶಿಯಾಗಿದ್ದರು. ಆದ್ದರಿಂದ ಅವರ ಸಮುದಾಯ ಈ ನೇತೃತ್ವಕ್ಕೆ ಹೆಚ್ಚು ಅರ್ಹರು ಮತ್ತು ನಾನು ಅಲ್ಲಾಹನ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ; ನಾನು ಈ ವಿಷಯದಲ್ಲಿ ಮುಹಾಜಿರರೊಂದಿಗೆ ಎಂದಿಗೂ ಭಿನ್ನಾಭಿಪ್ರಾಯ ಹೊಂದಲಾರೆನು. ಅಲ್ಲಾಹನಿಗೆ ಭಯಪಡಿರಿ, ಅವರನ್ನು ವಿರೋಧಿಸಬೇಡಿರಿ ಮತ್ತು ಈ ವಿಷಯದಲ್ಲಿ ಅವರೊಂದಿಗೆ ಜಗಳ ಮಾಡಬೇಡಿರಿ. (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–243, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1987)

ಹೇಗಿದ್ದರೂ ಹಝ್ರ್‌ರತ್ ಉಮರ್(ರ) ಹೇಳಿದ್ದ ಮಾತುಗಳ ಬಗ್ಗೆ ಸುನನ್ನಸಾಯಿಯಲ್ಲಿ ಹೀಗೆ ವರದಿಯಾಗಿದೆ: ಒಬ್ಬ ಅಮೀರ್ ನಮ್ಮಿಂದ ಮತ್ತೊಬ್ಬ ಅಮೀರ್ ಅವರಿಂದ ಎಂದು ಅನ್ಸಾರರು ಸಖೀಫ ಬನೂ ಸಾಇದದಲ್ಲಿ ಇರುವಾಗ ಹೇಳಿದಾಗ ಹಝ್ರ್‌ರತ್ ಉಮರ್(ರ) ಹೇಳಿದರು: ಎರಡು ಖಡ್ಗಗಳು ಒಂದು ಕವಚದಲ್ಲಿ ಇರಲಾರವು. ಅದು ಸರಿಯಾಗಲಿಕ್ಕಿಲ್ಲ. ಅದರೊಂದಿಗೆ ಹಝ್ರ್‌ರತ್ ಅಬೂಬಕರ್(ರ)ರ ಕೈಯನ್ನು ಹಿಡಿದುಕೊಂಡು ಹಝ್ರ್‌ರತ್ ಉಮರ್(ರ) ಹೇಳಿದರು: ಈ ಮೂರು ವೈಶಿಷ್ಟ್ಯಗಳು ಯಾರಲ್ಲಿವೆ? **ಇಧ್. ಯಖೂಲು ಸಾಹಿಬಿಹೀ ಲಾ ತಹ್‌ಝುನ್ ಇನ್ನಲ್ಲಾಹ ಮಅನಾ.** ಎಂದರೆ ಹಝ್ರ್‌ರತ್ ಪೈಗಂಬರ್(ಸ) ತನ್ನ ಸ್ನೇಹಿತನೊಡನೆ ಹೇಳುತ್ತಿದ್ದರು: ದುಃಖಿಸಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮ ಜೊತೆಗಿದ್ದಾನೆ. ಅವರ ಸ್ನೇಹಿತ ಯಾರಾಗಿದ್ದರು? **ಇಧ್.ಹುಮಾ ಫಿಲ್‌ಗ಼ಾರ್.** ಎಂದರೆ ಅವರಿಬ್ಬರೂ ಗುಹೆಯಲ್ಲಿದ್ದಾಗ, ಅವರಿಬ್ಬರೂ ಎಂದರೆ ಇಲ್ಲಿ ಯಾರನ್ನು ಉದ್ದೇಶಿಸಲಾಗಿದೆ? ಇದರಲ್ಲಿ ಹಝ್ರ್‌ರತ್ ಅಬೂಬಕರ್(ರ)ರನ್ನು ಉದ್ದೇಶಿಸಲಾಗಿಲ್ಲವೇ? ಹೀಗೆ ಹೇಳಿಕೊಂಡು ಹಝ್ರ್‌ರತ್ ಉಮರ್(ರ) ಹಝ್ರ್‌ರತ್ ಅಬೂಬಕರ್(ರ)ರಿಗೆ ಬೈಅತ್ ಮಾಡಿದರು. ನೀವು ಕೂಡ ಬೈಅತ್ ಮಾಡಿರಿ ಎಂದು ಜನರೊಡನೆ ಹಝ್ರ್‌ರತ್ ಉಮರ್(ರ) ಹೇಳಿದರು. ಹೀಗೆ ಜನರು ಬೈಅತ್ ಮಾಡಿದರು. (ಸ್ನನ್ ಅಲ್‌ಕುಬ್ರ ಲಿನ್ನಿಸಾಇ, ಕಿತಾಬ್ ವಫಾತುನ್ನಬಿ(ಸ), ಹದೀಸ್–7119, ಸಂಪುಟ–4, ಪುಟ–264, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1991)

ಹಝ್ರ್‌ರತ್ ಉಮರ್(ರ)ರ ನಂತರ ಹಝ್ರ್‌ರತ್ ಅಬೂಉಬೈದ ಬಿನ್ ಜರ್‍ರಾಹ್(ರ) ಮತ್ತು ಹಝ್ರ್‌ರತ್ ಬಶೀರ್ ಬಿನ್ ಸಅದ್(ರ) ಬೈಅತ್ ಮಾಡಿದರು. ಹೀಗೆ ಎಲ್ಲ ಅನ್ಸಾರರು ಸಹ ಹಝ್ರ್‌ರತ್ ಅಬೂಬಕರ್(ರ)ರ ಬೈಅತ್ ಮಾಡಿದರು. (ಅಲ್‌ಕಾಮಿಲ್ ಫಿತ್ತಾರಿಖ್, ಸಂಪುಟ–2, ಪುಟ–193, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003) (ಅಸ್ಸೀರತುಲ್ ಹಲಬೀಯ, ಸಂಪುಟ–3, ಪುಟ–506, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಈ ಬೈಅತ್ ಇಸ್ಲಾಮಿನ ಸಾಹಿತ್ಯದಲ್ಲಿ ಬೈಅತೇ ಸಖೀಫ ಮತ್ತು ಬೈಅತೇ ಖ಼ಾಸ ಎಂಬ ಹೆಸರಲ್ಲಿ ಪ್ರಸಿದ್ಧವಾಗಿದೆ. ಹಝ್ರ್‌ರತ್ ಸಅದ್ ಬಿನ್ ಉಬಾದ ಹಝ್ರ್‌ರತ್ ಅಬೂಬಕರ್(ರ)ರ ಬೈಅತ್ ಮಾಡಿರಲಿಲ್ಲವೆಂದು ಕೆಲವು ವರದಿಗಳಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ ಅವರು ಕೂಡ ಇತರ ಅನ್ಸಾರರ ಜೊತೆಗೆ ಬೈಅತ್ ಮಾಡಿದ್ದರು ಎಂದು ಇನ್ನು ಕೆಲವು ವರದಿಗಳಿಂದ ತಿಳಿದುಬರುತ್ತದೆ. ತಾರೀಕ್ ತಬರಿಯಲ್ಲಿ ಹೀಗೆ ಬರೆಯಲಾಗಿದೆ: ಸಂಪೂರ್ಣ ಸಮುದಾಯ ಸರದಿ ಪ್ರಕಾರ ಹಝ್ರ್‌ರತ್ ಅಬೂಬಕರ್(ರ)ರ ಕೈಯಲ್ಲಿ ಬೈಅತ್ ಮಾಡಿತು ಮತ್ತು ಹಝ್ರ್‌ರತ್ ಸಅದ್ ಕೂಡ ಬೈಅತ್ ಮಾಡಿದರು.

ಹಝ್ರ್‌ರತ್ ಪೈಗಂಬರ್(ಸ)ರ ನಂತರದ ಖ಼ಿಲಾಫತಿನ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನೋಡಿರಿ, ಮುಹಮ್ಮದ್ ರಸೂಲುಲ್ಲಾಹ್(ಸ)ರ ನಂತರ ಖ಼ಿಲಾಫತ್ ಇತ್ತು. ಅದೆಷ್ಟು ವೈಭವಶಾಲಿಯಾಗಿತ್ತು. ಹಝ್ರ್‌ರತ್ ಪೈಗಂಬರ್(ಸ)ರ ನಿಧನದ ನಂತರ ಹಝ್ರ್‌ರತ್ ಅಬೂಬಕರ್(ರ) ಖ಼ಲೀಫರಾದರು. ನಮ್ಮಿಂದ ಒಬ್ಬರು ಖ಼ಲೀಫರು ಆಗಬೇಕು ಮತ್ತು ಮುಹಾಜಿರರಿಂದ ಒಬ್ಬ ಖ಼ಲೀಫರಾಗಬೇಕು ಎಂದು ಅನ್ಸಾರರು ಬಯಸಿದ್ದರು. ಇದನ್ನು ಕೇಳಿದಾಕ್ಷಣ ಅನ್ಸಾರರು ಒಟ್ಟುಗೂಡಿದ್ದ ಸ್ಥಳಕ್ಕೆ ಹಝ್ರ್‌ರತ್ ಅಬೂಬಕರ್(ರ), ಹಝ್ರ್‌ರತ್ ಉಮರ್ ಮತ್ತು ಬೇರೆ ಕೆಲವು ಸಹಾಬಿಯರು ತಲುಪಿದರು. ಹಝ್ರ್‌ರತ್ ಅಬೂಬಕರ್(ರ) ಅವರೊಡನೆ ಹೇಳಿದರು: ನೋಡಿರಿ, ಇಬ್ಬರು ಖ಼ಲೀಫರು ಆಗಬೇಕು ಎಂಬ ಮಾತು ಸರಿಯಲ್ಲ. ಭಿನ್ನತೆಯಿಂದ ಇಸ್ಲಾಂ ಪ್ರಗತಿ ಹೊಂದಲಾರದು. ಹೇಗಿದ್ದರೂ ಖ಼ಲೀಫ ಒಬ್ಬರೇ ಆಗಿರಬೇಕು. ನೀವು ಒಡಕು ಉಂಟುಮಾಡಿದರೆ ನಿಮ್ಮ ಒಗ್ಗಟ್ಟು ಇಲ್ಲವಾಗುವುದು. ಅವ್ಯವಸ್ಥೆಯುಂಟಾಗುವುದು. ನಿಮ್ಮ ಗೌರವಗಳು ಕೊನೆಗೊಳ್ಳುವುವು. ಅರೇಬಿಯರು ನಿಮ್ಮನ್ನು ಚೂರುಚೂರುಮಾಡುವರು. ನೀವು ಹಾಗೆ ಹೇಳಬೇಡಿರಿ. ಕೆಲವು ಅನ್ಸಾರರು ಹಝ್ರ್‌ರತ್ ಅಬೂಬಕರ್(ರ)ರ ಈ ಮಾತಿಗೆ ಎದುರಾಗಿ ಪುರಾವೆಗಳನ್ನು ಮುಂದಿರಿಸಲು ಶುರುಮಾಡಿದರು. ಹಝ್ರ್‌ರತ್ ಉಮರ್(ರ) ಹೇಳುತ್ತಾರೆ: ಹಝ್ರ್‌ರತ್ ಅಬೂಬಕರ್(ರ)ರಿಗೆ ಮಾತನಾಡಲು ಗೊತ್ತಿಲ್ಲವೆಂದೂ ಆದ್ದರಿಂದ ನಾನು ಭಾಷಣ ಮಾಡುವೆನು ಎಂದೂ ನಾನು ಯೋಚಿಸಿದೆ. ಆದರೆ ಹಝ್ರ್‌ರತ್ ಅಬೂಬಕರ್(ರ) ಭಾಷಣ ಮಾಡಿದಾಗ, ನನ್ನ ಮನಸ್ಸಿನಲ್ಲಿದ್ದ ಎಲ್ಲ ಪುರಾವೆಗಳನ್ನು ಅವರು ಹೇಳಿದರು. ಅದಲ್ಲದೆಯೂ ಹೆಚ್ಚಿನ ಪುರಾವೆಗಳನ್ನು ಅವರು ಅನ್ಸಾರರ ಮುಂದಿರಿಸಿದರು. ಇವರು ನನಗಿಂತ ಮಾತನಾಡುವುದರಲ್ಲಿ ಮುಂದಾಗಿರುವರು ಎಂದು ನನಗೆ ಅನಿಸಿತು. ಕೊನೆಗೆ ಅಲ್ಲಾಹನ ಎಂತಹ ಅನುಗ್ರಹ ಉಂಟಾಯಿತು ಎಂದರೆ, ಅನ್ಸಾರರಿಂದಲೇ ಕೆಲವರು ಎದ್ದುನಿಂತು ಹೇಳಿದರು: ಹಝ್ರ್‌ರತ್ ಅಬೂಬಕರ್(ರ) ಹೇಳಿದೆಲ್ಲವೂ ಸರಿಯೇ ಆಗಿವೆ. ಮಕ್ಕದವರನ್ನಲ್ಲದೇ ಅರೇಬಿಯರು ಬೇರೆ ಯಾರನ್ನೂ ಅನುಸರಿಸಲಾರರು. ಅನಂತರ ಒಬ್ಬ ಅನ್ಸಾರ್ ಭಾವುಕರಾಗಿ ಹೇಳಿದರು: ಎಲೈ ನನ್ನ ಸಮುದಾಯ, ಅಲ್ಲಾಹನು ಈ ದೇಶದಲ್ಲಿ ತನ್ನ ಒಬ್ಬ ಪ್ರವಾದಿಯನ್ನು ಕಳುಹಿಸಿದನು. ಅವರ ಸ್ವಂತ ಸಂಬಂಧಿಕರು ಅವರನ್ನು ಪಟ್ಟಣದಿಂದ ಹೊರಗೆ ಹಾಕಿದರು. ಆಗ ನಾವು ನಮ್ಮ ಮನೆಗಳಲ್ಲಿ ಅವರಿಗೆ ವಾಸಿಸಲು ಜಾಗಗಳನ್ನು ಕೊಟ್ಟೆವು. ಅಲ್ಲಾಹನು ಅವರ ಮುಖಾಂತರ ನಮಗೆ ಗೌರವ ನೀಡಿದನು. ಮದೀನದವರಾದ ನಮ್ಮ ಬಗ್ಗೆ ಯಾರಿಗೂ ಗೊತ್ತಿರಲಿಲ್ಲ ಮತ್ತು ನಾವು ನಿಂದ್ಯರಾಗಿದ್ದೆವು. ಆದರೆ ಹಝ್ರ್‌ರತ್ ಪೈಗಂಬರ್(ಸ)ರ ಕಾರಣದಿಂದ ನಾವು ಆದರಣೀಯರೂ ಪ್ರಸಿದ್ಧರೂ ಆದೆವು. ಈಗ ಯಾವ ಸಂಗತಿ ನಮ್ಮನ್ನು ಆದರಣೀಯರನ್ನಾಗಿ ಮಾಡಿತ್ತೋ ಅದೇ ಸಾಕೆಂದು ನಾವು ತಿಳಿಯಬೇಕು. ಹೆಚ್ಚು ಲಾಲಸೆ ತೋರಿಸಬಾರದು. ಹೀಗೆ ಮಾಡುವುದರಿಂದ ನಮಗೆ ನಷ್ಟವುಂಟಾಗದಿರಲಿ. ಆಗ ಹಝ್ರ್‌ರತ್ ಅಬೂಬಕರ್(ರ) ಹೇಳಿದರು: ನೋಡಿರಿ ಖ಼ಿಲಾಫತನ್ನು ಸ್ಥಾಪಿಸುವುದು ಆವಶ್ಯಕ. ಯಾರನ್ನು ಬೇಕಾದರೂ ನೀವು ಖ಼ಲೀಫರನ್ನಾಗಿ ಮಾಡಿರಿ. ನನಗಂತು ಖ಼ಲೀಫನಾಗುವ ಯಾವುದೇ ಬಯಕೆಯಿಲ್ಲ. ಅಬೂ ಉಬೈದ ಬಿನ್ ಜರ್‍ರಾಹ್‌ರನ್ನು ಹಝ್ರ್‌ರತ್ ಪೈಗಂಬರ್(ಸ) ಅಮೀನುಲ್ ಉಮ್ಮತ್ ಎಂದು ಹೇಳಿರುವರು. ಎಂದರೆ, ಸಮುದಾಯದ ವಿಶ್ವಸ್ತ ವ್ಯಕ್ತಿ. ನೀವು ಅವರ ಬೈಅತ್ ಮಾಡಿರಿ. ಉಮರ್(ರ) ಸಹ ಇರುವರು. ಇವರು ಇಸ್ಲಾಮಿಗೆ ಒಂದು ತೆರೆದ ಖಡ್ಗವಾಗಿದ್ದರು. ನೀವು ಅವರ ಬೈಅತ್ ಮಾಡಿರಿ. ಹಝ್ರ್‌ರತ್ ಉಮರ್(ರ) ಹೇಳಿದರು: ಹೇ ಅಬೂಬಕರ್, ಮಾತು ನಿಲ್ಲಿಸಿರಿ, ಕೈಯನ್ನು ಮುಂದಕ್ಕೆ ಚಾಚಿರಿ, ನಮ್ಮ ಬೈಅತ್ ಪಡೆಯಿರಿ. ಹಝ್ರ್‌ರತ್ ಅಬೂಬಕರ್(ರ)ರ ಹೃದಯದಲ್ಲೂ ಅಲ್ಲಾಹನು ಧೈರ್ಯ ತುಂಬಿಸಿದನು. ಅವರು ಬೈಅತ್ ಸ್ವೀಕರಿಸಿದರು. (ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮರ್ಕಝಿಯ್ಯ ಕೆ ಸಾಲಾನ ಇಜ್ತಿಮಾ 1956 ಮೆ ಖಿತಾಬಾತ್, ಅನ್ವಾರುಲ್ ಉಲೂಮ್, ಸಂಪುಟ–25, ಪುಟ–402–403)

ಸಖೀಫ ಬಿನ್ ಬನೀ ಸಾಇದದಲ್ಲಿ ನಡೆದ ಬೈಅತ್ ಬಗ್ಗೆ ಇನ್ನೂ ಹೀಗೆ ಬರೆಯಲಾಗಿದೆ: ಹಝ್ರ್‌ರತ್ ಪೈಗಂಬರ್(ಸ)ರ ನಿಧನ ಸೋಮವಾರದಂದು ಆಯಿತು. ಜನರು ಸಖೀಫ ಬನೀ ಸಾಇದಲ್ಲಿ ಹಝ್ರ್‌ರತ್ ಅಬೂಬಕರ್‌ರ(ರ) ಕೈಯಲ್ಲಿ ಬೈಅತ್ ಮಾಡುವುದರಲ್ಲಿ ಮಗ್ನರಾದರು. ಅನಂತರ ಸೋಮವಾರದ ಉಳಿದ ಸಮಯದಲ್ಲಿ ಮತ್ತು ಮಂಗಳವಾರದ ಬೆಳಿಗ್ಗೆ ಮಸೀದಿಯಲ್ಲಿ ಬೈಅತ್ ಪಡೆಯಲಾಯಿತು. ಹಝ್ರ್‌ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: ಸಖೀಫ ಬಿನ್ ಸಾಇದದಲ್ಲಿ ಬೈಅತ್ ನಡೆದ ಮರುದಿನ ಹಝ್ರ್‌ರತ್ ಅಬೂಬಕರ್(ರ) ಕುಳಿತುಕೊಂಡಿದ್ದಾಗ ಹಝ್ರ್‌ರತ್ ಉಮರ್(ರ) ಎದ್ದುನಿಂತರು ಮತ್ತು ಹಝ್ರ್‌ರತ್ ಅಬೂಬಕರ್(ರ)ರಿಗಿಂತ ಮುಂಚೆ ಭಾಷಣ ಮಾಡಲು ಎದ್ದರು. ಅವರು ಅಲ್ಲಾಹನಿಗೆ ಸ್ತುತಿಗಳನ್ನು ಅರ್ಪಿಸಿದ ನಂತರ ಹೇಳಿದರು: ಹಝ್ರ್‌ರತ್ ಪೈಗಂಬರ್(ಸ) ನಿಧನಗೊಂಡಿಲ್ಲವೆಂದು ನಾನು ನಿನ್ನೆ ಹೇಳಿದ್ದೆ. ಆದರೆ ಪವಿತ್ರ ಖುರ್‌ಆನಿನಲ್ಲಿ ಎಲ್ಲೂ ನಾನು ಹೇಳಿದಂತಹ ಸಂಗತಿಯನ್ನು ಕಂಡಿಲ್ಲ. ಹಝ್ರ್‌ರತ್ ಪೈಗಂಬರ್(ಸ) ಕೂಡ ಹಾಗೆ ನನ್ನೊಡನೆ ಹೇಳಿರಲಿಲ್ಲ. ಆದರೆ ನಮ್ಮ ವಿಷಯಗಳನ್ನು ಸರಿಪಡಿಸಲು ಅವರು ಮರಳಿ ಬರುವರು ಎಂದು ನಾನು ಭಾವಿಸಿದ್ದೆ. ನಾವು ಮೊದಲು ಮೃತಪಡುವರು ಮತ್ತು ನಮ್ಮಲ್ಲಿ ಕೊನೆಯವರಾಗಿ ಹಝ್ರ್‌ರತ್ ಪೈಗಂಬರ್(ಸ) ಇರುವರು ಎಂದು ನಾನು ಭಾವಿಸಿದ್ದೆ. ನಿಸ್ಸಂಶಯವಾಗಿಯೂ ಹಝ್ರ್‌ರತ್ ಪೈಗಂಬರ್(ಸ)ರಿಗೆ ಸನ್ಮಾರ್ಗವನ್ನು ತೋರಿಸಿದ ಗ್ರಂಥವನ್ನು ಅಲ್ಲಾಹನು ನಮಗೆ ನೀಡಿರುವನು. ನೀವು ಅದನ್ನು ದೃಢವಾಗಿ ಹಿಡಿದರೆ ಅಲ್ಲಾಹನು ನಿಮಗೂ ಮಾರ್ಗದರ್ಶನವನ್ನು ನೀಡುವನು. ಹಝ್ರ್‌ರತ್ ಪೈಗಂಬರ್(ಸ)ರಿಗೆ ಸನ್ಮಾರ್ಗವನ್ನು ನೀಡಿದಂತೆ.

ನಿಮ್ಮಲ್ಲಿ ಅತ್ಯಂತ ಉತ್ತಮರಾದ ಮತ್ತು ಹಝ್ರ್‌ರತ್ ಪೈಗಂಬರ್(ಸ)ರ ಸ್ನೇಹಿತರೂ ಗುಹೆಯಲ್ಲಿದ್ದಾಗ ಇಬ್ಬರಲ್ಲಿ ಒಬ್ಬರೂ ಆಗಿದ್ದ ಒಬ್ಬ ವ್ಯಕ್ತಿಗೆ ಅಲ್ಲಾಹನು ನಿಮ್ಮ ವಿಷಯಗಳನ್ನು ಒಪ್ಪಿಸಿ ಕೊಟ್ಟಿರುವನು. ಆದ್ದರಿಂದ ಎದ್ದೇಳಿರಿ ಮತ್ತು ಅವರ ಬೈಅತ್ ಮಾಡಿರಿ. ಹೀಗೆ ಜನರು ಸಖೀಫ ಬೈಅತಿನ ನಂತರ ಹಝ್ರ್‌ರತ್ ಅಬೂಬಕರ್(ರ)ರ ಬೈಅತ್ ಮಾಡಿದರು.

ಹಝ್ರ್‌ರತ್ ಅಬೂಬಕರ್(ರ) ಸಾರ್ವಜನಿಕ ಬೈಅತ್ತಿನ ದಿನದಂದು ಒಂದು ಭಾಷಣವನ್ನು ಮಾಡಿದರು. ಅವರು ಅಲ್ಲಾಹನಿಗೆ ಸ್ತುತಿಗಳನ್ನು ಅರ್ಪಿಸಿದ ನಂತರ ಹೇಳಿದರು: ಎಲೈ ಜನರೇ, ಖಂಡಿತವಾಗಿಯೂ ನನ್ನನ್ನು ನಿಮ್ಮ ಮೇಲೆ ಅಧಿಕಾರಿಯನ್ನಾಗಿ ಮಾಡಲಾಗಿದೆ. ಆದರೆ ನಾನು ನಿಮ್ಮಲ್ಲಿ ಅತ್ಯುತ್ತಮನು ಅಲ್ಲ. ನಾನು ಒಳ್ಳೆಯ ಕೆಲಸ ಮಾಡಿದರೆ, ನನಗೆ ನೆರವಾಗಿರಿ. ನಾನು ತಪ್ಪಾದ ಮಾರ್ಗವನ್ನು ಅವಲಂಬಿಸಿದರೆ, ನನ್ನನ್ನು ನೇರಮಾರ್ಗಕ್ಕೆ ತನ್ನಿರಿ. ಸತ್ಯಸಂಧತೆ ಸಂರಕ್ಷಿಸಪಡಬೇಕಾದ ಸಂಗತಿಯಾಗಿದೆ ಮತ್ತು ಸುಳ್ಳು

ಮೋಸಗಾರಿಕೆಯಾಗಿದೆ. ನಿಮ್ಮಲ್ಲಿರುವ ದುರ್ಬಲ ವ್ಯಕ್ತಿ ಕೂಡ, ನಾನು ಅವರ ಹಕ್ಕನ್ನು ಒದಗಿಸಿ ಕೊಡುವ ವರೆಗೂ ನನ್ನ ಪ್ರಕಾರ ಬಲಾಢ್ಯನಾಗಿರುತ್ತಾನೆ. ನಿಮ್ಮಲ್ಲಿ ಶಕ್ತಿಶಾಲಿ ವ್ಯಕ್ತಿ ಕೂಡ, ನಾನು ಅವನಿಂದ ಇತರರ ಹಕ್ಕನ್ನು ಪಡೆಯುವ ವರೆಗೂ ನನ್ನ ಪ್ರಕಾರ ದುರ್ಬಲನಾಗಿರುತ್ತಾನೆ. ಇನ್‌ಶಾ ಅಲ್ಲಾಹ್. ಅಲ್ಲಾಹನ ಮಾರ್ಗದಲ್ಲಿ ಹೋರಾಡುವುದನ್ನು ಬಿಟ್ಟುಬಿಡುವ ಸಮುದಾಯವನ್ನು ಅಲ್ಲಾಹನು ನಿಂದಿಸುವನು, ಅಪಮಾನಿತಗೊಳಿಸುವನು. ಯಾವ ಸಮುದಾಯದಲ್ಲಿ ಕೆಡುಕು ಹರಡುತ್ತದೋ ಅಲ್ಲಾಹನು ಆ ಸಮುದಾಯವನ್ನು ವಿಪತ್ತಿಗೆ ಈಡು ಮಾಡುತ್ತಾನೆ. ನಾನು ಅಲ್ಲಾಹನು ಮತ್ತು ಅವನ ಪ್ರವಾದಿಯ ಅನುಸರಣೆ ಮಾಡುವವನಾದರೆ, ನೀವು ನನ್ನನ್ನು ಅನುಸರಿಸಿರಿ. ನಾನು ಅಲ್ಲಾಹನು ಮತ್ತು ಅವನ ಪ್ರವಾದಿಯನ್ನು ಅನುಸರಿಸದಿದ್ದರೆ ನನ್ನನ್ನು ಅನುಸರಿಸುವುದು ನಿಮಗೆ ಕಡ್ಡಾಯವಲ್ಲ. ನಮಾಝಿಗಾಗಿ ಎದ್ದು ನಿಲ್ಲಿರಿ, ಅಲ್ಲಾಹನು ನಿಮ್ಮೆಲ್ಲರ ಮೇಲೆ ಕೃಪೆದೋರಲಿ. (ಅಲ್‌ಬಿದಾಯ ವನ್ನಹಾಯ, ಭಾಗ–6, ಪುಟ–298–299, 11 ಹಿಜರಿ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಅಲಿ(ರ) ಹಝ್ರತ್ ಅಬೂಬಕರ್(ರ)ರನ್ನು ಬೈಅತ್ ಮಾಡಿದ್ದ ಬಗ್ಗೆ ಅನೇಕ ಮಾತುಗಳನ್ನು ಹೇಳಲಾಗುತ್ತವೆ. ತಾರೀಖ್ ತಬರಿಯಲ್ಲಿ ಹಬೀಬ್ ಬಿನ್ ಅಬೂ ಸಾಬಿತ್‌ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಅಲಿ(ರ) ತನ್ನ ಮನೆಯಲ್ಲಿ ಇದ್ದರು. ಅಲ್ಲಿಗೆ ಒಬ್ಬರು ಬಂದು ಹೇಳಿದರು: ಹಝ್ರತ್ ಅಬೂಬಕರ್(ರ) ಬೈಅತ್ ಪಡೆಯಲಿಕ್ಕಾಗಿ ಬಂದಿರುವರು. ಆಗ ಅಲಿ(ರ) ನಿಲುವಂಗಿಯನ್ನು ಧರಿಸಿದ್ದರು. ಪೈಜಾಮವನ್ನು ಮತ್ತು ಚಾದರವನ್ನು ತೆಗೆದುಕೊಳ್ಳದೇ ಅವರು ಬೇಗನೇ ಮನೆಯಿಂದ ಹೊರಟರು. ತಡವಾಗುವುದನ್ನು ಅವರು ಇಷ್ಟಪಡಲಿಲ್ಲ. ಹೀಗೆ ಅವರು ಹಝ್ರತ್ ಅಬೂಬಕರ್(ರ)ರ ಬೈಅತ್ ಮಾಡಿದರು. ಅನಂತರ ತನ್ನ ವಸ್ತ್ರಗಳನ್ನು ತರಿಸಿ ಅದನ್ನು ಧರಿಸಿದರು. ಅನಂತರ ಹಝ್ರತ್ ಅಬೂಬಕರ್(ರ) ಇದ್ದ ಸಭೆಯಲ್ಲೇ ಕುಳಿತುಕೊಂಡರು. (ತಾರೀಖ್ ಅತ್ತಿಬರಿ, ಭಾಗ–3, ಪುಟ–257, ದಾರುಲ್ ಫಿಕರ್ ಬೈರೂತ್ 2002)

ಹಝ್ರತ್ ಅಲಿ(ರ) ಹಝ್ರತ್ ಅಬೂಬಕರ್(ರ)ರನ್ನು ಬೈಅತ್ ಮಾಡಿದ್ದ ಬಗ್ಗೆ ಅನೇಕ ವರದಿಗಳು ಲಭಿಸುತ್ತವೆ. ಹಝ್ರತ್ ಅಲಿ(ರ) 6 ತಿಂಗಳುಗಳ ತನಕ ಬೈಅತ್ ಮಾಡಿರಲಿಲ್ಲವೆಂದೂ ಹಝ್ರತ್ ಫಾತಿಮ(ರ)ರ ನಿಧನದ ನಂತರ ಬೈಅತ್ ಮಾಡಿದ್ದರು ಎಂದೂ ಕೆಲವು ವರದಿಗಳಲ್ಲಿ ಬಂದಿವೆ. ಹಝ್ರತ್ ಅಲಿ(ರ) ಪೂರ್ತಿ ಒಲವು ಮತ್ತು ಇಷ್ಟದೊಂದಿಗೆ ಬೇಗನೇ ಹಝ್ರತ್ ಅಬೂಬಕರ್(ರ)ರ ಬೈಅತ್ ಮಾಡಿದ್ದರು ಎಂದೂ ವರದಿಗಳಲ್ಲಿ ಪ್ರಸ್ತಾಪಿಸಲಾಗಿವೆ.

ಹಝ್ರತ್ ಅಬೂ ಸೀದ್ ಖುದ್ರಿ(ರ) ವರದಿ ಮಾಡುತ್ತಾರೆ: ಮುಹಾಜಿರೀನರು ಮತ್ತು ಅನ್ಸಾರರು ಎಲ್ಲರು ಹಝ್ರತ್ ಅಬೂಬಕರ್(ರ)ರವರ ಬೈಅತ್ ಮಾಡಿದಾಗ ಹಝ್ರತ್ ಅಬೂಬಕರ್(ರ) ಭಾಷಣಪೀಠದ ಮೇಲೇರಿ ಅವರು ಜನರ ಕಡೆ ನೋಡಿದಾಗ ಅವರಲ್ಲಿ ಹಝ್ರತ್ ಅಲಿ(ರ) ಕಾಣಿಸಲಿಲ್ಲ. ಹಝ್ರತ್ ಅಬೂಬಕರ್(ರ)ರವರು ಹಝ್ರತ್ ಅಲಿ(ರ)ರವರ ಬಗ್ಗೆ ವಿಚಾರಿಸಿದರು. ಅದಕ್ಕೆ ಅನ್ಸಾರ್‌ಗಳಲ್ಲಿ ಕೆಲವು ಜನರು ಹೋಗು ಹಝ್ರತ್ ಅಲಿ(ರ)ರವರನ್ನು ಕರೆದುಕೊಂಡು ಬಂದರು. ಹಝ್ರತ್ ಅಬೂಬಕರ್(ರ) ಹೇಳಿದರು: ಪ್ರವಾದಿ(ಸ)ರವರ ಚಿಕ್ಕಪ್ಪನ ಮಗನೇ ಹಾಗೂ ಪ್ರವಾದಿ(ಸ) ಅಳಿಯನೇ!! ನೀವು ಮುಸ್ಲಿಮರ ಶಕ್ತಿಯನ್ನು ಮುರಿಯಲಿ ಬಯಸುವಿರಾ? ಅದಕ್ಕೆ ಹಝ್ರತ್ ಅಲಿ(ರ) ಹೇಳಿದರು ಯಾ ರಸೂಲಲ್ಲಾಹ್(ಸ)ರವರ ಖಲೀಫರೆ! ನನ್ನನ್ನು ಹಿಡಿಯಬೇಡಿರಿ, ನಂತರ ಅವರು ಹಝ್ರತ್ ಅಬೂಬಕರ್(ರ)ರವರ ಬೈಅತ್ ಮಾಡಿಕೊಂಡರು. (ಸೀರತ್ ಅಮೀರುಲ್ ಮುಮಿನೀನ್ ಅಲಿ ಬಿನ್ ಅಬಿ ತಾಲಿಬ್ ಶಖ್ಸಿಯ ವ ಅಸ್‌ರಹು, ಅಸ್ಸಲಾಬಿ, ಪುಟ–119, ದಾರುಲ್ ಮಾರಿಫ ಬೈರೂತ್ ಲಡಬನಾನ್ 2006) (ಅಸ್ಸೀರತುನ್ನಬವೀಯ ಲಿಇಬ್ನೆ ಕಸೀರ್, ಪುಟ–693, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2005)

ಅಲ್ಲಾಮ ಇಬ್ನು ಕಸೀರ್ ಹೇಳುತ್ತಾರೆ: ಹಝ್ರತ್ ಅಲಿ(ರ) ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಮೊದಲ ಅಥವಾ ಎರಡನೇ ದಿನ ಹಝ್ರತ್ ಅಬೂಬಕರ್(ರ)ರ ಬೈಅತ್ ಮಾಡಿದ್ದರು. ಹಝ್ರತ್ ಅಲಿ(ರ) ಹಝ್ರತ್ ಅಬೂಬಕರ್(ರ)ರನ್ನು ಎಂದಿಗೂ ಕೈ ಬಿಟ್ಟಿರಲಿಲ್ಲ ಮತ್ತು ಹಝ್ರತ್ ಅಬೂಬಕರ್(ರ)ರ ಹಿಂದೆ ನಮಾಝ್ ನಿರ್ವಹಿಸುವುದನ್ನು ಎಂದಿಗೂ ಉಪೇಕ್ಷಿಸಿರಲಿಲ್ಲ.
(ಅಸಸೀರತುನ್ನಬವೀಯ ಲಿಇಬ್ನೆ ಕಸೀರ್, ಪುಟ–694, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಲಿ(ರ) ಆರಂಭದಲ್ಲಿ ಹಝ್ರತ್ ಅಬೂಬಕರ್(ರ)ರ ಬೈಅತ್ ಮಾಡಿರಲಿಲ್ಲ. ಆದರೆ ಅನಂತರ ಒಂದು ಬಾರಿ ಚಿಂತಿತರಾಗಿ ಮುಂಡಾಸು ಕೂಡ ಕಟ್ಟದೇ ಟೋಪಿಯನ್ನು ಮಾತ್ರ ಹಾಕಿಕೊಂಡು ಬೈಅತ್ ಮಾಡಲು ಹೊರಟರು ಮತ್ತು ಮುಂಡಾಸನ್ನು ಅನಂತರ ತರಿಸಿದರು. ಬೈಅತ್ ಮಾಡುವುದರಲ್ಲಿ ತಡಮಾಡುವುದು ದೊಡ್ಡ ಪಾಪವಾಗಿದೆ ಎಂದು ಯೋಚಿಸಿ ಬೇಗನೇ ಹೋಗಿದ್ದರು ಎಂದು ಇದರಿಂದ ತಿಳಿದುಬರುತ್ತದೆ.
(ಮಲ್‌ಫೂಝಾತ್, ಸಂಪುಟ–10, ಪುಟ–183)

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ: "ಹಝ್ರತ್ ಅಬುಬಕರ್(ರ) ಅವರನ್ನು ನೋಡಿ. ಅವರು ಮೆಕ್ಕಾದ ಸಾಮಾನ್ಯ ವ್ಯಾಪಾರಿಯಾಗಿದ್ದರು. ಪ್ರವಾದಿ ಮುಹಮ್ಮದ್(ಸ) ರವರನ್ನು ಅವತರಿಸದಿದ್ದರೆ ಮತ್ತು ಮಕ್ಕಾದ ಇತಿಹಾಸವನ್ನು ಬರೆಯುತ್ತಿದ್ದರೆ, ಇತಿಹಾಸಗಾರರು ಅಬುಬಕರ್(ರ) ಅರೇಬಿಯಾದ ಉದಾತ್ತ ಮತ್ತು ಪ್ರಾಮಾಣಿಕ ವ್ಯಾಪಾರಿ ಎಂದು ಮಾತ್ರ ಉಲ್ಲೇಖಿಸುತ್ತಿದ್ದರು. ಆದರೆ ಪ್ರವಾದಿ ಮುಹಮ್ಮದ್(ಸ)ರವರ ಅನುಸರಣೆಯಿಂದ ಎಂತಹ ಪದವಿ ಲಭಿಸಿತು ಎಂದರೆ ಇಂದು ಲೋಕ ಪೂರ್ತಿ ಗೌರವದಿಂದ ಅವರ ಹೆಸರು ಪ್ರಸ್ತಾಪಿಸುತ್ತದೆ. ಪ್ರವಾದಿ ಮುಹ್ಮದ್(ಸ)ರವರು ನಿಧನರಾದರು ಮತ್ತು ಅಬೂಬಕರ್(ರ) ಅವರನ್ನು ಮುಸ್ಲಿಮರ ಖಲೀಫ ಮತ್ತು ರಾಜನನ್ನಾಗಿ ಒಪ್ಪಿಕೊಂಡಾಗ, ಈ ಸುದ್ದಿಯು ಮಕ್ಕಾದವರೆಗೂ ತಲುಪಿತು. ಹಝ್ರತ್ ಅಬುಬಕರ್(ರ) ಅವರ ತಂದೆ ಅಬೂಕಹಾಫಾ ಸೇರಿದಂತೆ ಅನೇಕ ಜನರು ಒಂದು ಸಭೆಯಲ್ಲಿ ಕುಳಿತಿದ್ದರು. ಜನರು ಅಬೂಬಕರ್ ಅವರ ಬೈಅತ್ ಮಾಡಿದ್ದಾರೆ ಎಂದು ಅವರು ಕೇಳಿದಾಗ, ಇದನ್ನು ಒಪ್ಪಿಕೊಳ್ಳಲು ಅವರಿಗೆ ಅಸಾಧ್ಯವಾಯಿತು ಮತ್ತು ಅವರು ಮಾಹಿತಿದಾರನನ್ನು ಕೇಳಿದರು, "ನೀವು ಯಾವ ಅಬೂಬಕರ್ ಅನ್ನು ಉಲ್ಲೇಖಿಸುತ್ತಿದ್ದೀರಿ?" ಅವರು ಹೇಳಿದರು, "ಇದು ನಿಮ್ಮ ಮಗ ಅಬೂಬಕರ್ ಆಗಿದ್ದಾರೆ." ತದನಂತರ ಅವರು ಅರೇಬಿಯಾದ ಒಂದೊಂದು ಬುಡಕಟ್ಟಿನ ಹೆಸರು ತೆಗೆದು ಕೊಂಡು ಹೇಳಿದರು ಇವರು ಸಹ ಅಬೂಬಕರ್(ರ)ರವರ ಬೈಅತ್ ಮಾಡಿದ್ದಾರೆ ಇವರು ಸಹ ಬೈಅತ್ ಮಾಡಿದ್ದಾರೆ ಮತ್ತು ಅವರೆಲ್ಲರೂ ಅಬೂಬಕರ್(ರ) ಅವರನ್ನು ಖಲೀಫ ಮತ್ತು ರಾಜನನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದ್ದಾರೆ ಎಂದು ಹೇಳಿದಾಗ ಅಬುಕಹಾಫ ಅಸಹಾಯಕರಾಗಿ ಹೀಗೆ ಹೇಳಲು ಪ್ರಾರಂಭಿಸಿದರು: **ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹು ವಹದಹೂ ಲಾಶರೀಕಲಹು ವ ಅಶ್‌ಹದು ಅನ್ನ ಮುಹಮ್ಮದನ್ ಅಬ್ದುಹೂ ವ ರಸೂಲಹು** ಅಂದರೆ ಅಲ್ಲಾಹನನ್ನು ಹೊರತುಪಡಿಸಿ ಯಾರೂ ಸಹ ಆರಾಧನೆಗೆ ಅರ್ಹನಲ್ಲ ಮತ್ತು ಪ್ರವಾದಿ ಮುಹಮ್ಮದ್(ಸ)ರವರು ಅಲ್ಲಾಹನ ಕಡೆಯಿಂದ ನಿಜವಾದ ಸಂದೇಶವಾಹಕರಾಗಿದ್ದಾರೆ ಎಂದು ನಾನು ಸಾಕ್ಷಿ ಹೇಳುತ್ತೇನೆ.

ಹಝ್ರತ್ ಮುಸ್ಲೆಹ್ ಮೌಊದ್(ರ) ಬರೆಯುತ್ತಾರೆ, "ಅವರು ಮುಂಚೆಯಿಂದನೇ ಮುಸ್ಲಿಮ್ ಆಗಿದ್ದರೂ" ಹಝ್ರತ್ ಅಬುಕಹಾಫಾ ಅವರು ಪ್ರವಾದಿ(ಸ)ರ ಮುಂಚೆಯೇ ಬೈಅತ್ ಮಾಡಿದ್ದರು. ಅವರು ಈ ಕಲಿಮವನ್ನು ಪಠಿಸಿದರು ಮತ್ತು ಮುಹಮ್ಮದ್(ಸ) ಅವರ ಪ್ರವಾದಿತ್ವವನ್ನು ಮತ್ತೊಮ್ಮೆ ಒಪ್ಪಿಕೊಂಡಿದ್ದು ಏಕೆ ಎಂದರೆ ಹಝ್ರತ್ ಅಬೂಬಕರ್(ರ) ಖಲೀಫರಾದಾಗ ಅವರ ಕಣ್ಣುಗಳು ತೆರೆದವು ಮತ್ತು ಇದು ಇಸ್ಲಾಮಿನ ಸತ್ಯತೆಗೆ ಒಂದು ದೊಡ್ಡ ಪುರಾವೆಯಾಗಿದೆ ಎಂದು ಅವರು ಅರ್ಥಮಾಡಿಕೊಂಡರು. ಇಲ್ಲದಿದ್ದರೆ ಇಡೀ ಅರೇಬಿಯಾ ನನ್ನ ಮಗನ ಕೈಯಲ್ಲಿ ಒಂದಾಗುತ್ತಿತ್ತು ಎಂಬುದಕ್ಕೆ ನನ್ನ ಮಗನ ಯೋಗ್ಯತೆ ಏನಾಗಿತ್ತು."
(ತಫ್ಸೀರ್ ಕಬೀರ್, ಸಂಪುಟ–6, ಪುಟ–205–206)

ಹಝ್ರತ್ ಮಿಸ್ಲಿಹ್ ಮೌಊದ್(ರ) ನಂತರ ಈ ಘಟನೆಯನ್ನು ಒಂದು ಸ್ಥಳದಲ್ಲಿ ಹೀಗೆ ವಿವರಿಸುತ್ತಾರೆ: "ನೋಡಿ! ಇಸ್ಲಾಮಿನ ಮೊದಲು ಹಝ್ರತ್ ಅಬುಬಕರ್(ರ) ಅವರ ಸ್ಥಿತಿ ಹೇಗಿತ್ತು? ಅವರು ಖಲೀಫರಾದಾಗ ಅವರ ತಂದೆ ಜೀವಂತವಾಗಿದ್ದರು. ಯಾರೋ ಅವರ ಬಳಿಗೆ ಹೋಗಿ ಅಬೂಬಕರ್ ಖಲೀಫರಾದರು ಎಂದು ಶುಭಾಷಯಗಳನ್ನು ನೀಡಿದರು. ಅವರು ಯಾವ ಅಬೂಬಕರ್ ಎಂದು ಕೇಳುತ್ತಾರೆ? ಅದಕ್ಕೆ ಅವರು ನಿನ್ನ ಮಗ ಎಂದು ಹೇಳುತ್ತಾರೆ. ಅವನೂ ಎಂದು ನಂಬದೆ ಬೇರೆ ಯಾರಾದ್ರೂ ಇರ್ತಾರೆ ಅಂದ್ಕೊಂಡ್ರು ಆದ್ರೆ ಅವರಿಗೆ ಖಾತ್ರಿಯಾದಾಗ ಅಲ್ಲಾಹು ಅಕ್ಬರ್! ಮುಹಮ್ಮದ್(ಸ) ರವರ ವೈಭವವೂ ಎಂತಹದ್ದು ಅರಬ್ಬರು ಅಬುಕಹಾಫನ ಮಗನನ್ನು ತಮ್ಮ ಸರದಾರ ಎಂದು ಪರಿಗಣಿಸಿದರು. ಆದ್ದರಿಂದ, ಜಗತ್ತಿನಲ್ಲಿ ಯಾವುದೇ ಮಹತ್ತರವಾದ ವೈಭವವನ್ನು ಹೊಂದಿರದ ಅಬುಬಕರ್(ರ) ಅವರನ್ನು ಮುಹಮ್ಮದ್(ಸ)ರವರು ಅನುಸರಣೆಯಿಂದಾಗಿ ಎಷ್ಟು ಗೌರವ ಪಡೆದರು ಎಂದರೆ ಈಗಲೂ ಲಕ್ಷಾಂತರ ಜನರು ತಮ್ಮನ್ನು ಹೆಮ್ಮೆಯಿಂದ ಅವರ ಕಡೆಗೆ ಪರಿಗಣಿಸುತ್ತಾರೆ." (ಭಾಷಣ ಜಲ್ಸ ಸಾಲಾನ 17–03–1919, ಅನ್ವರ್–ಉಲ್–ಉಲೂಮ್, ಸಂಪುಟ 4 , ಪುಟ 425)

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಾರೆ: ಖಂಡಿತವಾಗಿಯೂ ತಿಳಿಯಿರಿ, ಅಲ್ಲಾಹನು ಯಾರದ್ದೇ ಔದಾರ್ಯವನ್ನು ತನ್ನ ಬಳಿ ಇರಿಸುವುದಿಲ್ಲ. ಒಬ್ಬನು ಅಲ್ಲಾಹನಿಗಾಗಿ ಕೊಡುವುದರ ಸಾವಿರ ಅಥವಾ ಲಕ್ಷಗಟ್ಟಲೆ ಪಟ್ಟು ಹೆಚ್ಚು ಅಲ್ಲಾಹನು ಅವನಿಗೆ ಮರಳಿ ಕೊಡುತ್ತಾನೆ. ಅಬೂಬಕರ್(ರ) ಮಕ್ಕದಲ್ಲಿ ಒಂದು ಮಾಮೂಲಿ ಮನೆಯನ್ನು ಬಿಟ್ಟು ಹೋಗಿದ್ದರು. ಆದರೆ ಅಲ್ಲಾಹನು ಅದಕ್ಕೆ ಪ್ರತಿಫಲವಾಗಿ ಅವರನ್ನು ಒಂದು ಸಾಮ್ರಾಜ್ಯದ ಅಧಿಕಾರಿಯನ್ನಾಗಿ ಮಾಡಿದನು. (ಹಖಾಎಖುಲ್ ಫುರ್ಖಾನ್, ಸಂಪುಟ–1, ಪುಟ–244)

ಹಝ್ರತ್ ಅಬುಬಕರ್(ರ) ಅವರ ಖಿಲಾಫತ್ ಬಗ್ಗೆ ಪವಿತ್ರ ಪ್ರವಾದಿ ಮುಹಮ್ಮದ್(ಸ) ರ ಒಂದು ಕನಸ್ಸು ಇದೆ. ಅದರ ಬಗ್ಗ ಒಂದು ಉಲ್ಲೇಖವು ಹೀಗೂ ಇದೆ ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ಅವರು ವರದಿ ಮಾಡುತ್ತಾರೆ ಪ್ರವಾದಿ(ಸ) ಹೇಳಿದರು: ಒಂದು ಕನಸ್ಸನ್ನು ನನಗೆ ತೋರಿಸಲಾಯಿತು ಅದೇನೆಂದರೆ ನಾನು ಒಂದು ಬಾವಿಯ ಬಳಿ ನಿಂತು ಚಕ್ರದ ಮೇಲೆ ಇರಿಸಲಾದ ಪಾತ್ರೆಯಿಂದ ನೀರನ್ನು ಸೇದುತ್ತಿದ್ದೇನೆ. ಅಷ್ಟರಲ್ಲಿ ಅಬೂಬಕರ್ ಅವರು ಬಂದು ಒಂದೋ ಎರಡೋ ಪಾತ್ರೆಗಳನ್ನು ಹೊರತೆಗೆದರು ಅವುಗಳನ್ನು ಎಳೆಯುವಲ್ಲಿ ದೌರ್ಬಲ್ಯವಿತ್ತು ಮತ್ತು ಅಲ್ಲಾಹನು ಅವರ ದೌರ್ಬಲ್ಯವನ್ನು ಮುಚ್ಚಿ ಕ್ಷಮಿಸುತ್ತಾನೆ. ಆಗ ಉಮರ್ ಬಿನ್ ಖತ್ತಾಬ್ ಬಂದರು ಮತ್ತು ಆ ಪಾತ್ರೆಯು ದೊಡ್ಡ ಪಾತ್ರೆಯಾಗಿ ಮಾರ್ಪಟ್ಟಿತು, ಆದ್ದರಿಂದ ಉಮರ್ ಮಾಡಿದಂತಹ ಅದ್ಭುತ ಕೆಲಸವನ್ನು ಮಾಡುವ ಯಾವುದೇ ಶಕ್ತಿ ನನಗೆ ಕಾಣಿಸಲಿಲ್ಲ. ಅವರು ಅದರಿಂದ ಎಷ್ಟು ನೀರಲ್ಲಿ ಸೇದಿದರು ಎಂದರೆ ಅದರಿಂದ ಎಲ್ಲ ಜನರು ತೃಪ್ತರಾಗಿ ತಮ್ಮ ಸ್ಥಳಗಳಿಗೆ ಹೋಗಿ ಕುಳಿತರು. (ಸಾಹಿಹ್ ಅಲ್–ಬುಖಾರಿ, ಕಿತಾಬ್ ಫಝಾಎಲ್ ಅಸ್‌ಹಾಬನ್ನಬಿ(ಸ), ಅಧ್ಯಾಯ ಮನಾಕಿಬ್ ಉಮರ್ ಬಿನ್ ಅಲ್–ಖತ್ತಾಬ್, ಹದೀಸ್ 3682)

ಹಝ್ರತ್ ಅಬೂಬಕರ್(ರ) ಒಂದು ಬಾರಿ ಕನಸಿನಲ್ಲಿ ಹೀಗೆ ಕಂಡರು: ಅವರ ದೇಹದಲ್ಲಿ ಯಮನೀ ಚಾದರದ ಒಂದು ಜೋಡಿಯಿತ್ತು. ಆದರೆ ಅದರ ಮೇಲ್ಭಾಗದಲ್ಲಿ ಎರಡು ಕಲೆಗಳಿದ್ದುವು. ಹಝ್ರತ್ ಪೈಗಂಬರ್(ಸ) ಈ ಕನಸಿನ ಕುರಿತು ಹೇಳಿದರು: ಯಮನೀ ಚಾದರದ ಅರ್ಥವೇನೆಂದರೆ, ನಿಮಗೆ ಉತ್ತಮ ಮಕ್ಕಳು ಲಭಿಸುವುವು ಮತ್ತು ಎರಡು ಗುರುತುಗಳ ಅರ್ಥ ಎರಡು ವರ್ಷಗಳ ನೇತೃತ್ವವಾಗಿದೆ. ಎಂದರೆ, ನೀವು ಎರಡು ವರ್ಷಗಳ ಕಾಲ ಮುಸ್ಲಿಮರ ಅಧಿಕಾರಿಯಾಗಿ ಇರುವಿರಿ. (ಕನ್‌ಝುಲ್ ಅಲ್‌ಮಾಲ್, ಸಂಪುಟ–3, ಭಾಗ–5, ಪುಟ–253, ಹದೀಸ್–14111, ದರುಲ್ ಕುತುಬ್ ಇಲ್‌ಮಿಯ ಬೈರೂತ್ 2004)

ಖಿಲಾಫತ್ ಚುನಾವಣೆಯ ನಂತರ ಹಜರತ್ ಅಬೂಬಕ್ಕರ್(ರ) ಅವರಿಗೆ ಪಿಂಚಣಿಯನ್ನು ನೇಮಿಸಲಾಯಿತು ಎಂದು ಉಲ್ಲೇಖಿಸಲಾಗಿದೆ. ಖಿಲಾಫತ್ ನಂತರ ಅವರು ಮದೀನಾಕ್ಕೆ ಬಂದು ಅಲ್ಲಿಯೇ ಇದ್ದರು. ಅವರು ತಮ್ಮ ಸ್ವಂತ ವ್ಯವಹಾರಗಳನ್ನು ಪರಿಗಣಿಸಿ ಹೇಳಿದರು ಅಲ್ಲಾಹನಆಣೆ! ವ್ಯಾಪಾರ ಮಾಡುತ್ತ ಜನರ ವ್ಯವಹಾರಗಳನ್ನು ಇತ್ಯರ್ಥಗೊಳಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಈ ಸೇವೆಗೆ ಸಂಪೂರ್ಣ ಗಮನದ ಅಗತ್ಯವಿದೆ. ಇಲ್ಲಿ ನನ್ನ ಕುಟುಂಬಕ್ಕು ಕೆಲವು ಅವಶ್ಯಕತೆಗಳು ಇವೆ ಆದ್ದರಿಂದ ಅವರು ವ್ಯಾಪಾರವನ್ನು ಬಿಟ್ಟು ನಿಮ್ಮ ಮತ್ತು ನಿಮ್ಮ ಕುಟುಂಬದ ಅಗತ್ಯಗಳಿಗಾಗಿ ಖಜಾನೆಯಿಂದ ದೈನಂದಿನ ಖರ್ಚುಗಳನ್ನು ತೆಗೆದುಕೊಳ್ಳಲು ಪ್ರಾರಂಭಿಸಿದ್ದೀರಿ. ನಿಮ್ಮ ವೈಯಕ್ತಿಕ ವೆಚ್ಚಗಳಿಗಾಗಿ ವರ್ಷಕ್ಕೆ ಆರು ಸಾವಿರ ದಿರ್ಹಮ್‌ಗಳನ್ನು ಮಂಜೂರು ಮಾಡಲಾಯಿತು. (ತಾರಿಖ್–ಉಲ್–ತಬರಿ, ಸಂಪುಟ–2, ಪುಟ–354, ವರ್ಷ 13ಹಿ, ದಾರ್ ಅಲ್–ಕಿತಾಬ್ ಅಲ್–ಇಲ್‌ಮಿಯಾ 1987 ಪ್ರಕಟಿಸಲಾಗಿದೆ)

ಆದ್ದರಿಂದ, ಅಬೂಬಕ್ಕರ್ ಅವರಿಗೆ ಬೈತುಲ್ ಮಾಲ್ನಿಂದ ತಮ್ಮನ್ನು ಮತ್ತು ತಮ್ಮ ಕುಟುಂಬವನ್ನು ಪೋಷಿಸಲು ಪಿಂಚಣಿಯನ್ನು ನೀಡಲಾಯಿತು, ಆದರೆ ಹಝ್ರತ್ ಅಬೂಬಕರ್(ರ)ರ ನಿಧನದ ಸಮಯ ಸಮೀಪವಾದಾಗ ಅವರು ತನ್ನ ಸಂಬಂಧಿಕರೊಡನೆ ಹೀಗೆ ಆದೇಶಿಸಿದರು: ನಾನು ಬೈತುಲ್‌ಮಾಲಿನಿಂದ ಪಡೆದ ಪಿಂಚಣಿಯನ್ನು ಪೂರ್ಣವಾಗಿ ಮರಳಿಸಿರಿ. ಅದರ ಮರುಪಾವತಿಗಾಗಿ ನನ್ನ ಕೆಲವು ಭೂಸ್ವತ್ತುಗಳನ್ನು ಮಾರಾಟ ಮಾಡಿರಿ. ಹಝ್ರತ್ ಉಮರ್(ರ) ಖಲೀಫರಾದ ನಂತರ ಆ ಹಣ ಅವರ ಬಳಿಗೆ ತಲುಪಿದಾಗ ಅವರು ಅತ್ತುಬಿಟ್ಟರು ಮತ್ತು ಹೀಗೆ ಹೇಳಿದರು: ಹೇ ಅಬೂಬಕರ್, ನೀವು ನಿಮ್ಮ ಉತ್ತರಾಧಿಕಾರಿಗಳಿಗೆ ಬಹಳ ದೊಡ್ಡದಾದ ಭಾರವನ್ನು ಹಾಕಿದ್ದೀರಿ. (ಹಝ್ರತ್ ಸೈಯದ್ನಾ ಅಬುಬಕರ್ ಸಿದ್ದಿಕ್(ರ), ಮುಹಮ್ಮದ್ ಹುಸೇನ್ ಹೈಕಲ್, ಪುಟ–122, ಬುಕ್ ಕಾರ್ನರ್ ಝೀಲಂ)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಹಝ್ರತ್ ಅಬುಬಕರ್(ರ) ಅವರು ಇಡೀ ಇಸ್ಲಾಮಿಕ್ ಪ್ರಪಂಚದ ರಾಜರಾಗಿದ್ದರು, ಆದರೆ ಅವರು ಏನು ಪಡೆದರು?" ಅವರು ಸಾರ್ವಜನಿಕ ಹಣದ ರಕ್ಷಕರಾಗಿದ್ದರು ಆದರೆ ಈ ಹಣದ ಮೇಲೆ ಅವರಿಗೆ ಯಾವುದೇ ನಿಯಂತ್ರಣವಿರಲಿಲ್ಲ. ಸಹಜವಾಗಿ, ಹಝ್ರತ್ ಅಬೂಬಕರ್(ರ) ದೊಡ್ಡ ಉದ್ಯಮಿಯಾಗಿದ್ದರು ಆದರೆ ಅವರು ಸರ್ವಶಕ್ತನಾದ ಅಲ್ಲಾಹನ ಮಾರ್ಗದಲ್ಲಿ ಹಣವನ್ನು ನೀಡುವ ಅಭ್ಯಾಸವನ್ನು ಹೊಂದಿದ್ದರಿಂದ, ಪ್ರವಾದಿ(ಸ) ನಿಧನ ಹೊಂದಿದಾಗ ಮತ್ತು ಅವರು ಖಲೀಫರಾದಾಗ ಆ ಸಂದರ್ಭದಲ್ಲಿ ಅವರ ಬಳಿ ಹಣವಿರಲಿಲ್ಲ. ಖಲೀಫಾದ ಎರಡನೇ ದಿನ, ಅವರು ಬಟ್ಟೆಯ ಮೂಟೆಯನ್ನು ಎತ್ತಿಕೊಂಡು ಅದನ್ನು ಮಾರಾಟ ಮಾಡಲು ಹೊರಟರು. ದಾರಿಯಲ್ಲಿ ಹಝ್ರತ್ ಉಮರ್(ರ) ಅವರನ್ನು ಭೇಟಿಯಾದಾಗ ಅವರು "ನೀವು ಏನು ಮಾಡುತ್ತಿದ್ದೀರಿ?" ಎಂದು ಕೇಳಿದರು ಅದಕ್ಕೆ ಅವರು ಹೇಳಿದರು ನನಗೆ ಆಹಾರದ ಅವಶ್ಯಕತೆ ಇದೆ, ನಾನು ಬಟ್ಟೆ ಮಾರದಿದ್ದರೆ ನಾನು ಎಲ್ಲಿಂದ ತಿನ್ನಲಿ? ಹಝ್ರತ್ ಉಮರ್(ರ) ಹೀಗೆ ಆಗುವುದಿಲ್ಲ ಎಂದು ಹೇಳಿದರು. ನೀವು ಬಟ್ಟೆ ಮಾರಲು ಮುಂದಾದರೆ ಖಿಲಾಫತ್‌ನ ಕೆಲಸಗಳು ಮಾಡುವವರು ಯಾರು? ಹಝ್ರತ್ ಅಬೂಬಕರ್(ರ) ಉತ್ತರಿಸಿದರು, ನಾನು ಈ ಕೆಲಸವನ್ನು ಮಾಡದಿದ್ದರೆ, ಜೀವನೋಪಾಯ ಹೇಗೆ? ನೀವು ಬೈತುಲ್ ಮಾಲ್‌ನಿಂದ ಪಿಂಚಣಿಯನ್ನು ತೆಗೆದುಕೊಳ್ಳಬೇಕು ಎಂದು ಹಝ್ರತ್ ಉಮರ್(ರ) ಹೇಳಿದರು. ಹಝ್ರತ್ ಅಬೂಬಕರ್(ರ) ಅವರು ಅದನ್ನು ಸಹಿಸಲು ಸಾಧ್ಯವಿಲ್ಲ ಎಂದು ಉತ್ತರಿಸಿದರು. ಬೈತುಲ್ ಮಾಲ್‌ನ ಮೇಲೆ ನನಗೆ ಯಾವ ಹಕ್ಕಿದೆ? ಹಝ್ರತ್ ಉಮರ್(ರ) ಅವರು ಬೈತ್–ಉಲ್–ಮಾಲ್‌ನ ಹಣವನ್ನು ಧಾರ್ಮಿಕ ಕೆಲಸ ಮಾಡುವವರಿಗೆ ಮಾತ್ರ ಖರ್ಚು ಮಾಡಬಹುದು ಎಂದು ಪವಿತ್ರ ಖುರ್‌ಆನ್ ಅನುಮತಿಸಿದಾಗ ನೀವು ಅದನ್ನು ಏಕೆ ತೆಗೆದುಕೊಳ್ಳಬಾರದು ಎಂದು ಹೇಳಿದರು. ಆದ್ದರಿಂದ ಅದರ ನಂತರ ಬೈತ್–ಉಲ್–ಮಾಲ್‌ನಿಂದ ಅವರ ಪಿಂಚಣಿಯನ್ನು ನಿಗದಿಪಡಿಸಲಾಯಿತು ಆದರೆ ಆ ಸಮಯದಲ್ಲಿ ಆ ಪಿಂಚಣಿಯು ಕೇವಲ ರೊಟ್ಟಿ ಮತ್ತು ಬಟ್ಟೆಯ ಅಗತ್ಯವನ್ನು ಪೂರೈಸಲು ಮಾತ್ರ ಸಾಕಾಗಿತ್ತು. (ತಫ್ಸೀರ್ ಕಬೀರ್, ಸಂಪುಟ–8, ಪುಟ–468)

ಹಝ್ರತ್ ಅಬುಬಕರ್ ಸಿದ್ದಿಕ್(ರ) ಅವರ ಖಿಲಾಫತ್ ನಾಲ್ಕು ಖಲೀಫ ರಾಶಿದಾಗಳಲ್ಲಿ ಚಿಕ್ಕದಾಗಿದೆ, ಇದು ಸುಮಾರು ಎರಡೂವರೆ ವರ್ಷಗಳ ಕಾಲ ನಡೆಯಿತು ಆದರೆ ಈ ಅಲ್ಪಾವಧಿಯು ನೀತಿವಂತ ಖಿಲಾಫತೆ ರಾಶಿದದ ಅತ್ಯಂತ ಪ್ರಮುಖ ಮತ್ತು ಸುವರ್ಣ ಯುಗ ಎಂದು ಕರೆಯಲು ಅರ್ಹವಾಗಿದೆ ಏಕೆಂದರೆ ಹಝ್ರತ್ ಅಬೂಬಕರ್(ರ)ರಿಗೆ ಅತ್ಯಂತ ಹೆಚ್ಚು ಅಪಾಯಗಳನ್ನು ಮತ್ತು ವಿಪತ್ತುಗಳನ್ನು ಎದುರಿಸಬೇಕಾಗಿ ಬಂದಿತ್ತು. ಆದರೆ ಅಲ್ಲಾಹನ ಅಸಾಧಾರಣವಾದ ಸಹಾಯ ಮತ್ತು ನೆರವುಗಳ ಕಾರಣದಿಂದ ಹಝ್ರತ್ ಅಬೂಬಕರ್(ರ)ರ ಶ್ರೇಷ್ಠವಾದ ಧೈರ್ಯ, ಶೌರ್ಯ, ವಿವೇಕ ಮತ್ತು ತೀಕ್ಷ್ಣಗ್ರಹಿಕೆಯಿಂದ ಸ್ವಲ್ಪ ಕಾಲದಲ್ಲೇ ಭಯ ಮತ್ತು ಅಪಾಯಗಳ ಎಲ್ಲ ಮೋಡಗಳು ಚದುರಿಹೋದುವು ಮತ್ತು ಎಲ್ಲ ಭಯಗಳು ಸಮಾಧಾನವಾಗಿ ಮಾರ್ಪಾಡಾದುವು. ದಂಗೆ ಮತ್ತು ದಂಗೆಕೋರರನ್ನು ನಿಗ್ರಹಿಸಲಾಯಿತು ಮತ್ತು ಖಿಲಾಫತ್ತಿನ ಅಲುಗಾಡುವ ಅಮಾರತ್ತನ್ನು ದೃಢವಾದ ಅಡಿಪಾಯದಲ್ಲಿ ಸ್ಥಾಪಿಸಲಾಯಿತು.

ಖಿಲಾಫತ್‌ನ ಪ್ರಾರಂಭದಲ್ಲಿ ಹಝ್ರತ್ ಅಬೂಬಕರ್ ಸಿದ್ದೀಕ್(ರ) ಅವರು ಎದುರಿಸಿದ ಅಪಾಯಗಳು ಮತ್ತು ತೊಂದರೆಗಳನ್ನು ಉಮ್ಮುಲ್–ಮುಮಿನೀನ್ ಹಝ್ರತ್ ಆಯೆಶಾ(ರ) ಅವರು ಹೇಳಿದ್ದಾರೆ ಅದನ್ನು ಉಲ್ಲೇಖಿಸುತ್ತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ, ಅವರು ಹೇಳುತ್ತಾರೆ ನನ್ನ ತಂದೆಯನ್ನು ಖಲೀಫನನ್ನಾಗಿ ಮಾಡಿದಾಗ ಮತ್ತು ಅಲ್ಲಾಹನು ಅವರಿಗೆ ಅಮಾರತ್ತನ್ನು ನೀಡಿದಾಗ ಖಿಲಾಫತ್‌ನ ಪ್ರಾರಂಭದಲ್ಲಿ ಅವರಿಗೆ(ರ) ನಾಲ್ಕು ದಿಕ್ಕಿನಿಂದಲೂ ಪಿತೂರಿತನಗಳು ಹುಟ್ಟಿದವು, ಪ್ರವಾದಿತ್ವದ ಸುಳ್ಳು ಹಕ್ಕುದಾರರ ಅಲೆಗಳು ಮತ್ತು ಚಟುವಟಿಕೆಗಳನ್ನು ನೀವು ಎಲ್ಲಾ ಕಡೆಯಿಂದ ನೋಡಿದ್ದೀರಿ ಮತ್ತು ಕಪಟ ಧರ್ಮಭ್ರಷ್ಟರ ದಂಗೆಯನ್ನು ನೀವು ನೋಡಿದ್ದೀರಿ ಮತ್ತು ನೀವು ಅನುಭವಿಸಿದ ನೋವುಗಳು ಒಂದು ವೇಳೆ ಅವು ಪರ್ವತದ ಮೇಲೆ ಬೀಳುತ್ತಿದ್ದರೆ ಅದು ಭೂಮಿಗೆ ಅಂಟಿಕೊಳ್ಳುತ್ತುತ್ತು ಮತ್ತು ಕುಸಿದು ತುಂಡು ತುಂಡಾಗಿ ಭೂಮಿಗೆ ಬೀಳುತ್ತಿತ್ತು ಆದರೆ ನಿಮಗೆ ಪ್ರವಾದಿಗಳಿಗೆ ನೀಡಿದ ರೀತಿಯಲ್ಲಿ ಸಬರ್(ತಾಳ್ಮೆ) ನೀಡಲಾಗಿತ್ತು. ಎಲ್ಲಿಯವರೆಗೆ ಎಂದರೆ ಅಲ್ಲಾಹನ ಬೆಂಬಲವು ಬಂದು ತಲುಪಿತು ಮತ್ತು ಸುಳ್ಳು ಪ್ರವಾದಿಗಳನ್ನು ಕೊಲ್ಲಲಾಯಿತು ಮತ್ತು ಧರ್ಮಭ್ರಷ್ಟರನ್ನು ನಾಶಗೊಳಿಸಲಾಯಿತು (ಸುಳ್ಳು ಪ್ರವಾದಿಗಳನ್ನು ಕೊಲ್ಲಲಾಗಿದೆ ಮತ್ತು ಧರ್ಮಭ್ರಷ್ಟರನ್ನು ಕೊಲ್ಲಲಾಗಿದೆ) ಪಿತೂರಿಗಳನ್ನು ದೂರಗೊಳಿಸಲಾಯಿತು, ತೊಂದರೆಗಳನ್ನು ದೂರಗೊಳಿಸಲಯಿತು ಮತ್ತು ಖಿಲಾಫತ್ತಿನ ವಿಷಯವು ದೃಢಗೊಳಿಸಲಾಯಿತು ಮತ್ತು ಅಲ್ಲಾಹನು ಮುಮಿನ್‌ರನ್ನು ತೊಂದರೆಗಳಿಂದ ಉಳಿಸಿಕೊಂಡನು ಮತ್ತು ಅವರ ಭಯಭೀತಿಯನ್ನು ಶಾಂತಿಯನ್ನಾಗಿ ಪರಿವರ್ತಿಸಿದನು ಮತ್ತು ಅವರಿಗಾಗಿ ಅವರ ಧರ್ಮವನ್ನು ದೃಢವಾಗಿ ನೆಲೆನಿಲ್ಲಿಸಿದನು ಮತ್ತು ಒಂದು ಜಗತ್ತನ್ನು

ಸತ್ಯಕ್ಕಾಗಿ ಸ್ಥಾಪಿಸಿದನು ಮತ್ತು ಭ್ರಷ್ಟರ ಮುಖವನ್ನು ಕಪ್ಪಾಗಿಸಿದನು ಮತ್ತು ತನ್ನ ವಾಗ್ದಾನವನ್ನು ಪೂರೈಸಿದನು ಮತ್ತು ತನ್ನ ಸೇವಕನಿಗೆ (ಅಬೂಬಕರ್(ರ)) ಸಹಾಯ ನೀಡಿದನು. ಅವನು ವಿದ್ರೋಹಿ ಸರದಾರರನ್ನು ಹಾಗೂ ವಿಗ್ರಹಗಳನ್ನು ನಾಶಪಡಿಸಿದನು ಮತ್ತು ಅವಿಶ್ವಾಸಿಗಳ ಹೃದಯದಲ್ಲಿ ಎಂತಹ ಭಯವನ್ನು ಹಾಕಿದನು ಎಂದರೆ ಅವರು ಹಿಂದಿರುಗಿದರು ಮತ್ತು (ಅಂತಿಮವಾಗಿ) ಅವರು ಪಶ್ಚಾತ್ತಾಪಪಟ್ಟರು ಮತ್ತು ಅಲ್ಲಾಹನ ವಾಗ್ದಾನವಾಗಿತ್ತು ಅವನು ಎಲ್ಲಾ ಸತ್ಯಗಳಲ್ಲಿ ಸತ್ಯವಾಗಿದ್ದಾನೆ. ಆದ್ದರಿಂದ (ಹಝ್‌ರತ್ ಅಬುಬಕರ್) ಸಿದ್ದಿಕ್(ರ) ಅವರ ಎಲ್ಲಾ ಪರಿಕರಗಳು ಮತ್ತು ಚಿಹ್ನೆಗಳೊಂದಿಗೆ ಖಿಲಾಫತ್‌ನ ವಾಗ್ದಾನವನ್ನು ಹೇಗೆ ಪೂರೈಸಲಾಯಿತು ಎಂಬುದನ್ನು ಯೋಚಿಸಿ. (ಸಿರ್‍ರುಲ್ ಖಿಲಾಫಹ್, ಅನುವಾದಕ, ಪುಟ 49–50, ರೂಹಾನಿ ಖಝಾಇನ್, ಸಂಪುಟ–8, ಪುಟ–335)

ಹಝ್ರ‌ತ್ ಅಬೂಬಕರ್(ರ)ರಿಗೆ ಆರಂಭದಲ್ಲೇ ಐದು ರೀತಿಯ ದುಃಖಗಳನ್ನು ಮತ್ತು ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿತ್ತು. ಒಂದು, ಹಝ್ರ‌ತ್ ಪೈಗಂಬರ್(ಸ)ರ ನಿಧನ ಮತ್ತು ವಿಯೋಗದ ದುಃಖ. ಎರಡು, ಖಿಲಾಫತಿನ ಚುನಾವಣೆ ಮತ್ತು ಸಮುದಾಯದಲ್ಲಿ ಪಿತೂರಿ ಮತ್ತು ಭಿನ್ನಾಭಿಪ್ರಾಯದ ಭಯಾಶಂಕೆ. ಮೂರು, ಉಸಾಮರ ಸೈನ್ಯವನ್ನು ಕಳುಹಿಸುವುದರ ಬಗ್ಗೆ ಇದ್ದ ಸಮಸ್ಯೆ. ನಾಲ್ಕು, ಮುಸ್ಲಿಮರೆಂದು ಹೇಳಲ್ಪಡುವವರು ಕೂಡ ಝಕಾತ್ ನೀಡುವುದನ್ನು ನಿರಾಕರಿಸುವುದು ಮತ್ತು ಮದೀನದ ಮೇಲೆ ದಾಳಿ ನಡೆಸುವುದು. ಅದನ್ನು ಚರಿತ್ರೆಯಲ್ಲಿ ಫಿತ್ನ ಮಾನಿಈನೇ ಝಕಾತ್ ಎಂದು ಹೇಳಲಾಗುತ್ತದೆ. ಎಂದರೆ ಝಕಾತ್ ಕೊಡದೇ ಇರುವವರ ಪಿತೂರಿ. ಐದು, ಧರ್ಮತ್ಯಾಗಿಗಳ ಪಿತೂರಿ, ಎಂದರೆ ಬಹಿರಂಗವಾಗಿ ದಂಗೆ ಮತ್ತು ಯುದ್ಧದ ಘೋಷಣೆ ಮಾಡಿದ ದುಷ್ಟರು ಮತ್ತು ವಿದ್ರೋಹಿಗಳು. ಸ್ವತಃ ಪ್ರವಾದಿಯರಾಗಿದ್ದೇವೆ ಎಂದು ವಾದಿಸುವವವರು ಈ ದಂಗೆಯಲ್ಲಿ ಭಾಗಿಯಾದರು. ಭಯದ ಈ ಎಲ್ಲ ಅವಸ್ಥೆಗಳಲ್ಲಿ ವಿಪತ್ತುಗಳನ್ನು ಮತ್ತು ಪಿತೂರಿಗಳನು ಬೇರುಸಹಿತ ಕಿತ್ತುಹಾಕುವುದರಲ್ಲಿ ಅಲ್ಲಾಹನು ಹಝ್ರ‌ತ್ ಅಬೂಬಕರ್(ರ)ರಿಗೆ ಯಶಸ್ಸು ನೀಡಿದನು.

ನೀತಿವಂತ ತೀರ್ಪುಗಾರರಾದ ಹಝ್ರ‌ತ್ ಮಸೀಹ್ ಮೌಊದ್(ಅ)ರ ಒಂದು ದೀರ್ಘವಾದ ಉಲ್ಲೇಖವಿದೆ. ಅದನ್ನೂ ಮುಂದಿರಿಸುತ್ತೇನೆ. ಅದರಲ್ಲಿ ಅವರು ಹಝ್ರ‌ತ್ ಅಬೂಬಕರ್(ರ) ಮತ್ತು ಮೂಸಾ(ಅ)ರ ಮೊದಲ ಖ಼ಲೀಫರಾದ ಯೂಶಅ್ ಬಿನ್ ನೂನ್‌ರ ನಡುವೆ ಇರುವ ಹೋಲಿಕೆ ಮತ್ತು ಸಾಮ್ಯತೆಯನ್ನು ಮುಂದಿರಿಸುತ್ತಾ ಹಝ್ರ‌ತ್ ಅಬೂಬಕರ್(ರ)ರಿಗೆ ಎದುರಿಸಬೇಕಾಗಿ ಬಂದ ಸಮಸ್ಯೆಗಳು, ವಿಪತ್ತುಗಳು, ವಿಜಯಗಳು ಹಾಗೂ ಯಶಸ್ಸುಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಪವಿತ್ರ ಖುರ್‌ಆನಿನ ಯಾವ ವಚನದಲ್ಲಿ ಎರಡೂ ಜಮಾಅತುಗಳ ಎಂದರೆ ಮೂಸವೀ ಖ಼ಿಲಾಫತಿನ ಪರಂಪರೆ ಮತ್ತು ಮುಹಮ್ಮದೀ ಖ಼ಿಲಾಫತಿನ ಪರಂಪರೆಯ ಸಮಾನತೆಯ ಬಗ್ಗೆ ಖಚಿತವಾಗಿ ಮತ್ತು ಸ್ಪಷ್ಟವಾಗಿ ವಿವರಿಸಲಾಗಿದೆಯೋ ಆ ವಚನ ಹೀಗಿದೆ: **ವಅದಲ್ಲಾಹುಲ್ಲಝೀನ ಆಮನೂ ಮಿನ್‌ಕುಮ್ ವ ಅಮಿಲುಸ್ಸಾಲಿಹಾತಿ ಲಯಸ್ತಖ್ಲಿಫನ್ನಹುಮ್ ಫಿಲ್ ಅರ್ಝಿ ಕಮಸ್ತಖ್ಲಫಲ್ಲಝೀನ ಮಿನ್ ಖಬ್ಲಿಹಿಮ್** ಎಂದರೆ, ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನು ಎಂದು ವಾಗ್ದಾನ ಮಾಡಿರುವನು. ಮುಹಮ್ಮದೀ ಖ಼ಲೀಫರಿಗೆ ಮೂಸವೀ ಖಲೀಫರೊಂದಿಗೆ ಹೋಲಿಕೆ ಇರಬೇಕೆಂದು ಅದರಂತೆಯೇ ಎಂಬ ಪದವನ್ನು ಮುಂದಿರಿಸುವಾಗ ತಿಳಿದುಬರುತ್ತದೆ. ಇದರಿಂದ ಎರಡೂ ಪರಂಪರೆಗಳಲ್ಲೂ ಹೋಲಿಕೆ ಇರಲೇ ಬೇಕೆಂದು ನಮಗೆ ಅಂಗೀಕರಿಸಬೇಕಾಗುವುದು. ಈ ಹೋಲಿಕೆಯ ಮೊದಲ ಬುನಾದಿ ಹಾಕುವವರು ಹಝ್ರ‌ತ್ ಅಬೂಬಕರ್(ರ) ಮತ್ತು ಈ ಸಾಮ್ಯತೆಯ ಕೊನೆಯ ಮಾದರಿಯನ್ನು ತೋರಿಸುವವರು ಮುಹಮ್ಮದೀ ಖ಼ಿಲಾಫತಿನ ಕೊನೆಯ ಖ಼ಲೀಫರಾದ ಖ಼ಾತಮುಲ್ ಖ಼ುಲಫರಾದ ವಾಗ್ದತ್ತ ಮಸೀಹರಾಗಿರುವರು. ಯಶೂಅ್ ಬಿನ್ ನೂನ್ ಮತ್ತು ಹಝ್ರ‌ತ್ ಅಬೂಬಕರ್(ರ)ರ ಹೋಲಿಕೆಯನ್ನು ಎರಡೂ ಖ಼ಿಲಾಫತುಗಳ ಆರಂಭದದಲ್ಲೂ ಹಾಗೂ ಹಝ್ರ‌ತ್ ಈಸಾ ಬಿನ್ ಮರ್‌ಯಮ್ ಮತ್ತು ಈ ಸಮುದಯದ ವಾಗ್ದತ್ತ ಮಸೀಹ್‌ರ ಹೋಲಿಕೆಯನ್ನು ಎರಡೂ ಖ಼ಿಲಾಫತುಗಳ ಕೊನೆಯಲ್ಲೂ ಅಲ್ಲಾಹನು ಸ್ಪಷ್ಟವಾಗಿ ತೋರಿಸಿದನು. ಹಝ್ರ‌ತ್ ಪೈಗಂಬರ್(ಸ)ರ ನಿಧನದ ನಂತರ ಖ಼ಿಲಾಫತಿಗಾಗಿ ಅಲ್ಲಾಹನು ಆಯ್ಕೆ ಮಾಡಿದ ಮೊದಲ ವ್ಯಕ್ತಿಯಾದ ಹಝ್ರ‌ತ್ ಅಬೂಬಕರ್(ರ)ರನ್ನು ಹಝ್ರ‌ತ್ ಯೂಶಅ್ ಬಿನ್ ನೂನ್‌ರಿಗೆ ಹೋಲಿಸಿ ಹೇಳಲಾಗಿದೆ. ಅತ್ಯಂತ ಹೆಚ್ಚಿನ ತೀಕ್ಷ್ಣಗ್ರಹಿಕೆ ಮತ್ತು ದೀರ್ಘದೃಷ್ಟಿಯ ಆತ್ಮವನ್ನು ಹಝ್ರ‌ತ್ ಅಬೂಬಕರ್(ರ)ರಲ್ಲಿ ಊದಲಾಯಿತು. ಎಲ್ಲಿಯ ವರೆಗೆ ಎಂದರೆ ಹಝ್ರ‌ತ್ ಈಸಾ ಮಸೀಹ್‌ರು ಜೀವಂತರಾಗಿರುವರು ಎಂಬ ತಪ್ಪಾದ ವಿಶ್ವಾಸದ ಕಾರಣದಿಂದ ಖ಼ಾತಮುಲ್ ಖ಼ುಲಫರಾದ ವಾಗ್ದತ್ತ ಮಸೀಹ್‌ರಿಗೆ ಎದುರಿಸಬೇಕಾಗಿ ಬರಬಹುದಾಗಿದ್ದ ಜನರ ಎಲ್ಲ ಸಂಶಯಗಳನ್ನು ಹಝ್ರ‌ತ್ ಅಬೂಬಕರ್(ರ) ಪರಿಪೂರ್ಣ ಸ್ಪಷ್ಟತೆಯೊಂದಿಗೆ ಬಗೆಹರಿಸಿದ್ದರು. ಇದರಿಂದ ಹಿಂದಿನ ಪ್ರವಾದಿಗಳು ಎಲ್ಲರೂ ಮೃತಪಟ್ಟಿರುವರು ಎಂಬುವುದನ್ನು ನಂಬದ ಸಹಾಬಿಯರು ಯಾರು ಇರಲಿಲ್ಲ. ಮಾತ್ರವಲ್ಲ ಹಝ್ರ‌ತ್ ಮೂಸಾ(ಅ)ರ ನಿಧನದ ನಂತರ ಬನೀ ಇಸ್ರಾಈಲರು ಹಝ್ರ‌ತ್ ಯಶೂಅ್ ಬಿನ್ ನೂನ್‌ರಿಗೆ ವಿಧೇಯರಾಗಿದ್ದ ಹಾಗೆಯೇ ಎಲ್ಲ ವಿಷಯಗಳಲ್ಲಿ ಎಲ್ಲ ಸಹಾಬಿಯರು ಹಝ್ರ‌ತ್ ಅಬೂಬಕರ್(ರ)ರನ್ನು ಅನುಸರಿಸಿದರು. ಹಝ್ರ‌ತ್ ಪೈಗಂಬರ್(ಸ)ರಿಗೆ ಅಲ್ಲಾಹನು ನೆರವು ನೀಡಿದಂತೆಯೇ, ಹಝ್ರ‌ತ್ ಅಬೂಬಕರ್(ರ)ರಿಗೂ ಅಲ್ಲಾಹನು ಮೂಸಾ ಮತ್ತು ಯಶೂಅ್ ಬಿನ್ ನೂನ್‌ರ ಮಾದರಿಯಲ್ಲೇ ಸಹಾಯ ಮಾಡಿದನು. ಯಶೂಅ್ ಬಿನ್ ನೂನ್‌ರನ್ನು ಅನುಗ್ರಹಿಸಿದಂತೆಯೇ ಹಝ್ರ‌ತ್ ಅಬೂಬಕರ್(ರ)ರನ್ನು ಅಲ್ಲಾಹನು ಅನುಗ್ರಹಿಸಿದನು. ಯಾವನೇ ಶತ್ರುವಿಗೆ ಅವರನ್ನು ಎದುರಿಸಲು ಸಾಧ್ಯವಾಗಿರಲಿಲ್ಲ. ಉಸಾಮರ ಸೈನ್ಯಕ್ಕೆ ಸಂಬಂಧಿಸಿ ಪೂರ್ತಿಯಾಗದ ಕೆಲಸ ಮೂಸಾ(ಅ)ರಿಂದ ಪೂರ್ತಿಯಾಗದ ಕೆಲಸದೊಂದಿಗೆ ಸಮಾನತೆಯನ್ನು ಹೊಂದಿದೆ. ಉಸಾಮರ ಸೈನ್ಯಕ್ಕೆ ಸಂಬಂಧಿಸಿದ ಕೆಲಸ ಹಝ್ರ‌ತ್ ಅಬೂಬಕರ್(ರ)ರಿಂದ ಈಡೇರಿತು. ಹಝ್ರ‌ತ್ ಅಬೂಬಕರ್(ರ) ಮತ್ತು ಹಝ್ರ‌ತ್ ಯಶೂಅ್ ಬಿನ್ ನೂನ್‌ರ ನಡುವೆ ಇರುವ ಒಂದು ವಿಸ್ಮಯಕರವಾದ ಸಮಾನತೆ ಏನೆಂದರೆ, ಮೂಸಾ(ಅ)ರ ಮರಣದ ಮಾಹಿತಿ ಮೊತ್ತಮೊದಲು ಹಝ್ರ‌ತ್ ಯೂಶಅ್‌ರಿಗೆ ಆಗಿತ್ತು. ಹಝ್ರ‌ತ್ ಮೂಸಾ(ಅ)ರ ಮರಣದ ಕುರಿತು ಯಹೂದಿಯರಿಗೆ ಸಂಶಯ ಅಥವಾ ಭಿನ್ನಾಭಿಪ್ರಾಯ ಉಂಟಾಗದಿರಲಿಕ್ಕಾಗಿ ಮೂಸಾ(ಅ) ನಿಧನರಾದರು ಎಂಬ ದಿವ್ಯವಾಣಿಯನ್ನು ಅಲ್ಲಾಹನು ತಡಮಾಡದೇ ಯಶೂಅ್‌ರ ಹೃದಯದಲ್ಲಿ ಅವತೀರ್ಣಗೊಳಿಸಿದನು. ಅದರ ಬಗ್ಗೆ ಬೈಬಲಿನಲ್ಲಿ ಪ್ರಸ್ತಾಪವಿದೆ. ಅದೇ ರೀತಿಯಲ್ಲಿ ಹಝ್ರ‌ತ್ ಪೈಗಂಬರ್(ಸ)ರ ಮರಣದ ಬಗ್ಗೆ ಹಝ್ರ‌ತ್ ಅಬೂಬಕರ್(ರ)ರಿಗೆ ದೃಢವಿಶ್ವಾಸ ಉಂಟಾಗಿತ್ತು. ಹಝ್ರ‌ತ್ ಪೈಗಂಬರ್(ಸ)ರ ಅನುಗ್ರಹೀತ ದೇಹವನ್ನು ಚುಂಬಿಸುತ್ತಾ ಅವರು ಹೇಳಿದರು: ನೀವು ಜೀವಂತರಾಗಿರುವಾಗಲೂ ನಿಧನರಾದ ನಂತರವೂ ಪರಿಶುದ್ಧರಾಗಿರುವಿರಿ. ಅನಂತರ ಹಝ್ರ‌ತ್ ಪೈಗಂಬರ್(ಸ)ರ ಜೀವದ ಬಗ್ಗೆ ಕೆಲವು ಸಹಾಬರ ಹೃದಯಗಳಲ್ಲಿ ಉಂಟಾಗಿದ್ದ ಸಂಶಯಗಳನ್ನು ಹಝ್ರ‌ತ್ ಅಬೂಬಕರ್(ರ) ಒಂದು ಸಾರ್ವಜನಿಕ ಸಭೆಯಲ್ಲಿ ಪವಿತ್ರ ಖುರ್‌ಆನಿನ ವಚನಗಳ ಆಧಾರದಲ್ಲಿ ದೂರ ಮಾಡಿದರು. ಅದರೊಂದಿಗೆ ಹಝ್ರ‌ತ್ ಪೈಗಂಬರ್(ಸ)ರ ಹದೀಸುಗಳನ್ನು ಸೂಕ್ಷ್ಮವಾಗಿ ಅರಿಯದ ಕಾರಣದಿಂದ ಹಝ್ರ‌ತ್ ಈಸಾ ಮಸೀಹರ ಜೀವಂತ ಇರುವಿಕೆ ಬಗ್ಗೆ ಕೆಲವರಲ್ಲಿ ಇರುವ ತಪ್ಪುಗ್ರಹಿಕೆಯನ್ನು ಕೂಡ ಅವರು ಕಿತ್ತೆಸೆದರು. ಧರ್ಮದ ಕಠಿಣ ಶತ್ರುಗಳನ್ನು, ಗಲಭೆಕೋರರನ್ನು ಮತ್ತು ಸುಳ್ಳುವಾದಿಗಳನ್ನು ಹಝ್ರ‌ತ್ ಯಶೂಅ್ ಬಿನ್ ನೂನ್ ನಾಶಪಡಿಸಿದ ಹಾಗೆಯೇ ಅನೇಕ ಗಲಭೆಗೋರರು ಮತ್ತು ಸುಳ್ಳುವಾದಿಗಳು ಹಝ್ರ‌ತ್ ಅಬೂಬಕರ್‌ರ(ರ) ಕೈಗಳಿಂದ ಕೊಲ್ಲಲ್ಪಟ್ಟರು. ಬನೀ ಇಸ್ರಾಈಲರು ಕನ್‌ಆನಿ ಶತ್ರುಗಳ ಮೇಲೆ ವಿಜಯ ಸಾಧಿಸುವುದಕ್ಕೆ ಮುಂಚಿತವಾಗಿ ನಾಜೂಕಾದ ಸಮಯದಲ್ಲಿ ಹಝ್ರ‌ತ್ ಮೂಸಾ(ಅ) ಮಾರ್ಗದಲ್ಲೇ ಮೃತಪಟ್ಟರು. ಅನೇಕ ಬೇರೆ ಕಾರ್ಯಗಳು ಮಾಡಲು ಬಾಕಿಯಿದ್ದುವು. ಸುತ್ತಮುತ್ತ ಶತ್ರುಗಳ ಉಪದ್ರಗಳು ಇದ್ದುವು. ಹಝ್ರ‌ತ್ ಮೂಸಾ(ಅ)ರ ನಿಧನದ ನಂತರ ಇನ್ನೂ ಅಪಾಯಕಾರಿಯಾದ ಕಾಲ ಉಂಟಾಯಿತು. ಅದೇ ರೀತಿಯಲ್ಲಿ ಹಝ್ರ‌ತ್ ಪೈಗಂಬರ್(ಸ)ರ ನಿಧನದ ನಂತರ ಒಂದು ಅಪಾಯಕಾರಿಯಾದ ಕಾಲ ಉಂಟಾಯಿತು. ಅರೇಬಿಯದ ಅನೇಕ ಪಂಗಡದವರು ಧರ್ಮತ್ಯಾಗ ಮಾಡಿದ್ದರು. ಕೆಲವರು ಝಕಾತ್ ಪಾವತಿ ಮಾಡುವುದನ್ನು ನಿರಾಕರಿಸಿದರು. ಅನೇಕ ಸುಳ್ಳುಪ್ರವಾದಿಗಳು ಎದ್ದುನಿಂತಿದ್ದರು. ಇಂತಹ ಸ್ಥಿತಿಯಲ್ಲಿ ಶಕ್ತವಾದ ಹೃದಯವಿರುವ, ಸ್ಥೈರ್ಯವಂತರಾದ, ದೃಢವಿಶ್ವಾಸದ, ಧೈರ್ಯವಂತ ಮತ್ತು ಶೂರರಾದ ಖ಼ಲೀಫರ ಆವಶ್ಯಕತೆಯಿತ್ತು. ಆಗ ಹಝ್ರ‌ತ್ ಅಬೂಬಕರ್(ರ) ಖ಼ಲೀಫರಾಗಿ ನಿಶ್ಚಯಿಸಲ್ಪಟ್ಟರು. ಖ಼ಲೀಫರಾಗುತ್ತಲೇ ಅವರಿಗೆ ಅನೇಕ ದುಃಖಗಳನ್ನು ಎದುರಿಸಬೇಕಾಗಿ ಬಂತು. ಹಝ್ರ‌ತ್ ಆಯಿಶ(ರ) ಹೇಳುತ್ತಾರೆ: ನನ್ನ ತಂದೆಯು ಹಝ್ರ‌ತ್ ಪೈಗಂಬರ್(ಸ)ರ ಖ಼ಲೀಫರಾದಾಗ ಅನೇಕ ಪಿತೂರಿಗಳು, ಅರೇಬಿಯರ ದಂಗೆಗಳು ಮತ್ತು ಸುಳ್ಳು ಪ್ರವಾದಿಗಳು ಎದ್ದ ಕಾರಣದಿಂದ ನನ್ನ ತಂದೆಗೆ ಉಂಟಾದ ವಿಪತ್ತುಗಳು ಮತ್ತು ದುಃಖಗಳು ಯಾವುದಾದರೂ ಪರ್ವತದ ಮೇಲೆ ಬಿದ್ದಿದ್ದರೆ ಅದು ನುಚ್ಚುನೂರಾಗಿ ನೆಲಸಮವಾಗುತ್ತಿತ್ತು. ಆದರೆ ಅಲ್ಲಾಹನ ಪ್ರವಾದಿಯ ನಿಧನದ ನಂತರ ಪ್ರವಾದಿಯ ಖ಼ಲೀಫರಾಗಿ ಯಾರಾದರೂ ನಿಶ್ಚಯಿಸಲ್ಪಟ್ಟರೆ ಅವರಿಗೆ ಧೈರ್ಯ, ಸ್ಥೈರ್ಯ, ವಿವೇಕವನ್ನು ಅಲ್ಲಾಹನು ದಯಪಾಲಿಸುತ್ತಾನೆ. ಯಶೂಅ್‌ನ ಗ್ರಂಥದ ಮೊದಲ ಭಾಗದ ಆರನೇ

ವಚನದಲ್ಲಿ ಹಝ್ರತ್ ಯಶೂಅ್‌ರೊಡನೆ ಅಲ್ಲಾಹನು ಇದೇ ರೀತಿಯಲ್ಲಿ ಹೇಳಿದ್ದಾನೆ. ಎಂದರೆ ಹಝ್ರತ್ ಯಶೂಅ್‌ರೊಡನೆ ಅಲ್ಲಾಹನು ಹೀಗೆ ಹೇಳಿದ್ದನು; ಮೂಸಾ ಮೃತಪಟ್ಟಿರುವರು. ಈಗ ನೀನು ಶಕ್ತನಾಗು, ಧೈರ್ಯಶಾಲಿಯಾಗು. ಇದೇ ಸಂಗತಿ ವಿಧಿ ಪ್ರಕಾರ ಹಝ್ರತ್ ಅಬೂಬಕರ್(ರ)ರ ಹೃದಯದಲ್ಲೂ ಹಾಕಲಾಯಿತು. ಆದರೆ ಶರೀಅತಿನ ದಿವ್ಯವಾಣಿ ಎಂಬ ರೀತಿಯಲ್ಲಿ ಅಲ್ಲ. ಸಮಾನತೆ ಮತ್ತು ಹೋಲಿಕೆಗಳಿಂದ ಅಬೂಬಕರ್ ಬಿನ್ ಖಹಾಫ ಮತ್ತು ಯಶೂಅ್ ಬಿನ್ ನೂನ್ ಒಬ್ಬರೇ ವ್ಯಕ್ತಿಯೆಂಬಂತೆ ತೋರುತ್ತದೆ. ಇಬ್ಬರ ಖಿಲಾಫತಿನ ಸಮಾನತೆಗಳು ಸ್ಪಷ್ಟವಾಗಿ ಕಾಣಬಹುದಾಗಿದೆ. ಹಝ್ರತ್ ಮೂಸಾ(ಅ)ರ ನಿಧನದ ನಂತರ ಎಲ್ಲರೂ ಯೂಶಅ್ ಬಿನ್ ನೂನ್‌ರ ಮಾತುಗಳನ್ನು ಅಂಗೀಕರಿಸಿದರು. ಯಾರೂ ಭಿನ್ನಾಭಿಪ್ರಾಯ ಹೊಂದಲಿಲ್ಲ. ಎಲ್ಲರೂ ಅನುಸರಿಸಿದರು. ಅದೇ ರೀತಿಯ ಘಟನೆ ಹಝ್ರತ್ ಅಬೂಬಕರ್(ರ)ರ ಕಾಲದಲ್ಲೂ ನಡೆಯಿತು. ಎಲ್ಲರೂ ಹಝ್ರತ್ ಪೈಗಂಬರ್(ಸ)ರ ಅಗಲುವಿಕೆಯಿಂದ ದುಃಖಿತರಾದ ನಂತರ ಮನಸ್ಸಾರೆ ಹಝ್ರತ್ ಅಬೂಬಕರ್(ರ)ರ ಖಿಲಾಫತ್ತನ್ನು ಅಂಗೀಕರಿಸಿದರು. ಒಟ್ಟಿನಲ್ಲಿ ಎಲ್ಲ ರೀತಿಯಲ್ಲೂ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಹಝ್ರತ್ ಯಶೂಅ್ ಬಿನ್ ನೂನ್(ರ)ರೊಂದಿಗೆ ಹೋಲಿಕೆ ಇರುವುದಾಗಿ ಸಾಬೀತಾಗಿದೆ. ಹಝ್ರತ್ ಮೂಸಾ(ಅ)ರಿಗೆ ಅಲ್ಲಾಹನು ನೆರವು ನೀಡುತ್ತಿದ್ದ ರೀತಿಯಲ್ಲೇ ಹಝ್ರತ್ ಯಶೂಅ್ ಬಿನ್ ನೂನ್‌ರಿಗೆ ಅಲ್ಲಾಹನು ನೆರವು ನೀಡುತ್ತಿದ್ದನು. ಅದೇ ರೀತಿಯಲ್ಲಿ ಎಲ್ಲ ಸಹಾಬಿಯರ ಮುಂದೆ ಅಲ್ಲಾಹನು ಹಝ್ರತ್ ಅಬೂಬಕರ್(ರ)ರ ಕೆಲಸಗಳಲ್ಲಿ ಅನುಗ್ರಹ ಸುರಿಸಿದನು. ಪ್ರವಾದಿಗಳ ಹಾಗೆಯೇ ಅವರಿಗೆ ಯಶಸ್ಸು ನೀಡಿದನು. ಅವರು ಗಲಭೆಗೋರರನ್ನು ಮತ್ತು ಸುಳ್ಳುವಾದಿಗಳನ್ನು ಅಲ್ಲಾಹನಿಂದ ಶಕ್ತಿ ಮತ್ತು ಪ್ರತಾಪವನ್ನು ಗಳಿಸಿ ಕೊಂದು ಹಾಕಿದರು. ಹಝ್ರತ್ ಪೈಗಂಬರ್(ಸ)ರ ಜೊತೆಗೆ ಅಲ್ಲಾಹನು ಇದ್ದ ಹಾಗೆಯೇ ಹಝ್ರತ್ ಅಬೂಬಕರ್(ರ)ರ ಜೊತೆಗೂ ಇದ್ದಾನೆ ಎಂದು ಇದರಿಂದ ಸಹಾಬಿಯರಿಗೆ ತಿಳಿಯುವಂತಾಯಿತು.

ಮತ್ತೊಂದು ಆಶ್ಚರ್ಯಕರವಾದ ಸಮಾನತೆ ಹಝ್ರತ್ ಅಬೂಬಕರ್(ರ)ರಿಗೆ ಹಝ್ರತ್ ಯಶೂಅ್ ಬಿನ್ ನೂನ್‌ರೊಂದಿಗೆ ಇದೆ. ಅದೇನೆಂದರೆ ಹಝ್ರತ್ ಯಶೂಅ್ ಬಿನ್ ನೂನ್‌ರಿಗೆ ತನ್ನ ಸೈನ್ಯದೊಂದಿಗೆ ಯರ್‌ದನ್ ಎಂಬ ಅಪಾಯಕಾರಿ ನದಿಯನ್ನು ಪಾರುಮಾಡಬೇಕಾಗಿ ಬಂದಿತ್ತು. ಯರ್‌ದನನಲ್ಲಿ ಒಂದು ಬಿರುಗಾಳಿ ಬಂದಿತ್ತು. ಅದನ್ನು ಪಾರು ಮಾಡುವುದು ಅಸಾಧ್ಯವಾಗಿತ್ತು. ಈ ಬಿರುಗಾಳಿಯನ್ನು ಪಾರು ಮಾಡದಿದ್ದರೆ ಬನೀ ಇಸ್ರಾಈಲ್ ಶತ್ರುಗಳ ಕೈಗಳಿಂದ ನಾಶವಾಗುತ್ತಿದ್ದರು. ಹಝ್ರತ್ ಮೂಸಾ(ಅ)ರ ನಂತರ ಯಶೂಅ್ ಬಿನ್ ನೂನ್‌ರಿಗೆ ತನ್ನ ಖಿಲಾಫತ್ ಕಾಲದಲ್ಲಿ ಎದುರಿಸಬೇಕಾಗಿ ಬಂದ ಮೊದಲ ಅಪಾಯಕಾರಿ ಸಂಗತಿ ಇದೇ ಆಗಿತ್ತು. ಆ ಸಮಯದಲ್ಲಿ ಅಲ್ಲಾಹನು ಯಶೂಅ್ ಬಿನ್ ನೂನ್ ಮತ್ತು ಅವರ ಸೈನ್ಯವನ್ನು ಆ ಬಿರುಗಾಳಿಯಿಂದ ಅದ್ಭುತಕರವಾಗಿ ರಕ್ಷಿಸಿದನು. ಅದೇ ರೀತಿಯಲ್ಲಿ, ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಹಝ್ರತ್ ಅಬೂಬಕರ್(ರ)ರಿಗೆ ಮತ್ತು ಒಂದು ಲಕ್ಷಕ್ಕಿಂತ ಹೆಚ್ಚು ಸಹಾಬಿಯರು ಇರುವ ಜಮಾಅತಿಗೆ ಅದಕ್ಕಿಂತ ದೊಡ್ಡ ಬಿರುಗಾಳಿಯನ್ನು ಎದುರಿಸಬೇಕಾಗಿ ಬಂತು. ಎಂದರೆ ದೇಶದಲ್ಲಿ ಕಠಿಣವಾದ ದಂಗೆಯೆದ್ದಿತ್ತು ಮತ್ತು ಅರೇಬಿಯದ ಗ್ರಾಮವಾಸಿಗಳು ಧರ್ಮತ್ಯಾಗ ಮಾಡಿದರು. ಕೆಲವರು ಝಕಾತ್ ನೀಡುವುದನ್ನು ನಿರಾಕರಿಸಿದರು. ಕೆಲವರು ಸುಳ್ಳು ಪ್ರವಾದಿತ್ವವನ್ನು ವಾದಿಸಿದರು. ಅವರೊಂದಿಗೆ ಅನೇಕ ಲಕ್ಷದಷ್ಟು ಭಾಗ್ಯಹೀನರು ಒಟ್ಟುಗೂಡಿದರು. ಶತ್ರುಗಳು ಎಷ್ಟು ಅಧಿಕವಾದರು ಎಂದರೆ, ಸಹಾಬಿಯರ ಜಮಾಅತ್ ಅವರ ಮುಂದೆ ಏನೂ ಆಗಿರಲಿಲ್ಲ. ಒಂದು ಶಕ್ತವಾದ ಬಿರುಗಾಳಿ ದೇಶದಲ್ಲಿ ವ್ಯಾಪಿಸಿತು. ಇದು ಹಝ್ರತ್ ಯೂಶಅ್ ಬಿನ್ ನೂನ್‌ರಿಗೆ ಎದುರಿಸಬೇಕಾಗಿ ಬಂದ ಪ್ರವಾಹಕ್ಕಿಂತ ಹೆಚ್ಚು ಭಯಾನಕವಾಗಿತ್ತು. ಹಝ್ರತ್ ಮೂಸಾ(ಅ)ರ ನಿಧನದ ನಂತರ ಹಝ್ರತ್ ಯೂಶಅ್ ಬಿನ್ ನೂನ್ ಕಠಿಣವಾದ ವಿಪತ್ತಿಗೆ ಗುರಿಯಾದರು. ಶಕ್ತವಾದ ಪ್ರವಾಹದಲ್ಲಿ ಸಿಲುಕಿಕೊಂಡರು. ರಕ್ಷಣೆ ಪಡೆಯಲು ಯಾವುದೇ ಹಡಗು ಇದ್ದಿರಲಿಲ್ಲ. ಎಲ್ಲ ಕಡೆಯಿಂದಲೂ ಶತ್ರುಗಳ ಭಯವಿತ್ತು. ಅದೇ ರೀತಿಯ ಆಪತ್ತು ಹಝ್ರತ್ ಅಬೂಬಕರ್(ರ)ರಿಗೆ ಎದುರಿಸಬೇಕಾಗಿ ಬಂತು. ಹಝ್ರತ್ ಪೈಗಂಬರ್(ಸ) ನಿಧನರಾದರು ಮತ್ತು ಅರೇಬಿಯರು ಧರ್ಮತ್ಯಾಗ ಮಾಡುವ ಒಂದು ಬಿರುಗಾಳಿ ವ್ಯಾಪಿಸಿತು. ಸುಳ್ಳು ಪ್ರವಾದಿಗಳ ಮತ್ತೊಂದು ಬಿರುಗಾಳಿ ಅದಕ್ಕೆ ಶಕ್ತಿ ನೀಡಿತು. ಇದು ಯಶೂಅ್‌ರಿಗೆ ಎದುರಿಸಬೇಕಾಗಿ ಬಂದ ಬಿರುಗಾಳಿಗಿಂತ ಕಮ್ಮಿಯೇನೂ ಆಗಿರಲಿಲ್ಲ. ಬದಲಾಗಿ ಅದಕ್ಕಿಂತ ಹೆಚ್ಚೇ ಆಗಿತ್ತು. ಅನಂತರ ಅಲ್ಲಾಹನ ವಚನ ಹಝ್ರತ್ ಯೂಶಅ್‌ರಿಗೆ ಬಲ ನೀಡಿದಂತೆಯೇ ಹಝ್ರತ್ ಅಬೂಬಕರ್(ರ)ರಿಗೂ ದಂಗೆಯ ಈ ಬಿರುಗಾಳಿಯ ಸಮಯದಲ್ಲಿ ಬಲ ಲಭಿಸಿತು. ಆ ಬಿರುಗಾಳಿ ಎಷ್ಟು ಕಠಿಣವಾದ ಬಿರುಗಾಳಿಯಾಗಿತ್ತು ಎಂದು ಆ ಕಾಲದ ಇಸ್ಲಾಮಿನ ಚರಿತ್ರೆಯ ಬಗ್ಗೆ ಅರಿವು ಉಳ್ಳ ವ್ಯಕ್ತಿಗೆ ಹೇಳಲು ಸಾಧ್ಯ. ಆ ಸಮಯದಲ್ಲಿ ಅಲ್ಲಾಹನ ಸಹಾಯ ಹಝ್ರತ್ ಅಬೂಬಕರ್(ರ)ರ ಜೊತೆಗೆ ಇರದಿದ್ದರೆ, ಇಸ್ಲಾಂ ಅಲ್ಲಾಹನ ಕಡೆಯಿಂದ ಆಗಿರಲಿಲ್ಲವೆಂದಾದರೆ, ಹಝ್ರತ್ ಅಬೂಬಕರ್(ರ) ನಿಜವಾದ ಖಲೀಫರಾಗಿರದಿದ್ದರೆ, ಅಂದೇ ಇಸ್ಲಾಮಿನ ಕೊನೆಯಾಗುತ್ತಿತ್ತು.

ಆದರೆ ಯೂಶಅ್ ಪ್ರವಾದಿಯ ಹಾಗೆಯೇ ಹಝ್ರತ್ ಅಬೂಬಕರ್(ರ)ರಿಗೆ ಅಲ್ಲಾಹನ ಪರಿಶುದ್ಧ ವಚನಗಳಿಂದ ಶಕ್ತಿ ಲಭಿಸಿತು. ಏಕೆಂದರೆ, ಈ ವಿಪತ್ತಿಗೆ ಮುಂಚಿತವಾಗಿಯೇ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಇದರ ಬಗ್ಗೆ ಭವಿಷ್ಯ ನುಡಿದಿದ್ದನು. ಈ ಕೆಳಗಿನ ವಚನವನ್ನು ಯಾರಾದರೂ ಗಮನವಿಟ್ಟು ಓದುವುದಾದರೆ, ಈ ವಿಪತ್ತಿನ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಮೊದಲೇ ಭವಿಷ್ಯ ನುಡಿದಿದ್ದಾನೆ ಎಂದು ತಿಳಿದುಕೊಳ್ಳುವನು. ಆ ಭವಿಷ್ಯವಾಣಿ ಇದಾಗಿತ್ತು: **ವಅದಲ್ಲಾಹುಲ್ಲಝೀನ ಆಮನೂ ಮಿನ್‌ಕುಮ್ ವ ಅಮಿಲುಸ್ಸಾಲಿಹಾತಿ ಲಯಸ್ತಖ್ಲಿಫನ್ನಹುಮ್ ಫಿಲ್ ಅರ್ಝಿ ಕಮಸ್ತಖ್ಲಫಲ್ಲಝೀನ ಮಿನ್ ಖಬ್ಲಿಹಿಮ್ ವಲಯುಮಕ್ಕಿನನ್ನ ಲಹುಮ್ ದೀನಹುಮುಲ್ಲಝಿರ್ತಝಾ ಲಹುಮ್ ವಲಯುಬದ್ದಿಲನ್ನಲಹುಮ್ ಮಿಮ್ ಬಅದಿ ಖೌಫಿಹಿಮ್ ಅಮ್‌ನಾ ಯಅ್‌ಬುದೂನನೀ ಲಾ ಯುಶ್ರಿಕೂನ ಬೀ ಶೈಅ ವಮನ್ ಕಫರ ಬಅದ ಝಾಲಿಕ ಫುಲಾಯಿಕ ಹುಮುಲ್ ಫಾಸಿಖೂನ್** ಎಂದರೆ, ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ತಾನು ಮೆಚ್ಚಿದ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು; ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು. ನೋಡಿರಿ, ಭಯದ ಕಾಲಘಟ್ಟ ಬರುವುದು ಮತ್ತು ಸಮಾಧಾನ ಇಲ್ಲವಾಗುವುದು ಎಂದೂ ಆದರೆ ಅಲ್ಲಾಹನು ಆ ಭಯದ ಕಾಲವನ್ನು ಪುನಃ ನೆಮ್ಮದಿಯನ್ನಾಗಿ ಬದಲಾಯಿಸುವನು ಎಂದೂ ಈ ವಚನದಲ್ಲಿ ಅಲ್ಲಾಹನು ಸ್ಪಷ್ಟವಾಗಿ ಹೇಳಿರುವನು. ಆದ್ದರಿಂದ ಇದೇ ಭಯದ ಸ್ಥಿತಿ ಯೂಶಅ್ ಬಿನ್ ನೂನ್‌ರಿಗೆ ಎದುರಿಸಬೇಕಾಗಿ ಬಂತು. ಅವರನ್ನು ಅಲ್ಲಾಹನು ಸಮಾಧಾನ ಪಡಿಸಿದನು. ಅದೇ ರೀತಿಯಲ್ಲಿ ಹಝ್ರತ್ ಅಬೂಬಕರ್(ರ)ರಿಗೂ ಅಲ್ಲಾಹನ ವಚನದಿಂದ ಸಮಾಧಾನ ನೀಡಲಾಯಿತು. (ತೊಹ್‌ಫಾ ಗೊಲಡ್ವಿಯಾ, ರೂಹಾನಿ ಖಝಾಇನ್, ಸಂಪುಟ–17, ಪುಟ–183–189)

ಇದರ ಉಳಿದ ವಿಶದ ವಿವರಣೆ ಮುಂದಿನ ಬಾರಿ ವಿವರಿಸುವೆನು.

ಈಗಿರುವ ಯುದ್ಧದ ಸ್ಥಿತಿಗೆ ಸಂಬಂಧಪಟ್ಟು ದುಆ ಮಾಡಿರಿ. ಇದು ಭಯಾನಕವಾಗುತ್ತಲೇ ಹೋಗುತ್ತಿದೆ. ಈಗಂತು ಅಣ್ವಸ್ತ್ರ ಯುದ್ಧದ ಬೆದರಿಕೆಗಳನ್ನು ಕೂಡ ನೀಡಲಾಗುತ್ತಿವೆ. ನಾನು ಹಿಂದೆಯೂ ಅನೇಕ ಬಾರಿ ಹೇಳಿದಂತೆ ಅದರ ಪರಿಣಾಮಗಳು ಭಯಾನಕವಾಗಿರುವುವು. ಅದರ ದುಷ್ಪರಿಣಾಮಗಳನ್ನು ಮುಂದಿನ ಪೀಳಿಗೆಗಳಿಗೂ ಸಹಿಸಬೇಕಾಗುವುವು. ಅಲ್ಲಾಹನಿಗೆ ಮಾತ್ರ ಇವರಿಗೆ ಬುದ್ಧಿ ಕೊಡಲು ಸಾಧ್ಯ.

ಈ ದಿನಗಳಲ್ಲಿ ದುರೂದ್ ಪ್ರಾರ್ಥನೆಗಳನ್ನು ಮತ್ತು ಇಸ್ತಿಗ್‌ಫಾರನ್ನು ಬಹಳವಾಗಿ ಮಾಡುತ್ತಿರಿ. ಅಲ್ಲಾಹನು ನಮ್ಮ ಪಾಪಗಳನ್ನು ಸಹ ಕ್ಷಮಿಸಲಿ ಮತ್ತು ಲೋಕದ ಆಡಳಿತಗಾರರಿಗೆ ಬುದ್ಧಿ ಮತ್ತು ವಿವೇಕವನ್ನು ನೀಡಲಿ. **ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಖಿನಾ ಅಧಾಬನ್ನಾರ್** ಎಂಬ ಪ್ರಾರ್ಥನೆಯನ್ನು ಮಾಡಬೇಕೆಂದು ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ವಿಶೇಷವಾಗಿ ಜಮಾಅತಿಗೆ ಉಪದೇಶ ನೀಡಿದ್ದರು. ರುಕೂಅ್‌ವಿನ ನಂತರ ನೆಟ್ಟಗೆ ನಿಂತು (ಇಅ್‌ತಿದಾಲ್‌ನಲ್ಲಿ) ಈ ಪ್ರಾರ್ಥನೆಯನ್ನು ಮಾಡಬೇಕೆಂದು ಅವರು ಹೇಳಿದ್ದರು. ಆದ್ದರಿಂದ ಇದನ್ನು ಸಹ ಬಹಳವಾಗಿ ಮಾಡುವ ಆವಶ್ಯಕತೆಯಿದೆ. ಅಲ್ಲಾಹನು ಒಳಿತುಗಳನ್ನು ಸಹ ದಯಪಾಲಿಸಲಿ ಮತ್ತು ಎಲ್ಲ ವಿಧದ ಬೆಂಕಿಯ ಶಿಕ್ಷೆಗಳಿಂದಲೂ ಎಲ್ಲರನ್ನೂ ಸಂರಕ್ಷಿಸಲಿ. ಆಮೀನ್.

ಸಿರಿಯದ ಸನ್ಮಾನ್ಯ ಅಬುಲ್‌ಫರಜುಲ್ ಹಸನಿ ಸಾಹಿಬ್‌ರ ಜನಾಝ ಗ಼ಾಇಬ್ ಸಹ ಇಂದು ನಾನು ನಿರ್ವಹಿಸುವೆನು. ಫೆಬ್ರವರಿ 13ರಂದು 90ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಂದೆಯಾದ ಸನ್ಮಾನ್ಯ ಮುಹಮ್ಮದುಲ್ ಹಸನಿ ಸಾಹಿಬ್ ಆರಂಭಿಕ ಅಹ್ಮದಿಯರಲ್ಲಿ ಒಬ್ಬರಾಗಿದ್ದರು. ಅವರು ಮೌಲಾನ ಜಲಾಲುದ್ದೀನ್ ಶಮ್ಸ್ ಸಾಹಿಬ್‌ರ ಮೂಲಕ ಬೈಅತ್ ಮಾಡಿದ್ದರು. ಅಬುಲ್ ಫರಜ್ ಹಸನಿ ಸಾಹಿಬ್‌ರು ಸಿರಿಯದ ಮೊದಲ ಜಮಾಅತ್ ಅಮೀರ್ ಆಗಿದ್ದ ಸನ್ಮಾನ್ಯ ಮುನೀರುಲ್‌ಹಸನಿ ಸಾಹಿಬ್‌ರ ಸಹೋದರ ಪುತ್ರರಾಗಿದ್ದರು. ಅವರ ಕಾಲದಲ್ಲೂ ನಾಇಬ್ ಅಮೀರ್ ಆಗಿ ಜಮಾಅತಿನ ಸೇವೆ

ಸಲ್ಲಿಸುತ್ತಿದ್ದರು. ನಂತರವೂ ನಾಇಬ್ ಅಮೀರ್ ಆಗಿದ್ದರು. 1933ರಲ್ಲಿ ಹುಟ್ಟಿದ್ದರು. ಚಿಕ್ಕಪ್ಪನಾದ ಮುನೀರುಲ್ ಹಸನಿ ಸಾಹಿಬ್‌ರ ಒಳಿತು, ದೇವಭಕ್ತಿ ಮತ್ತು ಜ್ಞಾನಭರಿತ ಮಾತುಕತೆಗಳಿಂದ ಪ್ರಭಾವಿತರಾಗಿದ್ದರು. ಅವರ ಕೂಟದಲ್ಲಿ ಸದಾ ಕುಳಿತುಕೊಳ್ಳುತ್ತಿದ್ದರು. 15 ವರ್ಷ ಪ್ರಾಯವಿದ್ದಾಗ ಒಂದು ದಿನ ರೇಡಿಯೊದಲ್ಲಿ ಪವಿತ್ರ ಖುರ್‌ಆನಿನ ಪಾರಾಯಣ ಕೇಳಿದಾಗ ಭಾವುಕರಾಗಿ ಅತ್ತುಬಿಟ್ಟರು. ತನ್ನ ಚಿಕ್ಕಪ್ಪರ ಬಳಿಗೆ ಹೋದರು ಮತ್ತು ನಾನು ಅಲ್ಲಾಹನು ಕುರಿತು ಇನ್ನೂ ಹೆಚ್ಚು ಅರಿಯಲು ಬಯಸುತ್ತೇನೆ ಎಂದು ಹೇಳಿದರು. ಅವರ ಚಿಕ್ಕಪ್ಪ ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ)ರ ಒಂದು ಗ್ರಂಥವನ್ನು ನೀಡಿದರು. ಪುಸ್ತಕವನ್ನು ಓದಿ ಅವರ ಹೃದಯ ಸಂಪೂರ್ಣವಾಗಿ ಬದಲಾಯಿತು. ಬೈಅತ್ ಮಾಡಲು ಬಯಸುತ್ತೇನೆ ಎಂದು ತನ್ನ ಚಿಕ್ಕಪ್ಪರೊಡನೆ ಹೇಳಿದರು. ಅವರಿಗೆ ಅಹ್ಮದಿಯಾ ಜಮಾಅತಿನ ಮೂವರು ಖ಼ಲೀಫರನ್ನು ಭೇಟಿಯಾಗಲು ಸೌಭಾಗ್ಯ ಲಭಿಸಿತ್ತು. 1955ರಲ್ಲಿ ಹಝ್ರತ್ ಖ಼ಲೀಫತುಲ್ ಮಸೀಹ್ ಸಾನಿ(ರ) ಡಮಸ್ಕಸಿಗೆ ಹೋದಾಗ ದಿವಂಗತರಿಗೆ ಅವರನ್ನು ಭೇಟಿಯಾಗುವ ಸೌಭಾಗ್ಯ ಲಭಿಸಿತ್ತು. ಆಗ ಸೆಕ್ಯೂರಿಟಿ ಸೇವೆಗಳನ್ನು ಮಾಡಲು ಸಂದರ್ಭ ಲಭಿಸಿತ್ತು. 1972ರಲ್ಲಿ ಪಾಕಿಸ್ತಾನಕ್ಕೆ ಹೋಗಲು ಮತ್ತು ಹಝ್ರತ್ ಖ಼ಲೀಫತುಲ್ ಮಸೀಹ್ ಸಾಲಿಸ್(ರ)ರ ಸಹವಾಸದಲ್ಲಿ ರಬ್ವದಲ್ಲಿ ಕೆಲವು ತಿಂಗಳುಗಳ ಕಾಲ ಇದ್ದುಕೊಂಡು ಉರ್ದು ಕಲಿಯಲು ಮತ್ತು ಜಮಾಅತಿನ ವಿಷಯಗಳನ್ನು ಸಾಕಷ್ಟು ತಿಳಿಯಲು ಅವರಿಗೆ ಸಂದರ್ಭ ಸಿಕ್ಕಿತ್ತು. ಅದೇ ವರ್ಷ ಅವರಿಗೆ ಪಾಕಿಸ್ತಾನದಿಂದ ಖಾದಿಯಾನಿಗೆ ಹೋಗಲು ಕೂಡ ಸಂದರ್ಭ ಸಿಕ್ಕಿತ್ತು. 1986ರಲ್ಲಿ ಜಲ್ಸ ಸಾಲಾನದ ಸಂದರ್ಭದಲ್ಲಿ ಬ್ರಿಟನಿಗೆ ಹೋದರು ಮತ್ತು ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್(ರ)ರನ್ನು ಭೇಟಿಯಾಗಲು ಅವರಿಗೆ ಅವಕಾಶ ಒದಗಿ ಬಂತು. 2017ರಲ್ಲಿ ಅವರಿಗೆ ಪುನಃ ಖಾದಿಯಾನಿಗೆ ಹೋಗಲು ಕೂಡ ಸಂದರ್ಭ ಸಿಕ್ಕಿತ್ತು. ಜಲ್ಸದಲ್ಲಿ ಅರಬಿ ಭಾಷೆಯಲ್ಲಿ ಅವರು ಸಂಕ್ಷಿಪ್ತವಾದ ಭಾಷಣವನ್ನು ಮಾಡಿದರು.

ದಿವಂಗತರು ಬಹಳ ಒಳ್ಳೆಯ, ಸಾತ್ವಿಕ, ಪಂಡಿತ ಮತ್ತು ಕರ್ಮನಿಷ್ಠರಾದ ಹಿರಿಯ ವ್ಯಕ್ತಿಯಾಗಿದ್ದರು. ಅವರಿಗೆ ಮಕ್ಕಳಿಲ್ಲ. ಅವರ ಪತ್ನಿ ಕೂಡ ಅಹ್ಮದಿಯಲ್ಲ.

ಸಿರಿಯ ಜಮಾಅತಿನ ಸದರ್ ಹೇಳುತ್ತಾರೆ: 2017ರಲ್ಲಿ ನಾನು ಅವರ ಜೊತೆಗೆ ಖಾದಿಯಾನ್ ಸಂರ್ದಶನಕ್ಕೆ ಹೋಗಿದ್ದೆ. ಅವರು ಬಹಳ ಹಿರಿವಯಸ್ಸಿನ ವ್ಯಕ್ತಿಯಾಗಿದ್ದರೂ ಬಹಳ ಚುರುಕಾಗಿ ನಡೆಯುತ್ತಿದ್ದರು. ರೋಗದ ಕಾರಣದಿಂದ ಮೊದಲು ಅವರು ಹೋಗಲು ಬಯಸಿರಲಿಲ್ಲ. ಅನಂತರ ಅಲ್ಲಾಹನ ಕೃಪೆಯಿಂದ ಅವರ ಮತ್ತು ಅವರ ಪತ್ನಿಯ ಕಾಯಿಲೆ ಮತ್ತು ಬಲಹೀನತೆ ದೂರವಾಯಿತು ಮತ್ತು ಖಾದಿಯಾನಿಗೆ ಹೋದರು. ಮಾತ್ರವಲ್ಲ ಮಿನಾರತುಲ್ ಮಸೀಹಿಗೆ ಏರಲು ಕೂಡ ಅವರಿಗೆ ಸೌಭಾಗ್ಯ ಲಭಿಸಿತು. ಮೊದಲು ನಡೆಯಲು ಕೂಡ ಕಷ್ಟವಾಗುತ್ತಿದ್ದ ಅವರು ಅದನ್ನು ಯುವಕರಿಗಿಂತ ವೇಗವಾಗಿ ಏರಿದರು.

ಡಾಕ್ಟರ್ ಮುಸ್ಲಿಂ ದರೂಬಿ ಸಾಹಿಬ್ ಬರೆಯುತ್ತಾರೆ: ದಿವಂಗತರು ಸಿರಿಯದ ಬಹಳ ಸಾತ್ವಿಕ ವ್ಯಕ್ತಿಯಾಗಿದ್ದರು. ಇದಕ್ಕೆ ನಾನೂ ಮತ್ತು ಇತರ ಸಹೋದರರು ಸಾಕ್ಷಿಗಳಾಗಿದ್ದೇವೆ. ಅವರು ಡಮಸ್ಕಸಿನ ಪ್ರಸಿದ್ಧ ವ್ಯಾಪಾರಿಗಳಲ್ಲಿ ಒಬ್ಬರಾಗಿದ್ದರು. ಅನುಕರಿಸಲು ಯೋಗ್ಯವಾದ ಮಾದರಿ ಪುರುಷರಾಗಿದ್ದರು. ಬಾಜಾರಿನಲ್ಲಿ ಅವರು ಬಹಳ ಹೆಸರುವಾಸಿಯಾಗಿದ್ದರು. ದಿವಂಗತರು ಬಹಳ ಬುದ್ಧಿವಂತರೂ ವಿವೇಕಿಯೂ ಆಗಿದ್ದರು. ನಿಯತವಾಗಿ ತಹಜ್ಜುದ್ ನಿರ್ವಹಿಸುತ್ತಿದ್ದರು. ಸತ್ಯಸ್ವಪ್ನಗಳನ್ನು ಕಾಣುವವರಾಗಿದ್ದರು. ಅವುಗಳಲ್ಲಿ ಅನೇಕ ಕನಸುಗಳು ಸಿರಿಯದ ಸ್ಥಿತಿಗತಿಗಳು ಮತ್ತು ಆಪತ್ತುಗಳಿಗೆ ಸಂಬಂಧಿಸಿ ಆಗಿತ್ತು. ಅನೇಕ ಮುರಬ್ಬಿಗಳು ಅರಬೀ ಕಲಿಯಲಿಕ್ಕಾಗಿ ಸಿರಿಯಕ್ಕೆ ಬರುವಾಗ ಹಸನಿ ಸಾಹಿಬ್‌ರು ಅವರನ್ನು ಬಹಳ ಗೌರವಿಸುತ್ತಿದ್ದರು. ಏಕೆಂದರೆ ಅಂತಹವರು ಖ಼ಲೀಫ಼ತುಲ್ ಮಸೀಹ್‌ರಿಂದ ಕಳುಹಿಸಲ್ಪಟ್ಟವರಾಗಿದ್ದರು ಮತ್ತು ತಬ್ಲೀಗ್ ಮಾಡಲಿಕ್ಕಾಗಿ ತಮ್ಮ ಜೀವಿತವನ್ನು ಅರ್ಪಿಸಿದವರಾಗಿದ್ದರು.

ಈಗ ತುರ್ಕಿಯಲ್ಲಿರುವ ಸಿರಿಯದ ಮಾಜಿ ಸದರ್ ಹಿಸಾಮುನ್ನಖೀಬ್ ಸಾಹಿಬ್‌ರು ಹೇಳುತ್ತಾರೆ: ದಿವಂಗತರು ಅನೇಕ ಶ್ರೇಷ್ಠ ಸ್ವಭಾವಗುಣಗಳನ್ನು ಹೊಂದಿರುವ ವ್ಯಕ್ತಿಯಾಗಿದ್ದರು. ಅವುಗಳಲ್ಲಿ ವಿಶೇಷವಾಗಿ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಅವರ ಖ಼ಲೀಫರೊಂದಿಗೆ ಇರುವ ಪ್ರೀತಿಯಾಗಿತ್ತು. ದಿವಂಗತರ ಜೊತೆಗೆ ಖಾದಿಯಾನ್ ಯಾತ್ರೆ ಮಾಡಿದ್ದನ್ನು ನಾನು ಜೀವಿತ ಪೂರ್ತಿ ಮರೆತು ಬಿಡಲು ಸಾಧ್ಯವಿಲ್ಲ. ಯಾತ್ರೆಯ ಪ್ರತಿಯೊಂದು ಸಂಗತಿ ಒಂದು ಪವಾಡದಂತೆಯಾಗಿತ್ತು. ನಾನು ಖಾದಿಯಾನಿನಲ್ಲಿ ಪೂರ್ತಿಯಾಗಿ ಅವರ ಜೊತೆಗೆ ಇದ್ದೆ. ಖ಼ಲೀಫತುಲ್ ಮಸೀಹ್‌ರಿಗೆ ಸಹಾಯ ಮತ್ತು ನೆರವು ನೀಡು ಮತ್ತು ಅವರ ಪ್ರತಿಯೊಂದು ಕೆಲಸದಲ್ಲಿ ಅನುಗ್ರಹ ಸುರಿಸು ಹಾಗೂ ಅವರಿಗೆ ದೀರ್ಘಾಯುಸ್ಸು ನೀಡು ಎಂದೇ ಆಗಿತ್ತು ಅವರ ಪ್ರಾರ್ಥನೆ. ಖ಼ಲೀಫತುಲ್ ಮಸೀಹ್‌ರ ಯಾವುದಾದರೂ ನಿರ್ದೇಶನವನ್ನು ಸಭೆಯಲ್ಲಿ ಓದಿ ಹೇಳಲಾಗುವ ವೇಳೆ, ಅದನ್ನು ಸರಿಯಾಗಿ ಆಲಿಸುವಂತಾಗಲು, ಮನವರಿಕೆ ಮಾಡುವಂತಾಗಲು ಮತ್ತು ಆನಂದಿಸುವಂತಾಗಲು ಯಾರನ್ನು ಮಾತನಾಡಲು ಬಿಡುತ್ತಿರಲಿಲ್ಲ.

ಅವರು ಬಹಳ ನಿಸ್ವಾರ್ಥ ವ್ಯಕ್ತಿಯಾಗಿದ್ದರು. ಯಾರಿಂದಲೂ ತನ್ನ ಬಗ್ಗೆ ಹೊಗಳುವುದನ್ನು ಆಲಿಸಲು ಇಷ್ಟಪಡುತ್ತಿರಲಿಲ್ಲ. ಅದನ್ನೆಲ್ಲ ಬಿಡು, ಅಲ್ಲಾಹ್ ಮತ್ತು ಅವನ ಜಮಾಅತೇ ಎಲ್ಲವೂ, ಆ ಸಂಗತಿಗಳನ್ನು ಹೇಳು ಎಂದು ಹೇಳುತ್ತಿದ್ದರು. ಅವರ ಆರೋಗ್ಯ ತೀರಾ ಕೆಟ್ಟು ಹೋದ ಕೊನೆಯ ವರ್ಷಗಳನ್ನು ಹೊರತುಪಡಿಸಿ ಅವರು ಹಝ್ರತ್ ಮಸೀಹ್ ಮೌಊದ್(ಅ)ರ ಗ್ರಂಥಗಳನ್ನು ಓದುವುದನ್ನು ಎಂದಿಗೂ ನಿಲ್ಲಿಸಿರಲಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ)ರ ತಫ್ಸೀರ್ ಕಬೀರ್‌ನೊಂದಿಗೆ ಬಹಳ ಒಲವಿತ್ತು. ಅವರೊಡನೆ ಪವಿತ್ರ ಖುರ್‌ಆನಿನ ಯಾವುದಾದರೂ ವ್ಯಾಖ್ಯಾನದ ಬಗ್ಗೆ ಕೇಳಿದರೆ ಅವರು ತಫ್ಸೀರ್ ಕಬೀರ್‌ನಲ್ಲಿರುವ ವ್ಯಾಖ್ಯಾನವನ್ನು ಹೇಳಿಕೊಡುತ್ತಿದ್ದರು.

ಯು.ಕೆ.ಯಲ್ಲಿರುವ ಅವರ ಸಹೋದರಿ ಪುತ್ರನಾದ ಮುಹಮ್ಮದ್ ಅಮ್ಮಾರ ಹಸನಿ ಸಾಹಿಬ್‌ರು ಹೇಳುತ್ತಾರೆ: ನನಗೆ 14 ವರ್ಷ ಪ್ರಾಯವಿದ್ದಾಗಿನಿಂದ ಅವರ ಜೊತೆಗೆ ಜುಮಾ ನಮಾಝಿಗೆ ಹೋಗುತ್ತಿದ್ದೆ. ಅವರ ಜೊತೆಗೆ ಮಸೀದಿಯಿಂದ ಮರಳಿ ಬರುತ್ತಿದ್ದೆ. ಮಾರ್ಗದಲ್ಲಿ ಜಮಾಅತಿನ ವಿಷಯಗಳ ಬಗ್ಗೆ ನಾನು ಪ್ರಶ್ನೆಗಳನ್ನು ಕೇಳುತ್ತಿದ್ದೆ. ಬಹಳ ವಿಶದವಾಗಿ ಅದಕ್ಕೆ ಉತ್ತರ ಕೊಡುತ್ತಿದ್ದರು. ಸಿರಿಯದಲ್ಲಿ ಜಮಾಅತಿನ ಗ್ರಂಥಗಳು ಲಭ್ಯವಾಗಿರಲಿಲ್ಲ. ಆದ್ದರಿಂದ ಜಮಾಅತಿನ ವಿಷಯಗಳನ್ನು ಜಮಾಅತಿನ ವ್ಯಕ್ತಿಗಳಿಗೆ ಹೇಳಿಕೊಡುವುದರಲ್ಲಿ ಅವರು ಬಹಳ ಹಿರಿಯ ಪಾತ್ರವನ್ನು ವಹಿಸಿದ್ದರು. ಅವರು ಉರ್ದು ಕಲಿತಿದ್ದರು. ರಬ್ವಕ್ಕೆ ಹೋಗಿ ಬಂದಾಗ ಅಲ್ಲಿಂದ ಉರ್ದು ಪುಸ್ತಕಗಳನ್ನು ತೆಗೆದುಕೊಂಡು ಬರುತ್ತಿದ್ದರು. ಅನಂತರ ಜಮಾಅತಿನ ಉರ್ದು ಪುಸ್ತಕಗಳನ್ನು ಓದಿ ಮನವರಿಕೆ ಮಾಡಿ ಅದನ್ನು ಜಮಾಅತಿನವರಿಗೆ ಹೇಳಿಕೊಡಲು ಪ್ರಯತ್ನಿಸುತ್ತಿದ್ದರು. ದಿವಂಗತರು ನಿಸ್ವಾರ್ಥ ವ್ಯಕ್ತಿಯಾಗಿದ್ದರು. ಎಂದಿಗೂ ಹುದ್ದೆಯನ್ನು ಬಯಸಿರಲಿಲ್ಲ. ಸದಾ ಸೇವಕರಾಗಿ ಇರಲು ಇಷ್ಟಪಡುತ್ತಿದ್ದರು. ಹಝ್ರತ್ ಖ಼ಲೀಫತುಲ್ ಮಸೀಹ್ ರಾಬಿಅ್(ರಹ್) ಅವರನ್ನು ಅಮೀರ್‌ರನ್ನಾಗಿ ಮಾಡಲು ಬಯಸಿದಾಗ ಅವರು ಹೇಳಿದರು: ಒಂದೇ ಕುಟುಂಬದಿಂದ ಅಮೀರ್‌ಗಳು ಆಗುತ್ತಿದ್ದಾರೆ ಎಂದು ಜನರು ಹೇಳಿಕೊಳ್ಳುವರು. ಆದ್ದರಿಂದ ಬೇರೆ ಯಾರನ್ನಾದರೂ ಮಾಡಿರಿ. ನಾನು ಅವರಿಗೆ ನೆರವಾಗುವನು ಎಂದು ಹೇಳಿದರು. ಅನಂತರ ತನಗಿಂತ ಕಿರಿಯ ಅಮೀರ್‌ರಿಗೂ ನೆರವಾದರು. ಬಹಳವಾಗಿ ನೆರವಾದರು. ನೆರವಾಗುವುದರಲ್ಲಿ ಒಂದು ಮಾದರಿ ಆಗಿದ್ದರು.

ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಎಲ್ಲ ದುಆಗಳು ಅವರ ಪತ್ನಿಯ ಪರವಾಗಿಯೂ ಈಡೇರಲಿ. ಅವರಿಗೂ ಅಹ್ಮದಿಯ್ಯತ್ ಸ್ವೀಕಾರ ಮಾಡಲು ಸೌಭಾಗ್ಯ ಲಭಿಸಲಿ. ಜುಮಾ ನಮಾಝಿನ ನಂತರ ಅವರ ಜನಾಝ಼ ಗ಼ಾಇಬ್ ನಿರ್ವಹಿಸುವೆನು. **ಇನ್‌ಶಾ ಅಲ್ಲಾಹ್.**

*********

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಕೆಲಸ ಶಿಲುಬೆ ಮುರಿಯುವುದು ಆಗಿರುತ್ತದೆ. ಈಗಿನ ಕಾಲಕ್ಕೆ ಅದೇ ಅವಶ್ಯಕತೆಯಾಗಿತ್ತು. ಅದರ ಸಲುವಾಗಿಯೇ ಅವರ ಹೆಸರು "ವಾಗ್ದತ್ತ ಮಸೀಹ" ಎಂದಾಗಿದೆ. ಮುಲ್ಲಾಗಳಿಗೆ ಜನರ ಹಿತ ಬೇಕಾಗಿರುತ್ತಿದ್ದರೆ ಅವರು ಖಂಡಿತವಾಗಿಯೂ ಹೀಗೆ ಮಾಡುತ್ತಿರಲಿಲ್ಲ. ಅವರು ಯೋಚಿಸಬೇಕಾಗಿತ್ತು. ನಾವು ಫತ್ವಾಗಳನ್ನು ಬರೆದು ಏನು ಪಡೆದಿದ್ದೇವೆ ಎಂದು. ಯಾವುದನ್ನು ಅಲ್ಲಾಹನು ಮಾಡಬಯಸುವನೋ ಅದನ್ನು ತಡೆಗಟ್ಟಲು ಯಾರಿಗೆ ಸಾಧ್ಯ? ಈ ನಮ್ಮ ವಿರೋಧಿಗಳು ಸಹ ನಮ್ಮ ಸೇವಕರಿದ್ದಂತೆ. ಪೂರ್ವ ಪಶ್ಚಿಮಗಳಿಗೆ ಹೋಗಿ ನಮ್ಮ ಸಂದೇಶ ಮುಟ್ಟಿಸುತ್ತಾರೆ. ಆಗಲೇ ನಮಗೆ ತಿಳಿದುಬರುತ್ತದೆ ಗೋಲಡ್ವಿಯಾದ ಪೀರ್ ಸಾಹೇಬರೊಬ್ಬರು ನಮ್ಮ ವಿರುದ್ಧ ಒಂದು ಗ್ರಂಥವನ್ನು ಬರೆಯಲಿಕ್ಕಿದ್ದಾರೆ ಎಂದು. ಅದರಿಂದ ನಾವು ಸಂತೋಷಪಟ್ಟೆವು. ಏಕೆಂದರೆ ಅವರ ಶಿಷ್ಯಂದರಿಗೆ ಅದರ ಸುಳಿವೇ ಇರಲಿಲ್ಲ. ಅವರ ಗಮನಕ್ಕೂ ಸಹ ಈ ವಿಷಯ ಬರುವುದು ಮತ್ತು ಅವರಿಗೆ ನಮ್ಮ ಗ್ರಂಥಗಳನ್ನು ನೊಡಲು ಒಂದು ಅವಕಾಶ ದೊರೆತಂತಾಗುತ್ತದೆ. **(ಮಲ್ಫೂಝಾತ್ ಸಂಪುಟ–1, ಪುಟ–358–360 ಮುದ್ರಣ 2018 ಖಾದಿಯಾನ್)**

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

*(ಪುಟ ಸಂಖ್ಯೆ* **01**ರ *ಉಳಿದ ಭಾಗ)*

ಅರಿಯುವವನಾದರೆ ಅವನು ಸೃಷ್ಟಿಕರ್ತನು ಆಗಿರಬೇಕಾಗುತ್ತದೆ. ಆದರೆ ಯಾರನ್ನು ನೀವು ಪೂಜಿಸುತ್ತಿದ್ದೀರಿ ಅವರು ಸೃಷ್ಟಿಕರ್ತರಲ್ಲ. ಬದಲು ಅವರೆಲ್ಲರೂ ಸ್ವಯಂ ಸೃಷ್ಟಿಯಾಗಿದ್ದಾರೆ.

ಈ ವಚನದಲ್ಲಿ ಸೂಕ್ಷ್ಮ ರೀತಿಯಲ್ಲಿ ಅಲ್ಲಾಹನ ಹೊರತು ಬೇರೆ ಅದೃಶ್ಯ ಜ್ಞಾನ ಹೊಂದಿದವರ ಕುರಿತು ಅಲ್ಲಗಳೆಯಲಾಗಿದೆ. ಆದರೆ ಆಶ್ಚರ್ಯಕರ ಮಾತೇನೆಂದರೆ, ಮುಸಲ್ಮಾನರಲ್ಲಿ ಇಂತಹ ಶಿಕ್ಷಣ ಇದ್ದಾಗಲೂ ಒಂದು ವರ್ಗದ ಜನ ಭಾವಿಸುತ್ತಾರೆ. ಹಝ್ರತ್ ಈಸಾ(ಅ) ರವರು ಅದೃಶ್ಯ ಜ್ಞಾನ ಉಳ್ಳವರಾಗಿದ್ದರು. ಅವರು ಪಕ್ಷಿಗಳನ್ನು ಸಹ ಸೃಷ್ಟಿಸುತ್ತಿದ್ದರು. ಹಾಗೆ ಇಲ್ಲಿ ಅಲ್ಲಾಹನು ಸ್ಪಷ್ಟ ರೂಪದಲ್ಲಿ ತಿಳಿಸಿರುವನು. ಅಲ್ಲಾಹನ ಹೊರತಾಗಿ ಯಾರನ್ನೆಲ್ಲ ಪೂಜಿಸಲಾಗುತ್ತದೆಯೇ ಅವರಲ್ಲಿ ಯಾರೂ ಸಹ ಸೃಷ್ಟಿಕರ್ತರಲ್ಲ ಮತ್ತು ಹಝ್ರತ್ ಈಸಾ(ಅ) ರವರು ಸಹ ಅವರಲ್ಲಿಯೇ ಒಬ್ಬರಾಗಿದ್ದಾರೆ. ಅವರನ್ನು ಲಕ್ಷಾನುಗಟ್ಟಲೆ, ಕೋಟ್ಯಾನುಗಟ್ಟಲೆ ಜನರು ಪೂಜಿಸುತ್ತಿದ್ದಾರೆ, ಸೃಷ್ಟಿಕರ್ತನಾಧವನಿಗೆ ಮಾರ್ಗದರ್ಶನ ನೀಡಲು ಅವನು ಜೀವಂತವಾಗಿರುವುದು ಅನಿವಾರ್ಯವಾಗಿರುತ್ತದೆ. ಏಕೆಂದರೆ ಯಾವಾಗಲೆಲ್ಲ ಕುಂದು ಕೊರತೆ ಉಂಟಾಗುತ್ತದೆ. ಅದನ್ನು ಸುಧಾರಿಸಬೇಕಾಗುವ ಅವಶ್ಯಕತೆಯಿರುತ್ತದೆ. ಈ ಸಾಕ್ಷ್ಯಗಳೊಂದಿಗೆ ಪೂಜಿಸಲ್ಪಡುವವರ ಮಾರ್ಗದರ್ಶ ನೀಡುವ ಶಕ್ತಿಯನ್ನು ಅಲ್ಲಗಳೆಯಲಾಗಿದೆ. ಮತ್ತು ಹೇಳಲಾಗಿದೆ. ಯಾರನ್ನೆಲ್ಲ ನೀವು ಪೂಜಿಸುತ್ತಿದ್ದೀರಿ. ಅವರೆಲ್ಲರೂ ಮರಣ ಹೊಂದಿರುವರು. ಮತ್ತವರು ಹೇಗೆ ನಿಮ್ಮ ಮಾರ್ಗದರ್ಶಕರಾಗಲು ಸಾಧ್ಯ. ಈಗ ಕಾಲಘಟ್ಟದಲ್ಲಿ ನ್ಯೂನತೆಗಳು ಉಂಟಾದರೆ ಅವರು ಹೇಗೆ ದೂರ ಮಾಡುವರು. ಆಶ್ಚರ್ಯದ ಮಾತಾಗಿದೆ. ಮುಸಲ್ಮಾನರಲ್ಲಿ ಈ ಅಧ್ಯಾಪನೆ ವಿರುದ್ಧವು ವಿಶ್ವಾಸ ಮೂಢತೊಡಗಿದೆ. ಮತ್ತು ಹೆಚ್ಚಿನವರು ಹಝ್ರತ್ ಈಸಾ(ಅ) ರವರ ಜೀವಂತಿಕೆಯನ್ನು ಸಮರ್ತಿಸುತ್ತಿದ್ದಾರೆ. ಹಾಗೆ ಅಲ್ಲಾಹನು ಹೇಳಿದನು. ಎಷ್ಟೆಲ್ಲ ಮಿಥ್ಯ ದೇವರುಗಳು ಪವಿತ್ರ ಖುರ್‌ಆನ್‌ನ ಕಾಲದಲ್ಲಿಯೂ ಇದ್ದರು. ಅವರೆಲ್ಲರೂ ಮರಣ ಹೊಂದಿದ್ದಾರೆ. ಹಾಗೆ ಕ್ರೈಸ್ತರು ಹಝ್ರತ್ ಈಸಾ(ಅ) ರನ್ನು ದೇವರೆಂದು ನಂಬುತ್ತಿದ್ದರು. ಅಲ್ಲಾಹನ ಈ ಸಾಕ್ಷ್ಯದಿಂದ ಅವರು ಪವಿತ್ರ ಖುರಆನ್ ಅವತರಣಿಯ ಮೊದಲೇ ಮರಣ ಹೊಂದಿದ್ದರು. ಅವರ ಜೀವಂತಿಕೆಯನ್ನು ನಂಬಿದರೆ ನವೂಝು ಬಿಲ್ಲಾಹ್ ಅವರು ಮಿಥ್ಯ ದೇವರುಗಳಲ್ಲಿ ಸೇರಿರಲಿಲ್ಲ ಎಂದು ನಂಬಬೇಕಾಗುತ್ತದೆ.

ಈ ಎರಡೂ ವಚನಗಳಲ್ಲಿ ಬಹುದೇವರಾಧನೆಯನ್ನು ಅತ್ಯಂತ ಪ್ರಬಲ ಸಾಕ್ಷ್ಯಗಳೊಂದಿಗೆ ನಿರಾಕರಿಸಲಾಗಿದೆ. ಮತ್ತು ಅದಕ್ಕಾಗಿ ನಾಲ್ಕು ಸಾಕ್ಷ್ಯಗಳನ್ನು ಒದಗಿಸಿಕೊಡಲಾಗಿದೆ.

1) **ಲಾ ಯಖ್‌ಲುಖೂನ** ಅವರು ಸೃಷ್ಟಿಸುವುದಿಲ್ಲ, ಅದಾಗ್ಯೂ ದೇವನಿಗೆ ಸೃಷ್ಟಿಕರ್ತನಾಗಿರುವುದು ಅವಶ್ಯವಾಗಿದೆ. ಏಕೆಂದರೆ ಪರಿಪೂರ್ಣ ಅಸ್ತಿತ್ವ ಹೊಂದಿದವನೇ ದೇವನಾಗಲು ಸಾಧ್ಯ.

2) ಅವರು ಸ್ವಯಂ ಸೃಷ್ಟಿಸಲ್ಪಟ್ಟಿದ್ದಾರೆ. ಅಂದರೆ ಅವರು ಇತರರ ಸಹಾಯಕ್ಕೆ ಬೇಡಿಕೆಯುಳ್ಳವರಾಗಿದ್ದಾರೆ. ಇತರರ ಸಹಾಯ ಬೇಕಾಗಿರುವವರು ದುರ್ಬಲರು, ಅವರು ದೇವರಾಗಲು ಸಾಧ್ಯವಿಲ್ಲ.

3) ಅವರು ಮೃತರು, ಜೀವಮತರಲ್ಲ, ಅಂದರೆ ಪ್ರಸಕ್ತ ಸಮಯಕ್ಕೆ ನಿಷ್ಪ್ರಯೋಜಕರು ನಿಷ್ಫಲರು, ಯಾವಾಗಲೂ ನಿಷ್ಪ್ರಯೋಜಕರು ನಷ್ಟವನ್ನುಂಟು ಮಾಡುವವರು ದೇವರಾಗಲು ಶಕ್ತರಲ್ಲ.

4) ಅವರಿಗೆ ನಾವು ಎಂದು ಎತ್ತಲ್ಪಡುವೆವು ಎಂಬುದು ಸಹ ಗೊತ್ತಿಲ್ಲ. ಅಂದರೆ ಅವರ ಪರಿಣಾಮವು ಸಹ ಇನ್ನೊಬ್ಬರ ಕೈಯ್ಯಲ್ಲಿದೆ. ಈ ಅಂತಿಮ ಸಾಕ್ಷ್ಯಗಳ ಬಗ್ಗೆ ಹೇಳಬಹುದಾಗಿದೆ. ಅವರಿಗೆ ನಾವು ಎಂದು ಎತ್ತಲ್ಪಡುವೆವು ಎಂಬುದರ ಅರಿವಿಲ್ಲವೆಂಬುದಕ್ಕೆ ಯಾವ ಪುರಾವೆ ಇದೆ? ಅದಕ್ಕೆ ಉತ್ತರವೆಂದರೆ ಎಲ್ಲರಿಗಿಂತ ಹೆಚ್ಚು ಪರೀಕ್ಷಿಸಲ್ಪಡುವವರೆಂದರೆ ಸ್ವಯಂ ಹಝ್ರತ್ ಮಸೀಹ್(ಅ) ಅವರ ಅಸ್ತಿತ್ವವಾಗಿದೆ. ಅವರು ಅಂತ್ಯ ದಿನದ ಬಗ್ಗೆ ಸ್ವಯಂ ಹೇಳುತ್ತಾರೆ.

ಆದರೆ ಈ ದಿನ ಅಥವ ಆ ಘಳಿಗೆಯ ಬಗ್ಗೆ ಯಾರೂ ಅರಿತಿರುವುದಿಲ್ಲ ಅವರು ದೈವಿಕ ದೇವದೂತರಾಗಲಿ, ದೇವನ ಪುತ್ರನಾಗಲಿ, ತಂದೆಯಾಗಲಿ, ಎಚ್ಚರ! ಜಾಗೃತರಾಗಿರಿ ಮತ್ತು ಪ್ರಾರ್ಥಿಸುತ್ತೀರಿ. ಏಕೆಂದರೆ ಆ ಸಮಯ ಎಂದು ಬರುವುದು ನೀವು ತಿಳಿದಿರುವುದಿಲ್ಲ.

ಆದುದರಿಂದ ಹಝ್ರತ್ ಈಸಾ(ಅ) ರವರ ಈ ಹೇಳಿಕೆಯ ಪ್ರಕಾರ ಉಳಿದ ಮಾನವರನ್ನು ದೇವರನ್ನಾಗಿಸುವವರ ಕುರಿತು ಸಹ ಅದರಲಿ ಭಾವಿಸಬಹುದಾಗಿದೆ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–151, ಮುದ್ರಣ ಖಾದಿಯಾನ್)**

*(ಪುಟ ಸಂಖ್ಯೆ* **02**ರ *ಉಳಿದ ಭಾಗ)*

ಪುಟ 205 ಟಿಪ್ಪಣಿ)

**ಕ್ರೈಸ್ತರ ಸುಧಾರಣೆಯ ದೃಷ್ಟಿಯಿಂದ ಆಗಮಿಸುವವರ ಹೆಸರು ಮಸೀಹರೆಂದು ಕರೆಯಲಾಗಿದೆ.**

ಸೈಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಹಝ್ರತ್ ರಸೂಲುಲ್ಲಾಹ್(ಸ) ರವರು ಯಾವ ಧರ್ಮ ಸುಧಾರಕರನ್ನು ತಮ್ಮ ಸಮುದಾಯದಿಂದ ಕ್ರೈಸ್ತರ ಆಕ್ರಮಣಗಳಿಂದ ರಕ್ಷಿಸಲು ಮತ್ತು ಇಸ್ಲಾಮ್ ಧರ್ಮವನ್ನು ಉದ್ಧರಿಸಲು ಬರುವರಾಗಿದ್ದರೋ. ಅವರ ಹೆಸರು ಕ್ರೈಸ್ತರ ಸುಧಾರಣೆಯ ದೃಷ್ಟಿಯಿಂದ ಮಸೀಹರಾಗುವರು ಎಂದು ಕರೆದರು. ಆದರೆ ಈ ಜನರು ತಿಳಿಸಿದ್ದೇನೆಂದರೆ ಒಂದು ಕಾಲದಲ್ಲಿ ಸ್ವಯಂ ಮಸೀಹರೇ ಆಕಾಶದಿಂದ ಇಳಿಯುವರು ಎಂದು. ಆದರೆ ಇದು ಇಂದು ಅಕ್ಷರಶ: ತಪ್ಪಾಗಿರುತ್ತದೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಜಾಣ್ಮೆಗೆ ಅದು ಅಸಮಂಜಸ ಮತ್ತು ಸಂಬಂಧರಹಿತ ಹಾಗೂ ತರ್ಕಹೀನ ಎನ್ನಬಹುದು. ಎಂದಿಗೂ ಅವರ ಆಶಯ ಹೀಗಾಗಿರಲಿಲ್ಲ. ಒಬ್ಬ ಪ್ರವಾದಿ ತನ್ನ ಜೀವಿತ ಅವಧಿಯನ್ನು ಪೂರ್ಣಗೊಳಿಸಿ ವಿಧಿಯ ಪ್ರಕಾರ ಅಲ್ಲಾಹನ ಬಳಿಗೆ ಮತ್ತು ಪರಲೋಕದೆಡೆಗೆ ಕರೆಯಲ್ಪಟ್ಟಿದೆ. ಅವರು ಮತ್ತೆ ಈ ಆಪತ್ತಿನ ಹಾಗೂ ಪರೀಕ್ಷೆಯ ಲೋಕದಲ್ಲಿ ಕಳುಹಿಸಲ್ಪಡುವರು. ಅಂತ್ಯಗೊಂಡ ಮುದ್ರಿಸಲ್ಪಟ್ಟ ಪ್ರವಾದಿತ್ವ ಲಭಿಸಿದ ನಂತರವು ಅನುಗ್ರಹಿತಗೊಂಡ ಪರಿಪೂರ್ಣಗೊಂಡ ಅಂತಿಮ ಶರೀಅತ್ ವಂಚಿತಗೊಂಡಿರುವುದರ ಬದಲು ಅತ್ಯಂತ ಮಾರ್ಮಿಕ ರೀತಿಯಲ್ಲಿ ಈ ಭವಿಷ್ಯವಾಣಿ ಮಾಡಲಾಗಿದೆ. ಒಂದು ಕಾಲ ಹೀಗೆ ಬರುವುದು. ಅದರಲ್ಲಿ ಕ್ರೈಸ್ತ ಜನರು ಸೃಷ್ಟಿ ಆರಾಧನೆಯಲ್ಲಿ ಮತ್ತು ಶಿಲುಬೆಯ ಮಿಥ್ಯ ಭಾವನೆಗಳಲ್ಲಿ ದ್ವೇಷದ ಹದ್ದು ಮೀರುವರು ಮತ್ತು ತನ್ನ ಮೋಸಗಾರಿಕೆಯಿಂದ ಚಾಣಾಕ್ಷತನದಿಂದ ಯಥಾರ್ಥತೆ ಬಿಟ್ಟು ಮಸೀಹರ ದಜ್ಜಾಲ್ ಆಗುವರು. ಆಗ ಅಲ್ಲಾಹನು ತನ್ನ ಕೃಪೆಯಿಂದ ಅವರ ಸುಧಾರಣೆಗಾಗಿ ಒಂದು ದೈವಿಕ ಮಸೀಹರಿಗೆ ಜನ್ಮ ನೀಡುವನು. ಅವನು ಪ್ರಬಲವಾದ ಸಾಕ್ಷ್ಯಗಳಿಂದ ಶಿಲುಬೆಯನ್ನು ಮುರಿದು ಹಾಕುವನು. (ಅದೇ ಪುಟ 216 ಟಿಪ್ಪಣಿ)

**ಹಝ್ರತ್ ಈಸಾ(ಅ) ಪ್ರವಾದಿತ್ವ (ನುಬುವ್ವತ್) ದಿಂದ ವಂಚಿತರಾಗಿ ಬರುವರೆಂದು ಹೇಳುವುದಾದರೆ ಅದಕ್ಕಿಂತ ನಾಚಿಕೆಗೇಡು ಮತ್ತು ಅಪಮಾನದ ಮಾತು ಇನ್ನೊಂದಿಲ್ಲ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಈ ಭವಿಷ್ಯವಾಣಿಯನ್ನು ಅರ್ಥ ಮಾಡಿಕೊಳ್ಳಲು ಬುದ್ಧಿಜಿವಿಗಳಿಗೆ ಮತ್ತು ವಿದ್ವಾಂಸರಿಗೆ ಏನೂ ಕಷ್ಟವಿರಲಿಲ್ಲ. ಏಕೆಂದರೆ ರಸೂಲೇಕರೀಂ(ಸ) ರವರ ಪವಿತ್ರ ಪದಗಳು ಎಷ್ಟೊಂದು ಸ್ಪಷ್ಟವಾಗಿದೆಯೆಂದರೆ ಸ್ವಯ ಅದರ ಅರ್ಥದೆಡೆ ಮಾರ್ಗದರ್ಶನ ನೀಡುವಂತಿದೆ. ಯಾವ ವಿಧದಲ್ಲೂ ಈ ಭವಿಷ್ಯವಾಣಿಯಲ್ಲಿ ಬನಿ ಈಸ್ರಾಯಿಲರ ಪ್ರವಾದಿ ಮರಳಿ ಇಹಲೋಕಕ್ಕೆ ಬರುವರೆಂದು ಇಲ್ಲವೇ ಇಲ್ಲ. ಹಝುರತ್ ರಸೂಲುಲ್ಲಾಹ್(ಸ) ಮತ್ತೆ ಮತ್ತೆ ಸ್ಪಷ್ಟಪಡಿಸಿದ್ದರು. ನನ್ನ ನಂತರ ಯಾವ ಪ್ರವಾದಿಯೂ ಬರುವುದಿಲ್ಲ. ಹದೀಸ್ **"ಲ ನಬಿಯ್ಯ ಬಾದಿ"** ಎಂತಹ ಪ್ರಸಿದ್ಧಗೊಂಡಿತ್ತೆಂದರೆ ಅದರಲ್ಲಿ ಯಾವ ಸಂಶಯವು ಉಳಿದಿರಲಿಲ್ಲ. ಪವಿತ್ರ ಖುರ್‌ಆನ್ ಅದರ ಒಂದೊಂದು ಅಕ್ಷರವು ಸಂಶಯರಹಿತವಾಗಿದೆ. ತನ್ನ ವಚನದಲ್ಲಿ **'ವಲಾಕಿರ್ ರಸೂಲುಲ್ಲಾಹಿ ವ ಖಾತಮುನ್ನಬಿಯೀನ್** ಸಹ ಅದನ್ನು ದೃಢಪಡಿಸುತ್ತದೆ. ಅಂದ ಮೇಲೆ ವಾಸ್ತವವಾಗಿಯೂ ನಮ್ಮ ನಬಿ(ಸ) ರವರ ಮೇಲೆ ಪ್ರವಾದಿತ್ವ ಅಂತ್ಯಗೊಂಡಿದೆ. ಹಾಗಿರುವಾಗ ಯಾವ ಒಬ್ಬ ಪ್ರವಾದಿ ವಾಸ್ತವ ರೂಪದಲ್ಲಿ ಹೇಗೆ ಹಝ್ರತ್ ರಸೂಲುಲ್ಲಾಹ್(ಸ) ರವರ ನಂತರ ಬರಲಿಕ್ಕೆ ಸಾಧ್ಯ? ಅದರಿಂದ ಇಸ್ಲಾಂ ಧರ್ಮದ ಎಲ್ಲಾ ವ್ಯವಸ್ಥೆ ಅಸ್ತವ್ಯಸ್ತಗೊಂಡಂತಾಗುತ್ತದೆ. ಹಝ್ರತ್ ಈಸಾ(ಅ) ಪ್ರವಾದಿತ್ವ (ನುಬುವ್ವತ್) ದಿಂದ ವಂಚಿತರಾಗಿ ಬರುವರು" ಎನ್ನುವುದು ಅತ್ಯಂತ ನಾಚಿಕೆಗೇಡು ಮತ್ತು ಅಪಮಾನದ ಮಾತಾಗಿದೆ. ಅಲ್ಲಾಹನಿಗೆ ಪ್ರಿಯರಾದ ಸಾನಿಧ್ಯವುಲ್ಲ ನಬಿಯವರಾದ ಹಝ್ರತ್ ಈಸಾ(ಅ) ರಂತಹವರು ತನ್ನ ಪ್ರವಾದಿತ್ವ (ನುಬುವ್ವತ್) ದಿಂದ ವಂಚಿತರಾಗಲು ಸಾಧ್ಯವೇ? ಹೀಗಿರುವಾಗ ಸ್ವಯಂ ಹಝ್ರತ್ ಈಸಾ(ಅ) ಮರಳಿ ಲೋಕಕ್ಕೆ ಬರುವ ಯಾವ ಮಾರ್ಗ ಉಳಿದಿದೆ. ಅಂತೂ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ರವರ ಹೆಸರು ಖಾತಮನ್ನಬಿಯೀನ್ ಎಂದು ಹೆಸರಿಸಿ ಮತ್ತು ಸ್ವಯಂ ಹಝ್ರತ್ ರಸೂಲುಲ್ಲಾಹ್(ಸ) **'ಲಾ ನಬಿಯ ಬಾದಿ'** ಹೇಳಿ ಈ ಕಾರ್ಯವನ್ನು ನಿರ್ಣಯಿಸಿಬಿಟ್ಟಿದ್ದರು. ಯಾವ ಪ್ರವಾದಿಯು ಸಹ ವಾಸ್ತವ ಅರ್ಥದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರ ನಂತರ ಬರಲಿಕ್ಕಿಲ್ಲ. ಈ ಮಾತನ್ನು ಮತ್ತಷ್ಟು ಸ್ಪಷ್ಟಪಡಿಸಲು ಹಝ್ರತ್ ರಸೂಲುಲ್ಲಾಹ್(ಸ) ಹೀಗೆ ಸಹ ಹೇಳಿದ್ದರು. ಆಗಮಿಸಲಿರುವ ವಾಗ್ದತ್ತ ಮಸೀಹರು ಅದೇ ಸಮುದಾಯದವನಾಗುವನು. ಹಾಗೆ ಸಹೀ ಬುಖಾರಿ ಹದೀಸಿನಲ್ಲಿ **"ಇಮಾಮುಕುಂ ಮಿನ್‌ಕುಂ"** ಮತ್ತು ಸಹೀ ಮುಸ್ಲಿಂ ಹದೀಸಿನಲ್ಲಿ **"ಫಅಮ್ಮುಕುಂ ಮಿನ್‌ಕುಂ"** ಎಂಬುದು ವಾಗ್ದತ್ತ ಮಸೀಹರ ಬಗ್ಗೆಯೇ ಆಗಿದೆ. ಅದರಿಂದ ಸ್ಪಷ್ಟವಾಗುವುದೇನೆಂದರೆ ಆಗಮಿಸುವ ಮಸೀಹರು ಅದೇ ಸಮುದಾಯದವರಾಗಿರುವರು ಎಂದು. (ಅದೇ ಪುಟ 217 ಟಿಪ್ಪಣಿ).

**ಹಝ್ರತ್ ಈಸಾ(ಅ) ಇನ್ನು ಸಹ ಮರಣ ಹೊಂದಿಲ್ಲ ಎಂದರೆ ಕ್ರೈಸ್ತರು ಸಹ ಇನ್ನು ದಾರಿ ತಪ್ಪಲಿಲ್ಲ ಎಂದು ನಂಬಬೇಕಾಗುತ್ತದೆ.**

ಸೂರ: ಅಲ್–ಮಾಯಿದ ವಚನ 118 ರಲ್ಲಿ ಹಝ್ರತ್ ಈಸ(ಅ) ರವರು ಹೇಳುತ್ತಾರೆ. ಕ್ರೈಸ್ತರು ನನ್ನ ನಿಧನದ ನಂತರ ದಾರಿ ತಪ್ಪಿಸಿರುತ್ತಾರೆ. ತಾನು ಜೀವಂತವಿರುವವರೆಗೆ ಅವರು ಸರಿಯಾದ ಮಾರ್ಗದಲ್ಲಿದ್ದರು. ಅಂದ ಮೇಲೆ ಹಝ್ರತ್ ಈಸಾ(ಅ) ಇನ್ನು ಮರಣ ಹೊಂದಿಲ್ಲ ಎಂದರೆ ಕ್ರೈಸ್ತರು

ಸಹ ಇನ್ನು ದಾರಿ ತಪ್ಪಲಿಲ್ಲ ಎಂದು ನಂಬಬೇಕಾಗುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನೊಡಿರಿ. ವಚನ **"ಫಲಮ್ಮಾ ತವಫೈತನಿ"** ಸ್ಪಷ್ಟವಾಗಿ ಹೇಳುತ್ತಿದೆ. ಹಝ್ರತ್ ಈಸಾ(ಅ) ಮೃತಪಟ್ಟಿರುವರು. ಸಹೀ ಬುಖಾರಿಯಲ್ಲಿ ಇಬ್ನು ಅಬ್ಬಾಸ್(ಅ) ರವರಿಂದ ಮತ್ತು ಪ್ರವಾದಿವರ್ಯರ ಹದೀಸ್‌ರಿಂದ ಈ ಮಾತು ದೃಢಪಟ್ಟಿದೆ. ಇಲ್ಲಿ ತವಫಾ ಎಂಬುದರ ಅರ್ಥ ಮೃತಪಟ್ಟಿರುವವರು ಎಂದಾಗಿದೆ. ಹೀಗಿರುವಾಗ ತಪಫೈತನಿ ಎಂಬ ಈ ಪದ ಭೂತಕಾಲವನ್ನು ಸೂಚಿಸುತ್ತದೆ. ವಾಸ್ತವದಲ್ಲಿ ಅದು ಭವಿಷ್ಯವನ್ನೂ ಸಹ ಅವಲಂಬಿಸಿದೆ. ಅಂದರೆ ಅವರು ಇನ್ನು ಮರಣ ಹೊಂದಿಲ್ಲ. ಬದಲು ಅಂತ್ಯಕಾಲದಲ್ಲಿ ಬಂದು ಮರಣ ಹೊಂದುವರು ಎಂಬುದು ಎಷ್ಟು ಸರಿ? ಏಕೆಂದರೆ ವಚನದ ತಾತ್ಪರ್ಯ ಎಂದರೆ ಹಝ್ರತ್ ಈಸಾ(ಅ) ಅಲ್ಲಾಹನ ಸನ್ನಿಧಿಯಲ್ಲಿ ಹೇಳುವರು. ನನ್ನ ಜನಾಂಗದ ಜನರು ನನ್ನ ಜೀವಿತದಲ್ಲಿ ದಾರಿ ತಪ್ಪಲಿಲ್ಲ. ಬದಲು ನನ್ನ ನಿಧನ ದಾರಿ ತಪ್ಪಿಸುವರು. ಒಂದು ವೇಳೆ ನಾವು ಹಝ್ರತ್ ಈಸಾ(ಅ) ಇನ್ನೂ ಸಹ ಮೃತಪಟ್ಟಿಲ್ಲ ಎಂದು ನಂಬುವುದಾರಾದರೆ ಕ್ರೈಸ್ತರು ಸಹ ಇನ್ನೂ ದಾರಿ ತಪ್ಪಲಿಲ್ಲ ಎಂದು ನಂಬಬೇಕಾಗುತ್ತದೆ. ಏಕೆಂದರೆ ಈ ವಚನದಲ್ಲಿ ಸ್ಪಷ್ಟವಾಗಿದೆ. ಕ್ರೈಸ್ತರ ದಾರಿ ತಪ್ಪುವಿಕೆ ಹಝ್ರತ್ ಈಸಾ(ಅ) ರವರ ಮರಣವನ್ನು ಅವಲಂಬಿಸಿದೆ. ಇಂತಹ ಸತ್ಯವನ್ನು ನಿರಾಕರಿಸಬೇಕೆಂದರೆ ಅದಕ್ಕಿಂತ ವಿಶ್ವಾಸಘಾತ ಇನ್ನೇನಿರಲು ಸಾಧ್ಯ (ಅದೇ ಪುಟ 219 ಟಿಪ್ಪಣಿ)

**ಹಝ್ರತ್ ಈಸಾ(ಅ) ಮೃತಪಟ್ಟಿರುವವರು ಎಂಬ ವಿಷಯದಲ್ಲಿ ಸಹಾಬರಿಗೆ ಪೂರ್ಣ ವಿಶ್ವಾಸವಿತ್ತು.**

ಸಹಜವಾಗಿ ಇಲ್ಲಿ ಒಂದು ಪ್ರಶ್ನೆ ಮೂಡಿ ಬರುತ್ತಿದೆ. ಇಂತಹ ಒಂದು ಅಲ್ಲಗಳೆಯಲಾಗದಂತಹ ವಚನವಿದ್ದು, ಅದು ಹಝ್ರತ್ ಈಸಾ(ಅ) ರವರ ಮೃತಪಟ್ಟ ಕುರಿತು ಮತ್ತು ಆಗಮಿಸುವ ಮಸೀಹರು ಅದೇ ಸಮುದಾಯದವನಾಗಿರುವನು ಎಂಬುದನ್ನು ದೃಢಪಟ್ಟರೂ ಮತ್ತೇಕೆ ಈ ಮಾತಿನ ಮೇಲೆ ಒಮ್ಮತಾಭಿಪ್ರಾಯ ಉಂಟಾಗಿದೆ. ವಾಸ್ತವವಾಗಿ ಹಝ್ರತ್ ಈಸಾ(ಅ) ಅಂತಿಮ ಕಾಲದಲ್ಲಿ ಆಕಾಶದಿಂದ ಅವತರಿಸುವರು ಎಂದು. ಅದರ ಉತ್ತರ ಹೀಗಿದೆ. ಈ ವಿಷಯದಲ್ಲಿ ಯಾವ ವ್ಯಕ್ತಿ ಒಮ್ಮತಾಭಿಪ್ರಾಯದ ದಾವೆ ಮಾಡುವನೋ ಅವನು ಅಪ್ಪಟ ಮೂಢನು ಅಥವಾ ವಂಚಕ ಸ್ವಭಾವದವನು ಹಾಗೂ ಸುಳ್ಳುಗಾರನಾಗಿರುವನು. ಏಕೆಂದರೆ ಸಹಾಬರಿಗೆ ಆ ಭವಿಷ್ಯವಾಣಿ ಕುರಿತು ವಿವರಗಳ ಅಗತ್ಯವಿರಲಿಲ್ಲ. ಅವರು ನಿಸ್ಸಂಶಯ ರೀತಿಯಲ್ಲಿ **"ಫಲಮ್ಮಾ ತಮಾಫೈತನಿ"** ವಚನದ ಮೇಲೆ ವಿಶ್ವಾಸ ಹೊಂದಿದ್ದರು. ಅಂದರೆ ಹಝ್ರತ್ ಈಸಾ(ಅ) ಮೃತಪಟ್ಟಿರುವವರು ಎಂದು. ಆಗ ಹಝ್ರತ್ ಅಬೂಬಕರ್(ರ) ನಬಿವರ್ಯರ(ಸ) ನಿಧನಗೊಂಡ ಸಮಯದಲ್ಲಿ ಕೆಲವರಿಗೆ ಹಝುರತ್ ರಸೂಲುಲ್ಲಾಹ್(ಸ) ರವರ ನಿಧನಗೊಂಡ ವಿಷಯದಲ್ಲಿ ಸಂಶಯವಿದೆ ಎಂದು ಭಾವಿಸಿ ಬಲವಾಗಿ ಪ್ರತಿಪಾದಿಸಿದರು. ಯಾವ ಪ್ರವಾದಿಯೂ ಜೀವಂತವಾಗಿ ಉಳಿದಿಲ್ಲ ಎಲ್ಲರೂ ಮೃತಪಟ್ಟಿರುವವರು. ಈ ವಚನವನ್ನು ಸಹ ಆ ಸಂದರ್ಭದಲ್ಲಿ ಪಠಿಸಿದರು. **"ಖದ್ ಖಲತ್ ಮಿನ್ ಖಬ್ಲಿಹಿರ್-ರುಸೂಲಿ"** ಯಾರೂ ಸಹ ಈ ಮಾತನ್ನು ನಿರಾಕರಿಸಲಿಲ್ಲ. ಅದಲ್ಲದೇ ಇಮಾಮ್ ಮಲ್ಲಿಕ್ ರಂತಹ ಮಹಾತ್ಮರು, ಹದೀಸ್ ಖುರ್‌ಅನ್‌ನ ಮಹಾಪಂಡಿತರು, ಭಯಭಕ್ತಿಯುಳ್ಳಯವರು ಈ ಮಾತನ್ನು ಒಪ್ಪುವರಾಗಿದ್ದರು. ಹಝ್ರತ್ ಈಸಾ(ಅ) ಮೃತಪಟ್ಟಿರುವರು. ಅಂತೆಯೇ ಇಮಾಮ್ ಇಬ್ನುಹಜಮ್ ಅವರ ಪ್ರತಾಪ ಘನತೆ ಹೇಳಬೇಕಾಗಲಿಲ್ಲ. ಅವರು ಸಹ ಮಸೀಹರ ಮೃತಪಡುವಿಕೆಯನ್ನು ನಂಬುತ್ತಿದ್ದರು. ಹಾಗೆಯೇ ಇಮಾಮ್ ಬುಖಾರಿ ಅವರ ಗ್ರಂಥ ಪವಿತ್ರ ಖುರಆನ್‌ನ ನಂತರ ಅದುವೇ ನಂಬಲರ್ಹ ಗ್ರಂಥ ಎಂದು ಮಾನ್ಯತೆ ಪಡೆದಿದೆ. ಅವರೂ ಸಹ ಮಸೀಹರು ಮೃತಪಟ್ಟಿರುವವರು ಎಂದು ಒಪ್ಪುತ್ತಾರೆ. ಅಂತೆಯೇ ಮಹಾಪಂಡಿತರು, ಹದೀಸಿನ ವ್ಯಾಖ್ಯಾನಗಾರರು ಇಬ್ನು ತೈಮಿಯ ಹಾಗೂ ಇಬ್ನು ಖಯ್ಯುಮ್ ಅವರುಗಳು ತಮ್ಮ ತಮ್ಮ ಕಾಲಘಟ್ಟಗಳ ಇಮಾಮರಾಗಿದ್ದರು. ಹಝ್ರತ್ ಈಸಾ(ಅ) ರವರ ಮೃತಪಡುವಿಕೆಯನ್ನು ನಂಬುವವರಾಗಿದ್ದಾರೆ. ಹಾಗೆಯೇ ನಂತರ ಸರದಾರರು ಎನಿಸಿಕೊಂಡವರಾದ ಶೇಖ್ ಮುಹಿಯುದ್ದೀನ್ ಇಬ್ನುಲ್ ಅರಬಿ ಸ್ಪಷ್ಟವಾದ ಪದಗಳಲ್ಲಿ ತನ್ನ ವ್ಯಾಖ್ಯಾನದಲ್ಲಿ ಹಝ್ರತ್ ಈಸಾ(ಅ) ಮೃತಪಟ್ಟ ಬಗ್ಗೆ ಪ್ರಸ್ತಾಪಿಸುತ್ತಾರೆ. ಅದಲ್ಲದೆ ಇನ್ನು ಹಲವು ವಿದ್ವಾಂಸರು, ಮಹಾತ್ಮರುಗಳು, ಸಾಕ್ಷ್ಯ ನೀಡುತ್ತಾ ಬಂದಿದ್ದಾರೆ ಮತ್ತು ಮೊತಝಿಲ ಪಂಥದ ಎಲ್ಲಾ ಮಹಾತ್ಮರುಗಳು ಹಾಗೂ ಇಮಾಮರು ಸಹ ಅದೇ ನಿಲುವು ಹೊಂದಿದ್ದಾರೆ. ಹೀಗಿರುವಾಗ ಎದೆಂತಹ ಅಪವಾದದ ವಿಷಯವಾಗಿದೆ. ಹಝ್ರತ್ ಈಸಾ(ಅ) ಜೀವಂತ ಆಕಾಶದಲ್ಲಿ ಹೇಗಿರುವರು ಎನ್ನುವುದು ಮತ್ತೆ ಮರಳಿ ಬರುವುದು ಎನ್ನುವುದು ಮತ್ತು ಅದು ಒಮ್ಮತಾಭಿಪ್ರಾಯದ ವಿಶ್ವಾಸ ಆಗಿದೆ ಎನ್ನುವುದು. ಆ ಜನರ ಈ ವಿಶ್ವಾಸ ಒಪ್ಪಿದರೆ–ಹಝ್ರತ್ ಈಸಾ(ಅ) ಜೀವಂತ ಆಕಾಶಕ್ಕೆ ಎತ್ತಲ್ಪಟ್ಟರು ಮತ್ತು ಅವರೇ ಒಂದು ಸಮಯದಲ್ಲಿ ಮರಳಿ ಬರುವವರು ಎನ್ನುವುದು ಪವಿತ್ರ ಖುರ್‌ಆನ್ ನಾಲ್ಕು ಸ್ಥಳಗಳಲ್ಲಿ ಅದನ್ನು ವಿರೋಧಿಸುತ್ತದೆ. ಮೊದಲಾಗಿ ಹೇಳಬೇಕಾದರೆ ಖುರ್‌ಆನ್ ಸ್ಪಷ್ಟವಾಗಿ ತಿಳಿಸುತ್ತದೆ. ಹಝ್ರತ್ ಈಸಾ(ಅ) ಮೃತಪಟ್ಟಿರುವವರು ಎಂದು. ಆದರೆ ಈ ಜನರು ಅವರ ಜೀವಂತಿಕೆಯನ್ನು ನಂಬುತ್ತಾರೆ. ಎರಡನೆಯದಾಗಿ ಪವಿತ್ರ ಖುರ್‌ಆನ್ ನಿಚ್ಚಳವಾದ ಪದಗಳಲ್ಲಿ ಹೇಳುತ್ತದೆ. ಯಾವ ಮನುಷ್ಯ ಜೀವಿಯೂ ಭೂಮಿಯ ಹೊರತಾಗಿ ಜೀವಿಸಲು ಸಾಧ್ಯವಿಲ್ಲ. ಆ ವಚನ ಹೀಗಿದೆ. **"ಫೀಹಾ ತಹಮೌನ ವ ಫೀಹಾ ತಮೂತೂನ ವ ಮಿನ್‌ಹಾ ತುಖ್‌ರಿಜೂನ್"** ಅಂದರೆ ನೀವು ಅದೆ ಭೂಮಿಯಲ್ಲಿ ಜೀವಿಸುವಿರಿ ಮತ್ತು ಅದೇ ಭೂಮಿಯಲ್ಲಿ ಮರಣ ಹೊಂದಿರುವಿರಿ ಮತ್ತು ಭೂಮಿಯಿಂದಲೇ ಎತ್ತಲ್ಪಡುವಿರಿ. ಆದರೆ ಈ ಜನರು ಹೇಳುವುದು. ಅಲ್ಲ ಈ ಭೂಮಿಯಿಂದ ಮತ್ತು ವಾಯುಮಂಡಲದ ಹೊರತಾಗಿಯೂ ಮನುಷ್ಯನು ಜೀವಿಸಬಲ್ಲನು ಎಂದು. "ಹಝ್ರತ್ ಈಸಾ(ಅ) ರವರು ಹತ್ತೊಂಬತ್ತು ನೂರು ವರ್ಷಗಳಿಂದ ಅಕಾಶದ ಮೇಲೆ ಜೀವಂತವಿದ್ದಂತೆ." ಆದರೆ ಖುರ್‌ಆನ್‌ನ ಪ್ರಕಾರ ಮನುಷ್ಯನಿಗೆ ಭೂಮಿಯ ಮೇಲೆ ಹೊರತು ಎಲ್ಲೂ ಜೀವಿಸಲು ಸಾಧ್ಯವಿಲ್ಲ. ಭೂಮಿಯ ಮೇಲೆ ಜೀವಿಸಲು ಎಲ್ಲಾ ರೀತಿಯ ಅಗತ್ಯಗಳು ಇರುವಾಗಲೂ ಒಬ್ಬ ವ್ಯಕ್ತಿಗೆ ಹತ್ತೊಂಬತ್ತು ನೂರು ವರ್ಷಗಳು ಜೀವಿಸಲು ಸಾಧ್ಯವಿಲ್ಲದಿದ್ದಾಗ ಆಕಾಶದ ಮೇಲೆ ಹತ್ತೊಂಭತ್ತು ನೂರು ವರ್ಷಗಳು ಇದು ಎಷ್ಟೊಂದು ಒಂದು ತರ್ಕಬದ್ಧ ವಿಷಯವನ್ನು ವಿರೋಧಿಸುವ ಮಾತಾಗಿದೆ, ನಮ್ಮ ವಿರೋಧಿಗಳು ಅನಾವಶ್ಯಕವಾಗಿ ಖುರ್‌ಆನ್‌ಗೆ ವಿರುದ್ಧವಾದ ನಿಲುವಿಗೆ ಅಂಟಿಕೊಂಡಿದ್ದಾರೆ. ಮೂರನೆಯದಾಗಿ ಖುರ್‌ಆನ್ ಸ್ಪಷ್ಟವಾಗಿ ತಿಳಿಸುತ್ತದೆ. ಒಬ್ಬ ಮನುಷ್ಯನು ಆಕಾಶಕ್ಕೆ ಆರೋಹಣ ಮಾಡುವುದು ಅಲ್ಲಾಹನ ನಿಯಮಕ್ಕೆ ವಿರುದ್ಧವಾಗಿದೆ. ಈ ಪೈಕಿಯ ವಚನ ಹೀಗಿದೆ. **"ಖುಲ್ ಸುಬ್ಹಾನರಬ್ಬಿ ಹಲ್ ಕುಂತು ಇಲ್ಲಾ ಬಶರರ್ ರಸಶೂಂ"** ಆದರೆ ನಮ್ಮ ವಿರೋಧಿಗಳು ಹಝ್ರತ್ ಈಸಾ(ಅ) ರವರನ್ನು ಶರೀರ ಸಮೇತ ಆಕಾಸಕ್ಕೆ ಏರಿಸುತ್ತಾರೆ. ನಾಲ್ಕನೆಯದಾಗಿ ಖುರ್‌ಆನ್ ಹೇಳುತ್ತದೆ. ಹಝ್ರತ್ ರಸೂಲುಲ್ಲಾಹ್(ಸ) ರವರು ಖಾತಮನ್ನಭಿಯೀನ್ ಆಗಿದ್ದಾರೆ. ಆದರೆ ನಮ್ಮ ವಿರೋಧಿಗಳು ಹೇಳುವುದು. ಹಝ್ರತ್ ಈಸಾ(ಅ) ರವರು ಖಾತಮನ್ನಬಿಯೀನ್ ಆಗಿರುವವರು ಎಂದು. (ಅದೇ ಪುಟ 220 ಟಿಪ್ಪಣಿ).

**ಇಪ್ಪತ್ತು ಸಾವಿರ ರೂಪಾಯಿಗಳ ವೈಭವಯುತ ಬಹುಮಾನದ ಪಂಥಹ್ವಾನ**

ಒಟ್ಟಾರೆಯಾಗಿ ಈ ಜನರು ಈ ವಿಶ್ವಾಸದಿಂದಾಗಿ ಪವಿತ್ರ ಖುರ್‌ಆನ್ ಅನ್ನು ನಾಲ್ಕು ರೀತಿಯಲ್ಲಿ ವಿರೋಧಿಸಿದಂತಾಗಿದೆ. ಹಝ್ರತ್ ಈಸಾ(ಅ) ರವರು ತನ್ನ ಶರೀರ ಸಮೇತ ಆಕಾಶಕ್ಕೆ ಎತ್ತಲ್ಪಟ್ಟರು ಎಂಬುದಕ್ಕೆ ನಿಮ್ಮ ಬಳಿ ಯಾವ ಪುರಾವೆ ಇದೆ ಎಂದು ಕೇಳಿದಿರಿ. ಯಾವ ವಚನವನ್ನು ಸಹ ಪ್ರಸ್ತುತಪಡಿಸಲು ಸಾಧ್ಯವಿಲ್ಲ. ಮತ್ತು ಯಾವ ಹದೀಸು ಸಹ ಪ್ರಸ್ತುತಪಡಿಸಲು ಸಾಧ್ಯವಿಲ್ಲ. ಕೇವಲ "ನುಝೂಲ್" (ಅವತರಿಸುವರು) ಎಂಬ ಪದದೊಂದಿಗೆ ತನ್ನ ಕಡೆಯಿಂದ ಆಕಾಶ ಪದವನ್ನು ಸೇರಿಸಿ ಜನರಿಗೆ ಮೋಸಗೊಳಿಸುತ್ತಿದ್ದಾರೆ. ಆದರೆ ನೆನಪಿಡಲಿ. ಯಾವ ದುರ್ಬಲ ಹದೀಸಿನಿಂದಲು ಸಹ ಆಕಾಶ ಪದವನ್ನು ತೋರಿಸಲು ಸಾಧ್ಯವಿಲ್ಲ. "ನುಝೂಲ್" ಎಂಬ ಪದ ನುಡಿಗಟ್ಟು ರೂಪದಲ್ಲಿ ಅರಬರಲ್ಲಿ ಪ್ರವಾಸಿಗೆ ಹೇಳುತ್ತಾರೆ. ನುಝೂಲ್ ಪ್ರಯಾಣಿಕನಿಗೆ ಹೇಳುತ್ತಾರೆ. ಹಾಗೆ ನಮ್ಮ ದೇಶದಲ್ಲೂ ಅದೇ ನುಡಿಗಟ್ಟು ಸಾಹಿತ್ಯ ರೂಪದಲ್ಲಿ ಬೇರೆ ನಗರದಿಂದ ಬರುವವರಿಗೆ ಹೇಳುತ್ತಾರೆ. ನೀವು ಎಲ್ಲಿಂದ ಬಂದಿದ್ದೀರಿ? ಹಾಗೆ ಹೇಳುವಾಗ ಯಾರೊಬ್ಬನಿಗೂ ಸಹ ಈ ವ್ಯಕ್ತಿ ಆಕಾಶದಿಂದ ಅವತರಿಸಿದನು ಎಂದು ಕಲ್ಪನೆಗೂ ಸಹ ಬರುವುದಿಲ್ಲ. ಇಸ್ಲಾಮಿನ ಎಲ್ಲಾ ಪಂಥಗಳ ಹದೀಸಿನ ಗ್ರಂಥಗಳನ್ನು ಹುಡುಕಿ ನೋಡಿ, ಸಹೀ ಹದೀಸ್ ಒಂದೆಡೆ ಇರಲಿ, ಯಾವ ದುರ್ಬಲ ಹದೀಸಿನಿಂದಲೂ, ಹಝ್ರತ್ ಈಸಾ(ಅ) ಶರೀರದೊಂದಿಗೆ ಆಕಾಶದ ಮೇಲೆ ಹೋಗಿರುವವರು ಎಂದೂ ಮತ್ತು ಒಂದು ಕಾಲದಲ್ಲಿ ಭೂಮಿಗೆ ಮರಳುವವರು ಎಂದು ಕಾಣಲಾರಿರಿ. ಅಂತಹ ಹದೀಸೆನಾದರೂ ಇದ್ದರೆ ಪ್ರಸ್ತುತಪಡಿಸಿ, ನಾವು ಅಂತಹ ವ್ಯಕ್ತಿಗೆ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ಬಹುಮಾನ ನೀಡುವೆವು. ಅದಲ್ಲದೇ ಪಶ್ಚಾತ್ತಾಪಪಡುವುದು ಮತ್ತು ತಮ್ಮ ಗ್ರಂಥಗಳನ್ನು ಸುಟ್ಟು ಹಾಕುವುದು ಬೇರೆಯಾಗಿರುತ್ತದೆ. ಯಾವ ರೀತಿ ಬೇಕಾದರೂ ಖಾತರಿಪಡಿಸಿಕೊಳ್ಳಿ. (ಅದೇ ಪುಟ 225 ಟಿಪ್ಪಣಿ).

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.03, Thursday, 07 April 2022, Issue No. 14

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

9 ಜೂನ್ 2015 ಸೋಮವಾರ (ಶೇಷ ವರದಿ)

**"ಮಸ್ಜಿದ್ ಬೈತುಸ್ಸಲಾಂ" ಅಡಿಗಲ್ಲು ಸಮಾರಂಭದ ಸಂದರ್ಭ ಹುಝೂರ್ ಅನ್ವರ್‌ರವರ ಭಾಷಣದ ಬಗ್ಗೆ ಅತಿಥಿಗಳ ಅನಿಸಿಕೆಗಳು**

* ಈ ಮಸ್ಜಿದ್ ಬೈತುಸ್ಸಲಾಂ ಅಡಿಗಲ್ಲು ಸಮಾರಂಭದ ಸಂದರ್ಭದಲ್ಲಿ ಹುಝೂರ್ ಅನ್ವರ್ ಮಾಡಿದ ಭಾಷಣ ಅತಿಥಿಗಳ ಮೇಲೆ ತುಂಬಾ ಪ್ರಭಾವ ಬೀರಿತು. ಕೆಲವರು ಬಿಚ್ಚು ಮನಸ್ಸಿನಿಂದ ತಮ್ಮ ಪ್ರತಿಕ್ರಿಯೆಗಳನ್ನು ನೀಡಿದ್ದಾರೆ.

* ಓರ್ವ ಮಹನಿಯರು ಹೇಳುತ್ತಾರೆ. ಹುಝೂರ್ ಅನ್ವರ್ ಅವರ ವ್ಯಕ್ತಿತ್ವ ತುಂಬಾ ಸಕಾರಾತ್ಮಕವಾಗಿದೆ. ನಾನು ಅವರ ವ್ಯಕ್ತಿತ್ವದಿಂದ ತುಂಬಾ ಪ್ರಭಾವಿತನಾಗಿದ್ದೇನೆ. ಅವರು ಓರ್ವ ಶಾಂತಿಪ್ರಿಯ ವ್ಯಕ್ತಿಯಾಗಿದ್ದಾರೆ. ಎಲ್ಲರೊಂದಿಗೆ ಕನಿಷ್ಠ ಸಂಬಂಧ ಹೊಂದಿದವರ ಹಾಗೆ ಕಾಣುತ್ತಾರೆ. ಯಾವ ಜನರು ಇಸ್ಲಾಮ್ ಧರ್ಮದೊಂದಿಗೆ ದ್ವೇಷ ಹೊಂದಿದ್ದಾರೆ. ಅವರು ಈ ಮೂರ್ಖತನವನ್ನು ತ್ಯಜಿಸಬೇಕಾದರೆ ಯಾವ ಮಾಹಿತಿಯಿಲ್ಲದೇ ಯಾರ ಬಗ್ಗೆಯೂ ತಪ್ಪು ಕಲ್ಪನೆ ಹೊಂದುವುದಾಗಲಿ, ಯಾರನ್ನು ದ್ವೇಷಿಸುವುದು ಒಳ್ಳೆಯದಲ್ಲ.

* ಇನ್ನೊಬ್ಬ ಮಹನಿಯರು ಹೇಳಿದರು. ಹುಝೂರ್ ಅನ್ವರ್ ಅವರ ವ್ಯಕ್ತಿತ್ವದಿಂದ ತುಂಬಾ ಪ್ರಭಾವಿತನಾಗಿದ್ದೇನೆ. ಅವರ ವ್ಯಕ್ತಿತ್ವವು ತುಂಬಾ ಸಕಾರಾತ್ಮಕವಾಗಿದೆ. ಆದರೆ ನಾನು ಹೇಳಬಯಸುವುದೇನೆಂದರೆ ನನಗೆ ಎಂದೂ ಇಸ್ಲಾಂ ಧರ್ಮ ಒಂದು ಸಮಸ್ಯೆಯಾಗಿ ಕಂಡುಬಂದಿಲ್ಲ. ನಿಮ್ಮ ಧ್ಯೇಯ "ಪ್ರೀತಿ ಎಲ್ಲರೊಂದಿಗೆ ದ್ವೇಷವಿಲ್ಲ ಯಾರೊಂದಿಗೂ" ಬಹುಮುಖ್ಯ ಸಂದೇಶವಾಗಿದೆ.

* ಸ್ಥಳೀಯ ಆಸ್ಪತ್ರೆಯ CEO ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತ ಹೇಳಿದರು. ಹುಝೂರ್ ಅವರ ವ್ಯಕ್ತಿತ್ವ ಅತ್ಯಂತ ಸಕಾರಾತ್ಮಕವಾಗಿದೆ. ಅದರಿಂದ ಮನುಷ್ಯರೊಂದಿಗಿರುವ ಅವರ ನಿಕಟ ಸಂಬಂಧ ವ್ಯಕ್ತವಾಗುತ್ತದೆ. ಅವರು ಮೂಡಿಸಿದ ಇಸ್ಲಾಮಿ ಶಿಕ್ಷಣ ಮಾಧ್ಯಮಗಳು ಪ್ರಸ್ತುತಪಡಿಸುವ ಇಸ್ಲಾಮ್ ಧರ್ಮಕ್ಕಿಂತ ತದ್ವಿರುದ್ಧವಾಗಿದೆ ನನಗೆ ಹುಝೂರ್ ಅನ್ವರ್ ಅವರ ಭಾಷಣದಲ್ಲಿ ವಿಶೇಷವಾಗಿ ಎರಡು ಮಾತುಗಳು ತುಂಬಾ ಹಿತಕರ ಎನಿಸಿತು. ಇಲ್ಲಿ ವಾಸಿಸುವ ಎಲ್ಲಾ ಮುಸ್ಲಿಮರು ಮತ್ತು ಕ್ರೈಸ್ತರು ಮುಂತಾದವರು ಜರ್ಮನರಾಗಿದ್ದಾರೆ. ಅವರಲ್ಲಿ ಯಾವ ತಾರತಮ್ಯವು ಇಲ್ಲ. ಎರಡನೆಯ ವಿಷಯವೆಂದರೆ ಎಲ್ಲಿಯವರೆಗೆ ಮೊದಲ ಭಾಗವಾದ ಮನುಷ್ಯರೊಂದಿಗಿನ ಸಂಬಂಧ'ಗಳನ್ನು ಸರಿಪಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಎರಡನೆಯ ಭಾಗವಾದ ಅಂದರೆ ಅಲ್ಲಾಹನೊಂದಿಗಿರುವ ಸಂಬಂಧ ಮತ್ತು ಅವನ ಆರಾಧನೆಗಳ ಯಾವ ಪ್ರಯೋಜನವೂ ಇಲ್ಲ.

* ಇನ್ನೋರ್ವ ಮಿತ್ರರು Muhs Joseph ಹೇಳಿದರು. ಹುಝೂರ್ ಅವರ ವ್ಯಕ್ತಿತ್ವ ಅತ್ಯಂತ ಶಾಂತಿ ಪ್ರಿಯ ಹಾಗೂ ಗೌರವಪೂರ್ಣವಾಗಿರುತ್ತದೆ. ನನಗೆ ಈ ಮಾತು ತುಂಬಾ ಮೆಚ್ಚುಗೆಯಾಯಿತು. ನೀವು ನಿಮ್ಮ ಖಲೀಫರಿಗೆ ಬಹಳಷ್ಟು ಗೌರವ ನೀಡುತ್ತಿದ್ದೀರಿ. ಹುಝೂರ್‌ರ ಭಾಷಣದಲ್ಲಿ ನನಗೆ ತುಂಬಾ ಮೆಚ್ಚುಗೆಯಾದ ವಿಚಾರವೆಂದರೆ ಈ ಕ್ಷೇತ್ರ ಸುಂದರವಾಗಿ ಇದ್ದೇ ಇದೆ. ಆದರೆ ಸ್ವಯಂ ಸುಂದರವಾದ ಮನುಷ್ಯರಾಗಿ ಈ ಕ್ಷೇತ್ರವನ್ನು ಇನ್ನಷ್ಟು ಸುಂದರಗೊಳಿಸಬೇಕು ಮತ್ತು ಈ ಕ್ಷೇತ್ರದ ಅಭಿವೃದ್ಧಿಗಾಗಿ ದುಡಿಯುವ ವ್ಯಕ್ತಿಯಾಗಿರಬೇಕು.

* ಅದೇ ರೀತಿ ಮಹಿಳೆಯೋರ್ವರಾದ Brigitte ಸಾಹಿಬಾ ಹೇಳಿದರು. ನಿಮ್ಮ ಅಸಿತ್ವ, ಪೋಪ್ ರೀತಿಯ ಅಂದರೆ ಧಾರ್ಮಿಕ ನೇತಾರರ ಹಾಗೆ ಕಂಡುಬರುತ್ತದೆ. ನಿಮ್ಮೊಳಗೆ ಅಸಮಾನ್ಯ ಶಕ್ತಿ ಮತ್ತು ಸೆಳೆಯುವ ಶಕ್ತಿ ಇದೆ ಮತ್ತು ಅಲ್ಲಾಹನೊಂದಿಗೆ ಒಂದು ವಿಶೇಷ ರೀತಿಯ ಸಂಬಂಧ ಹೊಂದಿರುವಂತೆ ಭಾಸವಾಗುತ್ತದೆ. ನೀವು ಭಾಷಣದಲ್ಲಿ ತಿಳಿಸಿದ ಆಂತರಿಕ ಸೌಂದರ್ಯವು ಬಾಹ್ಯ ಸೌಂದರ್ಯಕ್ಕಿಂತ ಯಥಾರ್ಥ ಸೌಂದರ್ಯವಾಗಿದೆ ಎಂಬ ಮಾತು ಮೆಚ್ಚುಗೆಯಾಯಿತು.

* ನಗರದ Integration ಆಫೀಸಿನ ಸದಸ್ಯರು Enbill Emen ಸಾಹಿಬಾ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಈ ಸಮಾರಂಭವು ತುಂಬಾ ಯಶಸ್ವಿಯಾಗಿದೆ. ನನಗೆ ಇಂದು ತಿಳಿಯಿತು. ಹಸ್ತಲಾಘವ ಮಾಡದಿದ್ದರೂ ಸಹ ಸಮಾಜದಲ್ಲಿ ಉತ್ತಮ ನಡತೆಯಿಂದ ಸಹಕಾರದೊಂದಿಗೆ ನಡೆಯುವ ಅಗತ್ಯವಾಗಿದೆ. ಹುಝೂರ್ ಅನ್ವರ್ ಅವರ ವ್ಯಕ್ತಿತ್ವ ತುಂಬಾ ಕರುಣಾಮಯಯವಾಗಿದೆ. ಅವರ ಪದಗಳು ಉನ್ನತ ಮಟ್ಟದ್ದಾಗಿವೆ. ವಿಶೇಷವಾಗಿ ಆಂತರಿಕ ಸೌಂದರ್ಯ ಕುರಿತು ಓರ್ವ ಮಹಿಳೆ ಹಾಗೂ ಓರ್ವ ಪುರುಷ ಪೋಲೀಸ್ ಅಧಿಕಾರಿ ಸಹ ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಅವರು ತಮ್ಮ ಅನಿಸಿಕೆಗಳನ್ನು ಹೀಗೆ ಹೊರಹಾಕಿದರು.

* ನಮಗೆ ತುಂಬಾ ಮೆಚ್ಚುಗೆಯಾದ ವಿಷವೇನೆಂದರೆ. ಹುಝೂರ್ ಅನ್ವರ್ ಕುಳಿತುಕೊಂಡಲ್ಲಿಯೇ ಇತರರ ಭಾಷಣದ ಟಿಪ್ಪಣಿ ಬರೆದುಕೊಳ್ಳುತ್ತಿದ್ದರು ಮತ್ತು ಅದೇ ವಿಷಯಗಳ ಆಧಾರದಲ್ಲಿ ಸಂಬೋಧಿಸುತ್ತಿದ್ದರು. ಇಲ್ಲಿಯ ಭಾಷಣಕಾರರ ವಿಷಯಗಳ ಟಿಪ್ಪಣಿ ಬರೆದುಕೊಂಡು ಇಸ್ಲಾಮಿನ ಸುಂದರವದ ಶಿಕ್ಷಣ ಕುರಿತು ವಿವರಣೆ ನೀಡುತ್ತಿದ್ದರು. ಅದೇ ಯಥಾರ್ಥ Integration ಆಗಿದೆ.

* ಮಹಿಳಾ ಪೋಲೀಸ್ ಅಧಿಕಾರಿ ಹೇಳಿದರು. ನಾವು ನೋಡುವಂತಹ ಇಸ್ಲಾಮಿನಲ್ಲಿ ಉಗ್ರವಾದ ಕಂಡುಬರುತ್ತದೆ. ಆದರೆ ನಾವು ಖಲೀಫತುಲ್ ಮಸೀಹ್‌ರವರ ಇಸ್ಲಾಮಿನ ಕುರಿತ ಮಾತುಗಳನ್ನು ಕೇಳಿದಾಗ ಅದೇ ಯಥಾರ್ಥವಾಗಿದೆ ಎಂದೆನಿಸುತ್ತದೆ. ನಿಶ್ಚಿತವಾಗಿಯೂ ಈ ಇಸ್ಲಾಮ್ ಅತಿವೇಗವಾಗಿ ಹರಡುವುದು. ಈ ಇಸ್ಲಾಮಿನ ಕುರಿತು ಯಾರ ಮನಸ್ಸಿನಲ್ಲಿಯೂ ಸಂಶಯಗಳು ಬರಲಿಕ್ಕಿಲ್ಲ.

* ವಯಸ್ಕ ಮನುಷ್ಯ Pirates party ಯ ಸದಸ್ಯರು ಅವರು ಆ ಪಕ್ಷದ ಪ್ರಭಾವಿ ಸದಸ್ಯರು ತುಂಬಾ ಪ್ರಭಾವಿತರು ಆಗಿರುವರು. ಅವರು ಹೇಳಿದರು. ಹುಝೂರ್ ಅನ್ವರ್ ಅವರ ಮುಖದ ಮೇಲೆ ಒಂದು ವಿಶೇಷ ರೀತಿಯ ತೃಪ್ತಿ ಭಾವನೆ ಹಾಗೂ ನೆಮ್ಮದಿ ಕಂಡುಬರುತ್ತದೆ. ಅವರ ಭಾಷಣ ಅತ್ಯುತ್ತಮವಾಗಿತ್ತು.

* ಮಿತ್ರರೊಬ್ಬರು ಅವರು ವಯಸ್ಕ ಆಶ್ರಮದಲ್ಲಿರುತ್ತಿದ್ದರು ತುರ್ಕಿ ಜಮಾಅತ್‌ನ್ನು ಸಹ ತಿಳಿಯುತ್ತಿದ್ದರು. ಅವರು ಹೇಳಿದರು. ತುರ್ಕರು ಸದಾಕಾಲಕ್ಕೂ ಅಹ್ಮದಿಯಾ ಜಮಾಅತಿನ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಈ ಸಮಾರಂಭದಲ್ಲಿ ಅವರು ಪಾಲ್ಗೊಂಡಿದ್ದಾರೆ ಮತ್ತು ಖಲೀಫರ ಭಾಷಣವನ್ನು ಆಲಿಸಿದ್ದಾರೆ. ನಾನು ಈ ಭಾಷಣದಿಂದ ತುಂಬಾ ಪ್ರಭಾವಿತನಾಗಿದ್ದೇನೆ. ಖಲೀಫರ ಈ ಮಾತು ನನಗೆ ತುಂಬಾ ಮೆಚ್ಚುಗೆಯಾಯಿತು. ಮಾನವೀಯತೆಗೋಸ್ಕರ ನಾವೆಲ್ಲರೂ ಒಂದು ಸಮುದಾಯರಂತೆ ಕೂಡಿ ಕೆಲಸ ಮಾಡೋಣ.

* ಒಂದು ತತ್ವದ ಸದಸ್ಯರು ಹೇಳಿದರು. ಯಾವ ರೀತಿಯಲ್ಲಿ ಸ್ವಯಂ ಸೇವಕರಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಪಕ್ಷದ ದೊಡ್ಡ ದೊಡ್ಡ ವ್ಯಕ್ತಿದಾರರು ಸಹ ಇಂತಹ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲಿಕ್ಕಿಲ್ಲ.

* ಅದೇ ರೀತಿ ಈ ಸಮಾರಂಭದಲ್ಲಿ ಭಾಗವಹಿಸಿದ ಹೆಚ್ಚಿನ ಜನರು ಈ ಕಾರ್ಯಕ್ರಮಗಳ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

**(ಮುಂದುವರಿಯುವುದು)**

**MUSLIM TELEVISION AHMADIYYA INTERNATIONAL**
**www.mta.tv**

ಇನ್ಸಾನಿಯತ್ ಝಿಂದಾಬಾದ್
ಮಾನವೀಯತೆ ಚಿರಕಾಲ ಬಾಳಲಿ

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE : 1800–103–2131**
ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ
(ಶುಕ್ರವಾರ ರಜೆ)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.